epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237 ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ KARNATAKA MALLA, MUMBAI

ಸಂಪುಟ : 34 ಸಂಚಿಕೆ : 255 ಶುಕ್ರವಾರ 17-10-2025 ಬೆಲೆ : ₹ 5 ಪುಟಗಳು - 10 ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ


















ಟೀಮ್ ಯುವ ಬ್ರಿಗೇಡ್ ಮೀರಾ-ಭಾಯಂದರ್ ವತಿಯಿಂದ ಪ್ರಖರ ಹಿಂದುತ್ವವಾದಿ ಮಹೇಶ್ ಶೆಟ್ಟಿ ತೆಳ್ಳಾರು ಕುಡುಪುಲಾಜೆ ಮಾರ್ಗದರ್ಶನದಲ್ಲಿ, ಬಿಜೆಪಿ ನಾಯಕ ಸಚ್ಚಿದಾನಂದ ಶೆಟ್ಟಿ ನೇತೃತ್ವದಲ್ಲಿ, ಅರುಣು ಶೆಟ್ಟಿ ಪಣಿಯೂರು ಮುಂದಾಳತ್ವದಲ್ಲಿ ಯಕ್ಷ ಕಾಮಧೇನು, ಯಕ್ಷ ಧ್ರುವ ಪಟ್ಲ ಸತೀಶ್ ಶೆಟ್ಟಿಯವರ ಗಾನಾಮೃತದೊಂದಿಗೆ ಪುಷ್ಪಾಲಂಕಾರದಿಂದ ಕಂಗೊಳಿಸಲಿರುವ ತುಳುನಾಡಿನ ಶೈಲಿಯ ರಂಗಸ್ಥಳದಲ್ಲಿ ಕೀರ್ತಿಶೇಷ ಡಾ. ಶ್ರೀಧರ್ ಭಂಡಾರಿ ಸ್ಮರಣಾರ್ಥ ವೇದಿಕೆಯಲ್ಲಿ ಶ್ರೀ ಜ್ಞಾನ ಶಕ್ತಿ ಸುಬ್ರಮಣ್ಯ ಕೃಪಾಪೋಷಿತ ಯಕ್ಷಗಾನ ಮಂಡಳಿ ಪಾವಂಜೆ ಮೇಳದ ಸುಪ್ರಸಿದ್ಧ ಕಲಾವಿದರ ಸಂಗಮದಲ್ಲಿ ವಿಶೇಷ ವರ್ಷದ ಅದ್ದೂರಿಯ 'ಶ್ರೀ ದೇವಿ ಮಹಾತ್ಮೆ' ಯಕ್ಷಗಾನ ಪ್ರದರ್ಶನವು ಅ. 11ರ ಶನಿವಾರ ಮೀರಾ-ಭಾಯಂದರ್ ರೋಡ್‌ನ ಮೇಯರ್ ವಾಟಿಕಾ ಸಭಾಗೃಹದಲ್ಲಿ ಜರಗಿತು. ಈ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಉಪಾಧ್ಯಕ್ಷ ಮಹೇಶ್ ಶೆಟ್ಟಿ (ಚಿತ್ರ : 1), ಬಂಟರ ಸಂಘ ಮುಂಬಯಿಯ ಪ್ರಭಾರ ಅಧ್ಯಕ್ಷ ರತ್ನಾಕರ್ ಶೆಟ್ಟಿ ಮುಂಡ್ಕೂರು (ಚಿತ್ರ : 2), ಗೌರವಾನ್ವಿತ ಅತಿಥಿಯಾಗಿ ಉಪಸ್ಥಿತರಿದ್ದ ಬೊಂಬೇ ಬಂಟ್ಸ್ ಎಸೋಸಿಯೇಶನ್‌ನ ನಿಕಟ ಪೂರ್ವ ಅಧ್ಯಕ್ಷ ಸಿ.ಎ. ಸುರೇಂದ್ರ ಕೆ. ಶೆಟ್ಟಿ (ಚಿತ್ರ : 3), ಸಾಯಿ ಪ್ಯಾಲೇಸ್ ಗ್ರೂಪ್‌ನ ಆಡಳಿತ ನಿರ್ದೇಶಕ ರವಿ ಸುಂದರ್ ಶೆಟ್ಟಿ (ಚಿತ್ರ : 4) ಪ್ಲೆಸ್ಟೋ ಟೂಲಿಂಗ್ ಸಿಸ್ಟಮ್‌ನ ಸಿಎಂಡಿ ಕಾಶಿಪಟ್ನ ಭಾಸ್ಕರ್ ಶೆಟ್ಟಿ (ಚಿತ್ರ : 5), ಮಾನವ ಸೇವಾ ಸಂಘ ಮಹಾರಾಷ್ಟ್ರ ಅಧ್ಯಕ್ಷ ಡಾ. ಹರೀಶ್ ಶೆಟ್ಟಿ (ಚಿತ್ರ : 6), ಉದಯ ಶೆಟ್ಟಿ ಪೆಲತ್ತೂರು (ಚಿತ್ರ : 7), ರಘುಸಿಯ ಉಡುಪಿ ಬ್ರಿಸ್ಟ್ರೋ ನಿರ್ದೇಶಕ ರಾಜೇಶ್ ಶೆಟ್ಟಿ ತೆಳ್ಳಾರ್ (ಚಿತ್ರ : 8), ಡಿಎಸ್‌ಪಿ ಎಂಟರ್‌ಪ್ರೈಸಸ್‌ನ ನಿರ್ದೇಶಕ ಮಿಜಾರು ಪ್ರಸಾದ್ ನಿಲಯ ಶಕ್ತಿ ಪ್ರಸಾದ್ ಶೆಟ್ಟಿ (ಚಿತ್ರ : 9), ರಿಗಾಲಿಯ ಗ್ರೂಪ್ ಆಫ್ ಹೋಟೆಲ್ಸ್‌ನ ಸಾಯಿಪ್ರಸಾದ್ ಪೂಂಜ (ಚಿತ್ರ : 10), ಶೇಖರ್ ಶೆಟ್ಟಿ ಮಾಳ (ಚಿತ್ರ : 11), ಅಶೋಕ್ ಶೆಟ್ಟಿ ಕಲ್ಪವೃಕ್ಷ (ಚಿತ್ರ : 12)ಸ ಕಂಬಳ ಕ್ಷೇತ್ರದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡ ಮಹಿಳೆ ಮಲ್ಲಿಕಾ ಶೆಟ್ಟಿ (ಚಿತ್ರ : 13) ಮಹೇಶ್ ಶೆಟ್ಟಿ ಕುಡುಪುಲಾಜೆ ಅವರ ಪತ್ನಿ ಜಯಶ್ರೀ ಮಹೇಶ್ ಶೆಟ್ಟಿ (ಚಿತ್ರ : 14) ಯವರನ್ನು ವೇದಿಕೆಯಲ್ಲಿ ಅತಿಥಿ ಗಣ್ಯರು ಗೌರವಿಸಲಾಯಿತು.

# ಕೊಂಕಣ ರೈಲ್ವೇ ಕಾರ್ಪೊರೇಷನ್ ಲಿಮಿಟೆಡ್ : 35ನೇ ಸಂಸ್ಥಾಪನಾ ದಿನಾಚರಣೆ




ನವಿಮುಂಬಯಿ, ಅ.16- ಕೊಂಕಣ ರೈಲ್ವೇ ಕಾರ್ಪೊರೇಷನ್ ಲಿಮಿಟೆಡ್ ತನ್ನ 35 ನೇ ಸಂಸ್ಥಾಪನಾ ದಿನವನ್ನು ಅಕ್ಟೋಬರ್ 15 ರಂದು ಬುಧವಾರ ಆಚರಿಸಿತು. ನವಿ ಮುಂಬೈನ ವಾಶಿಯಲ್ಲಿರುವ ಸಿಡ್ಕೊ ಪ್ರದರ್ಶನ ಮತ್ತು ಸಮಾವೇಶ ಕೇಂದ್ರದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಂತೋಷ್ ಕುಮಾರ್ ಝಾ, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ರಾಜೇಶ್ ಎಂ. ಭದಂಗ್ ಅವರೊಂದಿಗೆ, ನಿರ್ದೇಶಕರು (ಹಣಕಾಸು), ಸುನಿಲ್ ಗುಪ್ತಾ, ನಿರ್ದೇಶಕರು (ಕಾರ್ಯಾಚರಣೆ ಮತ್ತು ವಾಣಿಜ್ಯ) ಮತ್ತು ರಾಜೀವ್ ಕುಮಾರ್ ಮಿಶ್ರಾ, ನಿರ್ದೇಶಕರು (ವೇ ಆ್ಯಂಡ್ ವರ್ಕ್ಸ್), ನಿಗಮದ 35 ವರ್ಷಗಳ ಪ್ರಯಾಣವನ್ನು ಕೆಆರ್‌ಸಿಎಲ್‌ನ ಸಿಎಂಡಿ ಸಂತೋಷ್ ಕುಮಾರ್ ಝಾ ಅವರು ಶ್ಲಾಘಿಸಿದರು.

ಕೆಆರ್‌ಸಿಎಲ್‌ನ ಬೆಳವಣಿಗೆಯನ್ನು ರೂಪಿಸಿದ ನೌಕರರ ಸಾಮೂಹಿಕ ಪ್ರಯತ್ನಗಳು ಮತ್ತು ಅಚಲ ಸಮರ್ಪಣೆ ಮತ್ತು ಯಶಸ್ಸನ್ನು, ನಿರ್ದೇಶಕರು ತಮ್ಮ ತಮ್ಮ ಕ್ಷೇತ್ರಗಳ ಒಳನೋಟಗಳನ್ನು ಹಂಚಿಕೊಂಡರಲ್ಲದೆ ಕೆಆರ್‌ಸಿಎಲ್‌ನ ಮಹತ್ವವನ್ನು ಒತ್ತಿ ಹೇಳಿದರು. ಕಾರ್ಯಾಚರಣೆಗಳು, ತಾಂತ್ರಿಕ ಪ್ರಗತಿ, ರೈಲ್ವೆ ಮೂಲಸೌಕರ್ಯ ಮತ್ತು ಪ್ರಯಾಣಿಕ ಮತ್ತು ಸರಕು ಸೇವೆಗಳು ವರ್ಷದ ಪ್ರಮುಖ ಮೈಲಿಗಲ್ಲುಗಳ ಬಗ್ಗೆ ವಿವರಿಸಿದರು.

ಜೂನ್ 6, 2025 ರಂದು ಪ್ರಧಾನ ಮಂತ್ರಿಗಳು ಕತ್ರಾ-ಸಂಗಲ್ದಾನ್ ವಿಭಾಗವನ್ನು ಉದ್ಘಾಟಿಸಿದರು. ಕೊಂಕಣ ರೈಲ್ವೆ ನಿರ್ಮಿಸಿದ ಯುಎಸ್‌ಬಿಆರ್‌ಎಲ್ ಯೋಜನೆ ಮತ್ತು ಕತ್ರಾ ನಡುವೆ ವಂದೇ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರಿಸಲಾಯಿತು. ಶ್ರೀನಗರದ ವಿಶ್ವದ ಅತೀ ಎತ್ತರದ ರೈಲ್ವೆ ಕಮಾನು ಸೇತುವೆ - ಚಿನಾಬ್ ಸೇತುವೆಯನ್ನು ಒಳಗೊಂಡಿರುವ ಈ ಯೋಜನೆ ಮತ್ತು ಭಾರತದ ಮೊದಲ ಕೇಬಲ್-ಸ್ಟೇ ರೈಲ್ವೆ ಸೇತುವೆ - ಅಂಜಿ ಖಾದ್ ಸೇತುವೆ, ಒಂದು ಹೆಗ್ಗುರುತಿನ ಸಾಧನೆಯಾಗಿದೆ.

ಜಾಗತಿಕ ರೈಲ್ವೆ ಎಂಜಿನಿಯರಿಂಗ್‌ನಲ್ಲಿ 2024-25ನೇ ಹಣಕಾಸು ವರ್ಷದಲ್ಲಿ ಕೊಂಕಣ ರೈಲ್ವೇ ಒಟ್ಟು 4,202.67 ಕೋಟಿ ಆದಾಯ ಮತ್ತು 137.69 ಲಾಭ ಗಳಿಸಿದೆ. ಕೋವಿಡ್ ನಂತರದ ಸತತ ಮೂರನೇ ಲಾಭದಾಯಕ ವರ್ಷವಾಗಿದೆ. 3,000 ಕೋಟಿ ವಿದ್ಯುದೀಕರಣ ಕಾಮಗಾರಿಗಳು ಸೇರಿದಂತೆ 4,157 ಕೋಟಿ ಮೌಲ್ಯದ ಯೋಜನೆಗಳು ಒಳಗೊಂಡಿದ್ದು ಪರಿಸರದ ಅನುಮತಿ ನೀಡಲಾಗಿದೆ ಮತ್ತು ಎಲ್‌ಒಎ ನೀಡಲಾಗಿದೆ . ಮಹಾರಾಷ್ಟ್ರ ಲೋಕೋಪಯೋಗಿ ಇಲಾಖೆಯೊಂದಿಗಿನ ಒಪ್ಪಂದದಡಿಯಲ್ಲಿ 100 ಕೋ.ರೂ. ವೆಚ್ಚದಲ್ಲಿ ರತ್ನಗಿರಿ ನಿಲ್ದಾಣದ ಸುಂದರೀಕರಣ ಕಾರ್ಯ ನಡೆಯುತ್ತಿದೆ. ಅಗತ್ಯ ಪ್ರಯಾಣ ಮಾಹಿತಿಯನ್ನು ಒದಗಿಸುವ ಹೊಸ ಕೆಆರ್‌ಸಿಎಲ್ ಅಪ್ಲಿಕೇಶನ್‌ನನ್ನು ಸಹ ಪ್ರಾರಂಭಿಸಲಾಗಿದೆ. ಹಾಗೂ ಇದೇ ಸಮಯದಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ಸಿಬ್ಬಂದಿಗಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು.

# ದುರಂತದಲ್ಲಿ ಸಾವನ್ನಪ್ಪಿದ ಸಂಸ್ಕೃತಿ ಅಮೀನ್ ಅವರ ಮನೆಗೆ ಜಯ ಸುವರ್ಣ ಅಭಿಮಾನಿಗಳ ಭೇಟಿ



ಮುಂಬಯಿ, ಅ.16 - ಜೋಗೇಶ್ವರಿ ಪೂರ್ವದಲ್ಲಿ ನಡೆದ ದುರಂತದಲ್ಲಿ ಸಾವನ್ನಪ್ಪಿದ ಸಂಸ್ಕೃತಿ ಅಮೀನ್ ಅವರ ಮನೆಗೆ ಭಾರತ್ ಬ್ಯಾಂಕಿನ ಕಾರ್ಯಾಧ್ಯಕ್ಷ ಸೂರ್ಯಕಾಂತ್ ಜಯ ಸುವರ್ಣ ಮತ್ತು ಜಯ ಸುವರ್ಣ ಅಭಿಮಾನಿಗಳ ತಂಡ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿ ಮುಂದಿನ ದಿನಗಳಲ್ಲಿ ಕುಟುಂಬಕ್ಕೆ ಸಹಕಾರ ನೀಡುವ ಭರವಸೆಯನ್ನು ನೀಡಿದರು.

ಕಟ್ಟಡದ ಮಾಲಿಕನ ಮೇಲೆ ಕೇಸು ದಾಖಲಿಸಿ ಪರಿಹಾರ ನೀಡುವಲ್ಲಿ ನಮ್ಮ ಪ್ರಯತ್ನ ನಡೆಯುತ್ತಿದೆ ಎಂದು ಸೂರ್ಯಕಾಂತ್ ಜಯ ಸುವರ್ಣ ಅವರು ಸಂಸ್ಕೃತಿ ಅಮೀನ್ ಅವರು ಮಾತಾ ಪಿತರಿಗೆ ತಿಳಿಸಿದರು.

ದುರಂತದಲ್ಲಿ ಸಾವನ್ನಪ್ಪಿದ ಸಂಸ್ಕೃತಿ ಅಮೀನ್ ಸಾವಿನ ಬಗ್ಗೆ ಜಿಲ್ಲಾಧಿಕಾರಿಗೆ ಸಮಗ್ರ ಮಾಹಿತಿಯನ್ನು ರಾಜಕೀಯ ಮುಖಂಡ ಲಕ್ಷ್ಮಣ್ ಪೂಜಾರಿ ಅವರ ಮೂಲಕ ಈ ಮೊದಲೇ ನೀಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಲ್ಲವರ ಅಸೋಸಿಯೇಷನ್ ಮಾಜಿ ಅಧ್ಯಕ್ಷ ನಿತ್ಯಾನಂದ ಎನ್ ಕೋಟ್ಯಾನ್, ಭಾರತ್ ಬ್ಯಾಂಕಿನ ನಿರ್ದೇಶಕಗಳಾದ ಗಂಗಾಧರ್ ಜೆ. ಪೂಜಾರಿ, ಭಾಸ್ಕರ್ ಸಾಲಿಯನ್ ಮತ್ತು ಸುರೇಂದ್ರ ಎ. ಪೂಜಾರಿ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

## ಭಾರತ್ ಬ್ಯಾಂಕ್‌ನ ನಿರ್ದೇಶಕರ ಮಂಡಳಿಯ ಸಭೆ ಹಾಗೂ ಶಾಖಾ ಪ್ರಮುಖರ ಸನ್ಮಾನ ಕಾರ್ಯಕ್ರಮ

# ಪ್ರಗತಿಯ ಪಥದಲ್ಲಿ ಭಾರತ್ ಬ್ಯಾಂಕ್ : ಸೂರ್ಯಕಾಂತ್ ಜಯ ಸುವರ್ಣ






ಮುಂಬಯಿ, ಅ.16 - ದೇಶದ ಅತ್ಯುತ್ತಮ ಗ್ರಾಹಕ ಸ್ನೇಹಿ ಬ್ಯಾಂಕುಗಳಲ್ಲಿ ಒಂದಾದ ಭಾರತ್ ಬ್ಯಾಂಕ್, 2025-26ನೇ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ತಮ್ಮ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ (ಸಿಎಎಸ್‌ಎ) ಗುರಿಗಳನ್ನು ಮೀರಿದ ತನ್ನ ಶಾಖೆಗಳ ಕಾರ್ಯಕ್ಷಮತೆಯನ್ನು ಗುರುತಿಸಿ ಸನ್ಮಾನಿಸಲಾಯಿತು.

ಅಕ್ಟೋಬರ್14, 2025 ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಬ್ಯಾಂಕಿನ ಕಾರ್ಯಾಧ್ಯಕ್ಷರಾದ ಸೂರ್ಯಕಾಂತ್ ಜಯ ಸುವರ್ಣರು ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ ( ಸಿಎಎಸ್‌ಎ) ಗುರಿಗಳನ್ನು ಮೀರಿದ ಶಾಖಾ ಮುಖ್ಯಸ್ಥರುಗಳಾದ ಸಿದ್ಧಾಂತ್ ಜಾಧವ್ - 'ಇನ್‌ಚಾರ್ಜ್' - ದಿವಾ ಎಕ್ಸ್‌ಟೆನ್ಷನ್ ಕೌಂಟರ್, ಜಯ ಎ ಕೋಟ್ಯಾನ್ - ಶಾಖಾ ಮುಖ್ಯಸ್ಥರು - ದಹಿಸರ್ ಶಾಖೆ, ರೇಷ್ಮಾ ಎಸ್. ಶೆಟ್ಟಿ - ಶಾಖಾ ಮುಖ್ಯಸ್ಥರು - ಕಂಕಣಾಡಿ ಶಾಖೆ, ಹೇಮಲತಾ ಎ. ಸುವರ್ಣ - ಶಾಖಾ ಮುಖ್ಯಸ್ಥರು - ಹಂಪನಕಟ್ಟೆ ಶಾಖೆ, ಕೃತಿಕಾ ಎಂ. ಕರ್ಕೇರ - ಶಾಖಾ ಮುಖ್ಯಸ್ಥರು - ಜೋಗೇಶ್ವರಿ ಶಾಖೆ, ಕಸ್ತೂರಿ ಪಿ. ಪೂಜಾರಿ - ಶಾಖಾ ಮುಖ್ಯಸ್ಥರು - ಘೋಡ್‌ಬಂದರ್ ಶಾಖೆ ಮತ್ತು ಪ್ರತಿಮಾ ಡಿ. ಸುವರ್ಣ - ಶಾಖಾ ಮುಖ್ಯಸ್ಥರು - ಐರೋಲಿ ಶಾಖೆ ಅವರನ್ನು ಸನ್ಮಾನಿಸಿದರು.

ಈ ಸಾಧನೆಯು ಭಾರತ್ ಬ್ಯಾಂಕಿನ ದೃಢವಾದ ಗ್ರಾಹಕ-ಕೇಂದ್ರಿತ ಕಾರ್ಯತಂತ್ರ ಮತ್ತು ಬ್ಯಾಂಕಿನ ಸಿಬ್ಬಂದಿಗಳ ದಕ್ಷತೆಯನ್ನು ಒತ್ತಿಹೇಳುತ್ತದೆ. ಸಿಎಎಸ್‌ಎ ಠೇವಣಿಗಳು ಬ್ಯಾಂಕಿನ ಸ್ಥಿರತೆ ಮತ್ತು ಲಾಭದಾಯಕತೆಗೆ ಪ್ರಮುಖ ಮಾನದಂಡವಾಗಿದೆ ಮತ್ತು ಈ ಯಶಸ್ಸು ಭಾರತ್ ಬ್ಯಾಂಕಿನ ಬಗ್ಗೆ ಗ್ರಾಹಕರಲ್ಲಿ ಹೆಚ್ಚುತ್ತಿರುವ ನಂಬಿಕೆ ಮತ್ತು ಆದ್ಯತೆಯ ಬಲವಾದ ಸೂಚಕವಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಕಾರ್ಯಾಧ್ಯಕ್ಷರಾದ ಸೂರ್ಯಕಾಂತ್ ಜಯ ಸುವರ್ಣರು, ಭಾರತ್ ಬ್ಯಾಂಕಿಗೆ ಇದು ಹೆಮ್ಮೆಯ ಕ್ಷಣವಾಗಿದೆ. ಈ ಎಲ್ಲಾ ಶಾಖೆಗಳ ಕಾರ್ಯಕ್ಷಮತೆಯು ನಮ್ಮ ಬ್ಯಾಂಕಿನ ಭರವಸೆಯ ಪಥದ ನೇರ ಪ್ರತಿಬಿಂಬವಾಗಿದೆ ಮತ್ತು ಉತ್ತಮ ಫಲಿತಾಂಶಗಳನ್ನು ನೀಡುವಲ್ಲಿ ನಮ್ಮ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಈ ಕಾರ್ಯಶೈಲಿ ಉಳಿದ ಶಾಖೆಗಳಿಗೂ ಅನುಕರಣೀಯವಾಗಿದೆ ಎಂದರು.

ಶಾಖೆಯ ವ್ಯವಸ್ಥಾಪಕರು ಮತ್ತು ಅವರ ತಂಡಗಳಿಗೆ ನಿರ್ದೇಶಕರ ಮಂಡಳಿಯ ಪರವಾಗಿ ಉಪಾಧ್ಯಕ್ಷರಾದ ಸೋಮನಾಥ್ ಬಿ. ಅಮೀನ್ ಹಾಗೂ ನಿರ್ದೇಶಕರಾದ ಚಂದ್ರಶೇಖರ ಎಸ್. ಪೂಜಾರಿ, ಜಯಲಕ್ಷ್ಮೀ ಪಿ. ಸಾಲಿಯಾನ್, ಗೌರೀಶ್ ಆರ್. ಕೋಟ್ಯಾನ್ ಮತ್ತು ಜಯಶ್ರೀ ಎಂ. ಹೆಜಮಾಡಿ ತಮ್ಮ ಅಭಿನಂದನೆಗಳನ್ನು ಸಲ್ಲಿಸಿ ಬ್ಯಾಂಕಿನ ಒಟ್ಟಾರೆ ಆರ್ಥಿಕ ಆರೋಗ್ಯಕ್ಕೆ ಶಾಖೆಗಳ ಕೊಡುಗೆಯನ್ನು ಶ್ಲಾಘಿಸಿ ಸಿಬ್ಬಂದಿಗಳ ಬದ್ಧತೆಯು ಬ್ಯಾಂಕಿನ ಧ್ಯೇಯ ಮತ್ತು ಉನ್ನತ ಕಾರ್ಯಕ್ಷಮತೆಯ ನೀತಿಯನ್ನು ತೋರಿಸುತ್ತದೆ ಎಂದು ನುಡಿದರು.



ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರಾದ ಭಾಸ್ಕರ್ ಎಂ. ಸಾಲ್ಯಾನ್, ಅಶೋಕ್ ಎಂ. ಕೋಟ್ಯಾನ್, ಮೋಹನ್ ದಾಸ್ ಜಿ. ಪೂಜಾರಿ, ನರೇಶ್ ಕೆ. ಪೂಜಾರಿ, ನಿರಂಜನ್ ಎಲ್. ಪೂಜಾರಿ, ಸಂತೋಷ್ ಕೆ. ಪೂಜಾರಿ, .ಗಣೇಶ್ ಡಿ. ಪೂಜಾರಿ, ಹರೀಶ್ ವಿ. ಪೂಜಾರಿ, ನಾರಾಯಣ್ ಎಲ್. ಸುವರ್ಣ, ಸುರೇಶ್ ಬಿ. ಸುವರ್ಣ, ಆಶಾ ಆರ್. ಬಂಗೇರ, ಅನ್ಬಳಗನ್ ಸಿ. ಹರಿಜನ್ ಮತ್ತು ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ವಿದ್ಯಾನಂದ ಎಸ್. ಕರ್ಕೇರ, ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ದಿನೇಶ್ ಬಿ. ಸಾಲ್ಯಾನ್ ಉಪಸ್ಥಿತರಿದ್ದರು.

# ಅಂಧೇರಿ : ಎನ್. ಕೆ. ದೇವಾಡಿಗ ನಂದಿಕೂರು ನಿಧನ



ಮುಂಬಯಿ, ಅ.16 - ಅಂಧೇರಿ ಪೂರ್ವ ಓಂನಗರದ ದೇವಾಡಿಗ ಸೊಸೈಟಿಯ ನಿವಾಸಿ (ನಂದಿಕೂರು ಕಬೀರ ದೇವಾಡಿಗ ) ಎನ್. ಕೆ. ದೇವಾಡಿಗ (92)ರೆಂದೇ ಹೆಸರುವಾಸಿಯಾಗಿರುವ ಅವರು ಅಲ್ಪ ಸಮಯದ ಅಸೌಖ್ಯದಿಂದ ಅಕ್ಟೋಬರ್ 5 ರಂದು ಸ್ವಗೃಹದಲ್ಲಿ ನಿಧನರಾಗಿದ್ದಾರೆ.

ಅವರು ದೇವಾಡಿಗ ಸಂಘ ಮುಂಬಯಿಯ ಮಾಜಿ ಜೊತೆ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರಲ್ಲದೆ ಕರ್ನಾಟಕ ಸಂಘ ಅಸಲ್ಫಾದ ಓರ್ವ ಸಕ್ರಿಯ ಕಾರ್ಯಕರ್ತರಾಗಿ ತದನಂತರ 1987 ರಿಂದ 2005 ತನಕ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು.

ಮೃತರು ಪತ್ನಿ , ಇಬ್ಬರು ಗಂಡು, ಇಬ್ಬರು ಹೆಣ್ಣು ಮಕ್ಕಳು , ಬಂಧು-ಬಾಂಧವರನ್ನು ಹಾಗೂ ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ.

# ನಾಸಿಕ್: 5.8 ಲಕ್ಷ ರೂ. ಮೆಫೆಡ್ರೋನ್ ವಶ; ಮೂವರ ಬಂಧನ

ನಾಸಿಕ್, ಅ.16 - ಮಹಾರಾಷ್ಟ್ರದ ನಾಶಿಕ್ ಜಿಲ್ಲೆಯ ಮಾಲೆಗಾಂವ್ ಪಟ್ಟಣದಲ್ಲಿ 5.82 ಲಕ್ಷ ರೂ. ಮೌಲ್ಯದ ಮೆಫೆಡ್ರೋನ್ (ಎಂಡಿ) ಮಾದಕ ವಸ್ತುವನ್ನು ವಶಪಡಿಸಿಕೊಂಡ ನಂತರ ಪೊಲೀಸರು ಮೂವರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅನ್ಸಾರಿ ಇಸ್ತಿಯಾಕ್ ಮುಖ್ತಾರ್ ಅಹ್ಮದ್ (25), ಜಲಾಲ್ ಅಹ್ಮದ್ ಮೊಹಮ್ಮದ್ ಹನೀಫ್ ಶೇಖ್ (32) ಮತ್ತು ಮೋಸಿನ್ ಖಾನ್ ಜೈನುಲಾಬ್ದಿನ್ ಪಠಾಣ್ (37) ಎಂದು ಗುರುತಿಸಲಾದ ಮೂವರು ಆರೋಪಿಗಳನ್ನು ಬಂಧಿಸಿ, ಅವರ ವಿರುದ್ಧ ಮಾದಕ ವಸ್ತು ಮತ್ತು ಮನೋವಿಕೃತ ವಸ್ತುಗಳ (ಎನ್‌ಡಿಪಿಎಸ್) ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ನಾಲ್ಕನೇ ಆರೋಪಿಗಾಗಿ ಹುಡುಕಾಟ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಕೊಂಕಣ ವಿಭಾಗದ ಉಪ ನಿರ್ದೇಶಕಿ ಅರ್ಚನಾ ಗಾಡೇಕರ್ - ಶಂಬಾರ್ಕರ್ ನಿಧನ



ಮುಂಬಯಿ, ಅ. 16- ನವಿಮುಂಬಯಿಯ ಖಾರ್ಘರ್ ಸೆಕ್ಟರ್ 8ರ ನಿವಾಸಿ, ಪಾಲ್ಘರ್ ಜಿಲ್ಲಾ ಮಾಹಿತಿ ಅಧಿಕಾರಿ ಮತ್ತು ಸಾರ್ವಜನಿಕ ಸಂಪರ್ಕ ನಿರ್ದೇಶನಾಲಯದ ಕೊಂಕಣ ವಿಭಾಗದ ಉಪ ನಿರ್ದೇಶಕಿ, ಪ್ರಸಿದ್ಧ ಬರಹಗಾರ್ತಿ ಅರ್ಚನಾ ಗಾಡೇಕರ್-ಶಂಬಾರ್ಕರ್( 52) ಅವರು ದೀರ್ಘಕಾಲದ ಅನಾರೋಗ್ಯದ ಬಳಿಕ ಅಕ್ಟೋಬರ್ 15 ರ ಬುಧವಾರ ಸಂಜೆ ಮುಂಬಯಿಯ ಅಪೋಲೋ ಆಸ್ಪತ್ರೆಯಲ್ಲಿ ನಿಧನರಾದರು.

ಅರ್ಚನಾ ಶಂಬಾರ್ಕರ್ ಪ್ರಸಿದ್ಧ ಬರಹಗಾರ್ತಿಯಾಗಿದ್ದರು. ಅವರ ಕಾದಂಬರಿ 'ಸೋಲ್ಮೇಟ್' ಮತ್ತು ಕಥಾ ಸಂಕಲನ 'ಸರಿನಾಸ್' ಪ್ರಕಟವಾಗಿದ್ದವು. ಮೃತರು ಪತಿ, ಮಕ್ಕಳು, ಕುಟುಂಬಿಕರು ಮತ್ತು ಅಪಾರ ಬಂಧು-ಬಳಗ ಅಗಲಿದ್ದಾರೆ.

# ವಿದೇಶ ಪ್ರವಾಸಕ್ಕೆ ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿ ಹಿಂಪಡೆದ ನಟಿ ಶಿಲ್ಪಾ ಶೆಟ್ಟಿ



ಮುಂಬಯಿ, ಅ. 16 - ತನ್ನ ಉದ್ಯಮಿ ಪತಿ ರಾಜ್ ಕುಂದ್ರಾ ಅವರೊಂದಿಗೆ 60 ಕೋಟಿ ರೂ. ವಂಚನೆ ಪ್ರಕರಣದಲ್ಲಿ ಸಿಲುಕಿರುವ ನಟಿ ಶಿಲ್ಪಾ ಶೆಟ್ಟಿ, ಯೋಜನೆಗಳು ಕಾರ್ಯರೂಪಕ್ಕೆ ಬರದ ಕಾರಣ ವಿದೇಶ ಪ್ರವಾಸಕ್ಕೆ ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆಯುತ್ತಿರುವುದಾಗಿ ಗುರುವಾರ ಬಾಂಬೇ ಹೈಕೋರ್ಟ್‌ಗೆ ತಿಳಿಸಿದ್ದಾರೆ.

ಶೆಟ್ಟಿ ಅವರ ವಕೀಲ ನಿರಂಜನ್ ಮುಂಡರಗಿ ಅವರು ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಮತ್ತು ನ್ಯಾಯಮೂರ್ತಿ ಗೌತಮ್ ಅಂಕದ್ ಅವರ ಪೀಠಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ನಟಿ ತನ್ನ ಅರ್ಜಿಯನ್ನು ಹಿಂಪಡೆಯುತ್ತಿದ್ದಾರೆ.

''ಅವರು ಮತ್ತು ಅವರ ಪತಿ ಭವಿಷ್ಯದಲ್ಲಿ ಪ್ರಯಾಣಿಸಲು ಬಯಸಿದಾಗ, ಅವರು ನ್ಯಾಯಾಲಯದಿಂದ ಅನುಮತಿ ಕೋರಿ ಹೊಸ ಅರ್ಜಿಯನ್ನು ಸಲ್ಲಿಸುತ್ತಾರೆ. ಅವರು (ಶೆಟ್ಟಿ) ಪ್ರಸ್ತುತ ಅರ್ಜಿಯ ಬಗ್ಗೆ ಹೆಚ್ಚು ಗಮನ ಹರಿಸುತ್ತಿಲ್ಲ'' ಎಂದು ಅವರು ಹೇಳಿದರು.

ದೀಪಕ್ ಕೊಠಾರಿ ಎಂಬವರು ದಂಪತಿಯ ವಿರುದ್ಧ 2015 ರಿಂದ 2023 ರವರೆಗೆ ತಮ್ಮ ಕಂಪನಿಯಾದ ಬೆಸ್ಟ್ ಡೀಲ್ ಟಿವಿ ಪ್ರೈವೇಟ್ ಲಿಮಿಟೆಡ್‌ನಲ್ಲಿ 60 ಕೋಟಿ ರೂ. ಹೂಡಿಕೆ ಮಾಡಲು ಪ್ರೇರೇಪಿಸಿದ್ದಾರೆ ಆದರೆ ಆ ಮೊತ್ತವನ್ನು ತಮ್ಮ ಸ್ವಂತ ಲಾಭಕ್ಕಾಗಿ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿ ದೂರು ದಾಖಲಿಸಿದ್ದಾರೆ. ಈ ಪ್ರಕರಣದ ತನಿಖೆ ನಡೆಸುತ್ತಿರುವ ನಗರ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗ (ಇಒಡಬ್ಲ್ಯೂ) ಆದೇಶದ ಮೇರೆಗೆ ದಂಪತಿ ಕಳೆದ ತಿಂಗಳು ತಮ್ಮ ವಿರುದ್ಧ ಹೊರಡಿಸಲಾದ ಲುಕ್ ಔಟ್ ಸುತ್ತೋಲೆ (ಎಲ್‌ಒಸಿ)ಯನ್ನು ಅಮಾನತುಗೊಳಿಸುವಂತೆ ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಅಕ್ಟೋಬರ್ ಮತ್ತು ಜನವರಿ 2026ರ ನಡುವೆ ತಮ್ಮ ವೃತ್ತಿಪರ ಬದ್ಧತೆಗಳು ಮತ್ತು ಒಂದು ವಿರಾಮ ಪ್ರವಾಸಕ್ಕಾಗಿ ವಿದೇಶ ಪ್ರವಾಸ ಮಾಡಲು ಅವರು ಅನುಮತಿ ಕೋರಿದ್ದರು. ಗುರುವಾರ, ನ್ಯಾಯಾಲಯವು ನಟಿಯ ಹಿಂತೆಗೆದುಕೊಳ್ಳುವಿಕೆಯನ್ನು ಸ್ವೀಕರಿಸಿತು ಮತ್ತು ನವೆಂಬರ್ 17ರಂದು ಎಲ್‌ಒಸಿ ಅನ್ನು ಅಮಾನತುಗೊಳಿಸುವಂತೆ ಕೋರಿ ದಂಪತಿ ಅರ್ಜಿಯನ್ನು ವಿಚಾರಣೆಗೆ ಮುಂದೂಡಿತು. ಹಿಂದಿನ ವಿಚಾರಣೆಗಳಲ್ಲಿ, ವಂಚನೆ ಮತ್ತು ವಂಚನೆ ಪ್ರಕರಣದಲ್ಲಿ ಇಬ್ಬರೂ ಆರೋಪಿಯಾಗಿರುವಾಗ ವಿರಾಮ ಪ್ರವಾಸಗಳನ್ನು ಅನುಮತಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿತ್ತು ಮತ್ತು ಅವರು 60 ಕೋಟಿ ರೂ.ಗಳನ್ನು ಠೇವಣಿ ಮಾಡಲು ಸಿದ್ಧರಿದ್ದರೆ ಮಾತ್ರ ಅವರ ಮನವಿಯನ್ನು ಪರಿಗಣಿಸುವುದಾಗಿ ಹೇಳಿತ್ತು. ಕಳೆದ ವಾರ ಅಕ್ಟೋಬರ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಶೆಟ್ಟಿ ಅವರನ್ನು ಆಹ್ವಾನಿಸಲಾಗಿತ್ತು, ಆದ್ದರಿಂದ ಅವರು ಅಮೆರಿಕಕ್ಕೆ ಪ್ರಯಾಣಿಸಲು ಪ್ರಯತ್ನಿಸಿದ್ದರು. ನಂತರ ಪೀಠವು ಅವರಿಗೆ ಬಂದ ಒಪ್ಪಂದ ಅಥವಾ ಆಹ್ವಾನವನ್ನು ಸಲ್ಲಿಸುವಂತೆ ಕೇಳಿತ್ತು.

ನಂತರ ಮುಂಡರಗಿ ಅವರು ನಟಿ ನ್ಯಾಯಾಲಯದಿಂದ ಪ್ರಯಾಣ ಅನುಮತಿ ಪಡೆಯುವವರೆಗೆ ಯಾವುದೇ ಒಪ್ಪಂದಕ್ಕೆ ಸಹಿ ಹಾಕಲಾಗುವುದಿಲ್ಲ ಎಂದು ಹೇಳಿದ್ದರು.

ಶೆಟ್ಟಿ ಮತ್ತು ಕುಂದ್ರಾ ಇಬ್ಬರೂ ಪ್ರಕರಣದ ತನಿಖೆಗೆ ಸಹಕರಿಸಿದ್ದಾರೆ ಮತ್ತು ವಿಚಾರಣೆಗೆ ಹಾಜರಾಗಿದ್ದಾರೆ ಎಂದು ಅವರು ಈ ಹಿಂದೆ ವಾದಿಸಿದ್ದರು.

# ಪವಾರ್‌ಕುಟುಂಬವು ಈ ವರ್ಷ ದೀಪಾವಳಿ ಆಚರಿಸುವುದಿಲ್ಲ : ಸುಪ್ರಿಯಾ ಸುಳೆ

ಮುಂಬಯಿ, ಅ. 16 - ಪವಾರ್ ಕುಟುಂಬವು ಈ ವರ್ಷ ದೀಪಾವಳಿ ಆಚರಿಸದಿರಲು ನಿರ್ಧರಿಸಿದೆ ಎಂದು ಎನ್‌ಸಿಪಿ (ಎಸ್‌ಪಿ) ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ಗುರುವಾರ ಹೇಳಿದ್ದಾರೆ. ''ನಮ್ಮ ಚಿಕ್ಕಮ್ಮ ಭಾರತಿ ಪ್ರತಾಪ್‌ರಾವ್ ಪವಾರ್ ಇತ್ತೀಚೆಗೆ ನಿಧನರಾದರು. ಅವರು ನಮಗೆಲ್ಲರಿಗೂ ತಾಯಿಯಂತೆ ಇದ್ದರು. ಆದ್ದರಿಂದ, ನಾವು, ಇಡೀ ಪವಾರ್ ಕುಟುಂಬವು ಈ ವರ್ಷದ ದೀಪಾವಳಿಯನ್ನು ಆಚರಿಸದಿರಲು ಸಾಮೂಹಿಕವಾಗಿ ನಿರ್ಧರಿಸಿದ್ದೇವೆ'' ಎಂದು ಲೋಕಸಭಾ ಸದಸ್ಯರು ಎಕ್ಸ್‌ನ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

# ಪಡುಬಿದ್ರಿ ಪಾದೆಬೆಟ್ಟುಮನೆ ಕೊರಗ ಕೆ. ಶೆಟ್ಟಿ ನಿಧನ




ಮುಂಬಯಿ, ಅ. 16- ಮುಂಬಯಿ ಘಾಟ್‌ಕೋಪರ್ ಪೂರ್ವದ ಗರೋಡಿಯ ನಗರ್ ದ್ವಾರಕದಾಮ್ ಬಿಲ್ಡಿಂಗ್ ನಿವಾಸಿ ಕೊರಗ ಕೆ ಶೆಟ್ಟಿ (ಪಿ.ಕೆ. ಶೆಟ್ಟಿ) (81) ಅವರು ವೃದ್ಯಾಪ್ಯದ ಅಸೌಖ್ಯದಿಂದ ಅ. 16ರಂದು ನಿಧನರಾಗಿದ್ದಾರೆ.

ಮೂಲತಃ ಪಡುಬಿದ್ರಿ, ಪಾದೆಬೆಟ್ಟು ಸಿಂಧು ವಿಹಾರ್ ಮನೆಯವರಾದ ಅವರು ಘಾಟ್‌ಕೋಪರ್ ಪಶ್ಚಿಮದ ಘಾಟ್‌ಕೋಪರ್ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಕೆನರಾ ಬೋರಿಂಗ್ ಆ್ಯಂಡ್ ಇಂಜಿನಿಯರ್ ವರ್ಕ್ಸ್‌ನ ಮಾಲಿಕರಾಗಿದ್ದರು.

ಮೃತರು ಪತ್ನಿ ಸುರೇಖಾ ಶೆಟ್ಟಿ, ಓರ್ವ ಪುತ್ರಿ ಸುಕ್ಷಿತಾ ಶೆಟ್ಟಿ, ಪುತ್ರ ರಾಜೀವ ಶೆಟ್ಟಿ, ಕುಟುಂಬಿಕರು ಸೇರಿದಂತೆ ಅಪಾರ ಬಂಧು -ಬಳಗವನ್ನು ಅಗಲಿದ್ದಾರೆ.

# ವಾಶಿ ನಾಕ : ರುಕ್ಕಯ್ಯ ಎಸ್. ಕೋಟ್ಯಾನ್ ನಿಧನ



ಮುಂಬಯಿ, ಅ. 16- ಚೆಂಬೂರು ವಾಸಿನಾಕಾ ಶ್ರೀ ಶನಿ ಸೇವಾ ಸಂಸ್ಥೆಯ ಮಾಜಿ ಅಧ್ಯಕ್ಷ ರುಕ್ಕಯ್ಯ ಸೋಮಯ್ಯ ಕೋಟ್ಯಾನ್(78) ರವರು ಅ. 13ರ ಸೋಮವಾರದಂದು ನಿಧನ ಹೊಂದಿದರು.

ಮೂಲತಃ ಎಕ್ಕಾರು ಪುಂಚಮಾರ್ ಮನೆಯವರಾಗಿದ್ದ ರುಕ್ಕಯ್ಯ ಕೋಟ್ಯಾನ್, ಪತ್ನಿ ಚಂದ್ರಾವತಿ ಆರ್. ಕೋಟ್ಯಾನ್, ಪುತ್ರಿಯರಾದ ಪ್ರಮಿಳಾ ನಾರಾಯಣ ಪೂಜಾರಿ, ದೀಪಾ ಅಶೋಕ್ ಕೋಟ್ಯಾನ್, ಪುತ್ರ ಸಂತೋಷ್ ಆರ್. ಕೋಟ್ಯಾನ್, ಅಳಿಯಂದಿರು, ಸೊಸೆ, ಮೊಮ್ಮಕ್ಕಳ ಸಹಿತ ಅಪಾರ ಬಂಧು-ಬಳಗದವರನ್ನು ಅಗಲಿದ್ದಾರೆ.

ರುಕ್ಕಯ್ಯ ಕೋಟ್ಯಾನ್‌ರವರ ನಿಧನಕ್ಕೆ ಚೆಂಬೂರು ವಾಸಿನಾಕಾ ಶ್ರೀ ಶನಿ ಸೇವಾ ಸಂಸ್ಥೆಯ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಶೋಕ ವ್ಯಕ್ತಪಡಿಸಿದ್ದಾರೆ.

# ಕೊಡೆತ್ತೂರು ಮಾಗಂದಡಿ ರಾಜೇಂದ್ರ ವಿ. ಶೆಟ್ಟಿ ನಿಧನ



ನವಿ ಮುಂಬಯಿ, ಅ. 16 - ಸಿಬಿಡಿ ಬೇಲಾಪುರ ನಾರ್ತ್,ಸೆಕ್ಟರ್ 9, ಎಫ್ 3, ಆರ್ ಎಚ್ 4ರ ನಿವಾಸಿ ರಾಜೇಂದ್ರ ವಿ. ಶೆಟ್ಟಿ (61) ಅವರು ಅಕ್ಟೋಬರ್ 16 ರಂದು ನಿಧನರಾಗಿದ್ದಾರೆ. ಅವರು ರೈಲ್ವೆ ಅಧಿಕಾರಿ ಕೊಡೆತ್ತೂರು ಮಾಗಂದಡಿ ನಿರಂಜನ ವಿ. ಶೆಟ್ಟಿಯವರ ಸಹೋದರ ಹಾಗೂ ಗೋವಂಡಿಯ ಸುವರ್ಣ ಬಾರ್ ಆ್ಯಂಡ್ ರೆಸ್ಟೋರೆಂಟ್‌ನ ಮಾಲಕರು.

ಅವರು ಮೂಲತಃ ಕಟೀಲು ಸಮೀಪದ ಕೊಡೆತ್ತೂರು ಮಾಗಂದಡಿ ಪ್ರತಿಷ್ಠಿತ ಮನೆತನದಲ್ಲಿ ಜನಿಸಿ ಕುಟುಂಬದ ದೈವ ದೇವರುಗಳ ಮೇಲೆ ಅಪಾರ ನಂಬಿಕೆ ಶ್ರದ್ಧೆಯಿಂದ ಅದರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿ, ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೂ ಮಾಗಂದಡಿ ಮನೆತನಕ್ಕೂ ಇರುವ ಧಾರ್ಮಿಕ ಕಟ್ಟು ಕಟ್ಟಳೆಗಳಲ್ಲಿ ಕುಟುಂಬದ ಹಿರಿಯರೊಂದಿಗೆ ಜವಾಬ್ದಾರಿ ಸ್ಥಾನದಲ್ಲಿ ಕಾರ್ಯ ನಿರ್ವಹಿಸಿ, ಕೊಡೆತ್ತೂರು ಶ್ರೀ ಅರಸು ಕುಂಜರಾಯ ದೈವಸ್ಥಾನದ ಟ್ರಸ್ಟ್ ಸದಸ್ಯರಾಗಿ 2024 ರಲ್ಲಿ ನಡೆದ ಜೀರ್ಣೋದ್ಧಾರ ಬ್ರಹ್ಮಕಲಶ ಸಮಿತಿಯಲ್ಲಿ ಮುಂಬಯಿ ಸಮಿತಿಯ ಗೌರವಾಧ್ಯಕ್ಷ ಸ್ಥಾನದಲ್ಲಿ ಇದ್ದು ಸಮಿತಿಯ ಪದಾಧಿಕಾರಿಗಳೊಂದಿಗೆ ಹಗಲು-ರಾತ್ರಿ ಕಾಯಾ ವಾಚಾ ಮನಸಾ ದುಡಿದು, ಹಿರಿಯರನ್ನು ಗೌರವಿಸುತ್ತಾ, ಕಿರಿಯರಿಗೆ ಮಾರ್ಗದರ್ಶನ ನೀಡಿ ಶ್ರೀ ಅರಸು ಕುಂಜರಾಯ ದೈವಸ್ಥಾನದ ಪ್ರತಿಯೊಂದು ಬೆಳವಣಿಗೆಗೆ ಸಹಕಾರವಿತ್ತವರಾಗಿ, ಊರಿನಲ್ಲಿ ನಡೆಯುವ ನವರಾತ್ರಿ ಮೆರವಣಿಗೆ, ಶ್ರೀ ಕೋರ್ದಬ್ಬು ದೈವದ ಧಾರ್ಮಿಕ ಕೆಲಸ ಕಾರ್ಯಗಳಿಗಲ್ಲದೆ ಪ್ರತಿಯೊಂದು ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಎಲ್ಲರಲ್ಲೂ ಅವರು ಮುಂಚೂಣಿಯಲ್ಲಿದ್ದರು.

ಮೃತರು ಪತ್ನಿ ರೇಣುಕಾ ಆರ್ ಶೆಟ್ಟಿ ,ಮಕ್ಕಳಾದ ಪರಿಣಿ, ಜೀತಿಕ, ಕುಟುಂಬಿಕರು, ಹಿತೈಷಿಗಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತಿಮ ಯಾತ್ರೆ ಅಕ್ಟೋಬರ್ 17ರಂದು ಬೆಳಿಗ್ಗೆ ಗಂಟೆ 9:30ಕ್ಕೆ ಅವರ ನಿವಾಸ ಸಿಬಿಡಿ ಬೇಲಾಪುರ ನಾರ್ತ್,ಸೆಕ್ಟರ್ 9,ಎಫ್ 3, ಆರ್‌ಎಚ್ 4 ರಿಂದ ಹೊರಡುವುದು ಎಂದು ಅವರ ಕುಟುಂಬ ಮೂಲ ತಿಳಿಸಿವೆ.

ಮೃತರ ನಿಧನಕ್ಕೆ ಕಟೀಲು ದೇವಸ್ಥಾನದ ಆಡಳಿತ ವರ್ಗ, ಅರ್ಚಕ ವೃಂದ, ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ, ಉಪಾಧ್ಯಕ್ಷ ಕರ್ನಿರೆ ವಿಶ್ವನಾಥ್ ಶೆಟ್ಟಿ, ಸಾಯಿಲೀಲಾ ಸದಾನಂದ ಶೆಟ್ಟಿ , ಸನ್ ಸಿಟಿ ಶಾಂತರಾಮ್ ಶೆಟ್ಟಿ, ಕೊಡೆತ್ತೂರು ಮಾಗಂದಡಿ ಅನಿಲ್ ಶೆಟ್ಟಿ, ನಂದಿಕೂರು ಅಡ್ವೆ ಮಾಗಂಧಡಿ ಪ್ರಕಾಶ್ ಶೆಟ್ಟಿ, ಅಶ್ವಿತ್ ಸಂಜೀವ ಶೆಟ್ಟಿ, ನೆರುಲ್ ಮಾಜಿ ಕಾರ್ಪೊರೇಟರ್ ಸಂತೋಷ್ ಶೆಟ್ಟಿ, ಸಿಬಿಡಿ ಭಾಸ್ಕರ್ ಶೆಟ್ಟಿ, ಮೀನಾಕ್ಷಿ ರಮೇಶ್ ಶೆಟ್ಟಿ, ಪನ್ವೇಲ್ ಮಾಜಿ ಕಾರ್ಪೊರೇಟರ್ ಸಂತೋಷ್ ಶೆಟ್ಟಿ, ಕೊಡೆತ್ತೂರು ಅರಸು ಕುಂಜರಾಯ ದೈವಸ್ಥಾನ ಆಡಳಿತ ಸಮಿತಿ ಮತ್ತು ಊರ ಹತ್ತು ಸಮಸ್ತರು ಮೊದಲಾದವರು ಸಂತಾಪ ವ್ಯಕ್ತಪಡಿಸಿದ್ದಾರೆ.


## 12ನೆಯ ವರ್ಷದ ಪುಣ್ಯಸ್ಮರಣೆ-Remembrance




ನಿಧನ : 17.10.2013

Adve Devasamane Smt. Sheela S. Shetty

(ಅಡ್ವೆ ದೇವಸಮನೆ ದಿ. ಗಿರಿಜಾ ಮತ್ತು ದಿ. ನಾರಾಯಣ ಶೆಟ್ಟಿಯವರ ಪುತ್ರಿ)

ನಿಮ್ಮ ಆದರ್ಶಯುತ ಬದುಕು ನಮ್ಮ ಬಾಳಿಗದೇ ಬೆಳಕು. ವಾತ್ಸಲ್ಯಮಯಿ ಆದರ್ಶ ಗೃಹಿಣಿಯಾಗಿ, ಪ್ರೀತಿ ವಾತ್ಸಲ್ಯದ ಪ್ರತಿರೂಪವಾಗಿ ಬಾಳಿ ನಮ್ಮನ್ನಗಲಿ ಇಂದಿಗೆ ವರುಷ **ಹನ್ನೆರಡು** ಸಂದರೂ ಸದಾ ನಿಮ್ಮನ್ನು ಸ್ಮರಿಸುತ್ತಾ, ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತಾ ಸದಾ ಸ್ಮರಿಸುತ್ತಿರುವ,

**Hejamadi Kamadhenu**
**Shri Shekhar P. Shetty** (Husband)
**Smt. Swarupa J. Shetty** (Daughter)
**Sana J. Shetty** (Grand Daughter)
**Family, Relatives & Friends**




epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237 | ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ | KARNATAKA MALLA, MUMBAI

ಸಂಪುಟ : 34 ಸಂಚಿಕೆ : 255 ಶುಕ್ರವಾರ 17-10-2025 ಬೆಲೆ : ₹ 5 ಪುಟಗಳು - 10 ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ




ಯಾರೋ ನನ್ನನ್ನು ಕೇಳಿದರು. ನಿನ್ನವರು ಯಾರೆಂದು? ನಾನು ನಗುತ್ತ ಹೇಳಿದೆ ಯಾರು ಬೇರೆಯವರಿಗಾಗಿ ನನ್ನನ್ನು ಕಡೆಗಣಿಸುವುದಿಲ್ಲವೋ ಅವರು.....

3 ಅನಗತ್ಯ ಅಧಿಕಾರಶಾಹಿ ಅಡೆತಡೆಗಳನ್ನು ಸೃಷ್ಟಿಸಬಾರದು, ವ್ಯಕ್ತಿಯ ಪ್ರಯಾಣದ ಹಕ್ಕನ್ನು ನಿರಾಶೆಗೊಳಿಸಬಾರದು: ಬಾಂಬೇ ಹೈಕೋರ್ಟ್

ಮಹಾಯುತಿಯಲ್ಲಿ ಬಿಜೆಪಿ 'ಅಣ್ಣ'; ಬಣದಲ್ಲಿ ಬಿರುಕುಗಳನ್ನು ಉಂಟುಮಾಡುವ ಹೇಳಿಕೆಗಳನ್ನು ನೀಡದಂತೆ ಪಕ್ಷದ ನಾಯಕರಿಗೆ ಎಚ್ಚರಿಕೆ : ಬಾವಂಕುಲೆ 5

ಯಾರು ತಮ್ಮ ಲಾಭಕ್ಕಾಗಿ ಇತರರನ್ನು ಬಳಸಿಕೊಳ್ಳುವರೋ ಒಂದಲ್ಲ ಎಂದು ದಿನ, ಒಂದಲ್ಲ ಒಂದು ಕಡೆ ಅವರು ಕೂಡಾ ಇನ್ನ್ಯಾರದೋ ಲಾಭಕ್ಕಾಗಿ ಖಂಡಿತಾ ಬಳಕೆ ಆಗೇ ಆಗುತ್ತಾರೆ.

## ಆಂಧ್ರ ಪ್ರದೇಶದಲ್ಲಿ ಪ್ರಧಾನಿಯಿಂದ ಹಲವು ಯೋಜನೆಗೆ ಭೂಮಿಪೂಜೆ 21ನೇ ಶತಮಾನ 140 ಕೋಟಿ ಭಾರತೀಯರದು : ಮೋದಿ



**ಕರ್ನೂಲ್, ಅ. 16- ದೇಶದ ಅತ್ಯಂತ ಹಳೆಯ ಪಕ್ಷವಾದ ಕಾಂಗ್ರೆಸ್ ವಿದ್ಯುತ್ ಕ್ಷೇತ್ರವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿತ್ತು ಎಂದು ಗುರುವಾರ ಇಲ್ಲಿ ಟೀಕಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, 21ನೇ ಶತಮಾನ 140 ಕೋಟಿ ಭಾರತೀಯರಿಗೆ ಸೇರಿದೆ ಮತ್ತು ದೇಶ 2047ರೊಳಗೆ 'ವಿಕಸಿತ ಭಾರತ' (ಅಭಿವೃದ್ಧ ಭಾರತ) ಆಗಲಿದೆ ಎಂದು ಹೇಳಿದ್ದಾರೆ.**

### ಶ್ರೀ ಶೈಲಂ ದೇವಸ್ಥಾನಕ್ಕೆ ಪ್ರಧಾನಿ ಭೇಟಿ

ಆ ಮೊದಲು ಪ್ರಧಾನಿ ಮೋದಿ ಅವರು, ನಂದ್ಯಾಲ್ ಜಿಲ್ಲೆಯಲ್ಲಿರುವ ಶ್ರೀಶೈಲದ ಶ್ರೀ ಭ್ರಮರಾಂಬೆ ಮಲ್ಲಿಕಾರ್ಜುನ ಸ್ವಾಮಿ ವರಳಾ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ಪೂಜೆಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಪ್ರಧಾನಿ ಮೋದಿ ಅವರು ಪಂಚಾಮೃತದೊಡನೆ ರುದ್ರಾಭಿಷೇಕ ಮಾಡಿದರು. ಪ್ರಧಾನಿ ಮೋದಿ ಅವರ ಜತೆಗೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಇದ್ದರು.




ಆಂಧ್ರ ಪ್ರದೇಶಕ್ಕೆ 13,000 ಕೋಟಿ ರೂ. ಮೊತ್ತದ ಯೋಜನೆಗಳಿಗೆ ಭೂಮಿ ಪೂಜೆ ಮತ್ತು ಕೆಲವು ಯೋಜನೆಗಳ ಲೋಕರ್ಪಾಣೆ ಮಾಡಿ ಮಾತನಾಡುತ್ತಿದ್ದ ಪ್ರಧಾನಿ, ಆಪರೇನ್ ಸಿಂಧೂರದಲ್ಲಿ ನಾವು ಮನೆಯಲ್ಲೇ ಮಾಡಿದ ''ವಸ್ತುಗಳ'' ನಿಜವಾದ ಶಕ್ತಿಯನ್ನು ನೋಡಿದ್ದೇವೆ ಎಂದು ಪಾಕಿಸ್ತಾನದ ವಿರುದ್ಧ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಉತ್ತರವಾಗಿ ನಡೆಸಿದ್ದ ಕ್ಷಿಪಣಿ ದಾಳಿಯನ್ನು ಉಲ್ಲೇಖಿಸಿ ದೇಶದ ಸ್ವದೇಶೀ ಕ್ಷಿಪಣಿಯ ಸಾಮರ್ಥ್ಯವನ್ನು ಪ್ರಶಂಸಿಸಿದರು. **3ನೇ ಪುಟಕ್ಕೆ**

## ದೇಶ ಭ್ರಷ್ಟರನ್ನು ಕರೆ ತರಲು ನಿರ್ದಯ ವಿಧಾನಗಳನ್ನು ಬಳಸುವುದು ಅಗತ್ಯವಾಗಿದೆ : ಗೃಹ ಸಚಿವ ಶಾಹ

**ಹೊಸದಿಲ್ಲಿ, ಅ.16- ಕಾಲಮಿತಿಯೊಳಗೆ ಭಾರತೀಯ ನ್ಯಾಯ ವ್ಯವಸ್ಥೆಯಡಿ ಶಿಕ್ಷಿಸಲು ಪ್ರತಿಯೊಬ್ಬ ದೇಶಭ್ರಷ್ಟರನ್ನು ಕರೆ ತರಲು ನಿರ್ದಯ ವಿಧಾನಗಳನ್ನು ಬಳಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾಹ ಗುರುವಾರ ಇಲ್ಲಿ ಹೇಳಿದ್ದಾರೆ.**

ವಿದೇಶಗಳಿಗೆ ಪಲಾಯನ ಮಾಡಿ ನೆಲೆಸಿರುವ ತನಕ ದೇಶದ ಆರ್ಥಿಕತೆ, ಸಾರ್ವಭೌಮತೆ ಮತ್ತು ಭದ್ರತೆಯನ್ನು ಸಾಧಿಸಲು ಸಾಧ್ಯವಿಲ್ಲ. ದೇಶಭ್ರಷ್ಟರಿಗೆ ಭಾರತೀಯ ಕಾನೂನುಗಳ ಬಗ್ಗೆ ಭಯ ಆರಂಭವಾಗ ಬೇಕಿದೆ ಎಂದು ಶಾಹ ಹೇಳಿದರು. ಸಿಬಿಐ ಏರ್ಪಡಿಸಿದ್ದ 'ಪಲಾಯನ ಗೈದ ಅಪರಾಧಿಗಳ ಹಸ್ತಾಂತರ ಸವಾಲುಗಳು ಮತ್ತು ತಂತ್ರಗಳು' ಎಂಬ ಸಮ್ಮೇಳನವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ವಿದೇಶಗಳಲ್ಲಿರುವ ದೇಶಬಿಟ್ಟು ಪಲಾಯನ ಗೈದಿರುವ ದೇಶಭ್ರಷ್ಟರು ಅವರ ಹಸ್ತಾಂತರ ಪ್ರಕ್ರಿಯೆಗೆ ಪ್ರತಿಯಾಗಿ ಭಾರತೀಯ ಜೈಲುಗಳ ಮಟ್ಟ ಕಳಪೆಯಾಗಿದೆ ಎಂದು ಹೇಳುತ್ತಿರುವುದರಿಂದ



ಪ್ರತಿ ರಾಜ್ಯದಲ್ಲಿ ಕನಿಷ್ಠ ಒಂದು ಜೈಲು ಕೊಠಡಿ ಯಾದರೂ ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ನಿರ್ಮಾಣವಾಗಬೇಕು ಎಂದು ಶಾಹ ನುಡಿದರು.

ಪಾಸ್‌ಪೋರ್ಟ್ ವಿತರಣೆಗೆ ಪ್ರಕ್ರಿಯೆ ಮತ್ತು ಕಾನೂನು ಜಾರಿ ಏಜೆನ್ಸಿಗಳ ನಡುವೆ ಸಮನ್ವತೆಯ ತಂತ್ರಜ್ಞಾನದ ಅಭಿವೃದ್ಧಿಯಾಗಬೇಕು ಎಂದು ಹೇಳಿದ ಶಾಹ ಅವರು, ಅಂತಹ ಸಮನ್ವಯತೆಯಿಂದ ಯಾವುದೇ ತಪ್ಪಿತಸ್ಥರ ವಿರುದ್ಧ ರೆಡ್‌ಕಾರ್ನರ್ ನೋಟಿಸ್ ನೀಡುವ ಪ್ರಕ್ರಿಯೆ ಆರಂಭವಾದಲ್ಲಿ ಆತನ ಪಾಸ್‌ಪೋರ್ಟ್‌ನಲ್ಲಿ ಕೆಂಪು ಪಟ್ಟಿ ಹಾಕಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಸಕ್ತ ತಂತ್ರಜ್ಞಾನದಲ್ಲಿ ಇದು ಅಸಾಧ್ಯದ ವಿಚಾರ ಅಲ್ಲ. ರೆಡ್ ಕಾರ್ನರ್ ನೋಟಿಸ್ ನೀಡಲ್ಪಟ್ಟಾಗ ಪಾಸ್‌ಪೋರ್ಟ್‌ನ್ನು ರದ್ದು ಮಾಡಿ ಪಲಾಯನಗೈದಾತ ಅಂತಾರಾಷ್ಟ್ರೀಯ ಪ್ರಯಾಣ ಮಾಡದಂತೆ ತಡೆ ಹಿಡಿಯಬಹುದಾಗಿದೆ. ಈ ಅಂಶವನ್ನು ನಾವು ವ್ಯವಸ್ಥೆಯಡಿ ತಂದಲ್ಲಿ, ದೇಶ ಭ್ರಷ್ಟರನ್ನು ಹಿಂದೆ ಕರೆದು ತರಲು ನೆರವಾಗಲಿದೆ ಎಂದು ಶಾಹ ಹೇಳಿದರು.

ವಿಜಯ್ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿ ಸೇರಿದಂತೆ ದೇಶಬಿಟ್ಟು ಪಲಾಯನ ಮಾಡಿರುವ ಹಲವು ಗಂಭೀರ ಅಪರಾಧ ಪ್ರಕರಣಗಳ ಆರೋಪಿಗಳು ಭಾರತದ ಜೈಲುಗಳಲ್ಲಿ ತಮಗೆ ಜೀವಿಸಲು ಸಾಧ್ಯವಿಲ್ಲ. **3ನೇ ಪುಟಕ್ಕೆ**

## ರೈಲ್ವೇ ಪ್ಲಾಟ್‌ಫಾರ್ಮ್‌ನಲ್ಲಿ ಮಹಿಳೆಯ ಹೆರಿಗೆಗೆ ನೆರವಾದ 'ನಿಜವಾದ ಜೀವನದ ರಾಂಚೋ'

**ಮುಂಬಯಿ, ಅ. 16- ದೇಶದ ವಾಣಿಜ್ಯ ರಾಜಧಾನಿ ಮುಂಬಯಿಯ ಜೀವನಾಡಿ ಉಪನಗರ ರೈಲ್ವೆಯಲ್ಲಿ ಒಬ್ಬ ಜಾಗೃತ ಮುಂಬಯಿಯ ಜೀವನಾಡಿ ಉಪನಗರ ರೈಲ್ವೆಯಲ್ಲಿ ಒಬ್ಬ ಜಾಗೃತ ಮುಂಬಯಿ ವ್ಯಕ್ತಿ ಚಲಿಸುತ್ತಿದ್ದ ರೈಲಿನಲ್ಲಿ ತೀವ್ರ ಪ್ರಸವ ವೇದನೆಗೆ ಒಳಗಾದ ಮಹಿಳೆಗೆ ರೈಲ್ವೆಯ ಪ್ಲಾಟ್‌ಫಾರಂ ಒಂದರಲ್ಲಿ ವೀಡಿಯೋ ಕರೆಯ ಮೂಲಕ ವೈದ್ಯೆಯೊಬ್ಬರು ನೀಡಿದ ಮಾರ್ಗದರ್ಶನದಂತೆ ಹೆರಿಗೆ ಮಾಡಿಸಿರುವ ಘಟನೆ ನಡೆದಿದೆ.**

ವಿಕಾಸ್ ಬೆದ್ರೆ ಎಂಬ ವೀಡಿಯೋ ಕ್ಯಾಮರಾಮ್ಯಾನ್ ಮಂಗಳವಾರ ಮುಂಜಾವ ಗಂಟೆ 1ರ ವೇಳೆಗೆ ಪಶ್ಚಿಮ ಉಪನಗರ ರೈಲೊಂದರಲ್ಲಿ ಸಂಚರಿಸುತ್ತಿದ್ದಾಗ ಉತ್ತರ ಮುಂಬಯಿಯ ರಾಮ ಮಂದಿರ ನಿಲ್ದಾಣ ಹತ್ತಿರ ಬರುತ್ತಿದ್ದಾಗ ಪಕ್ಕದ ಬೋಗಿಯಲ್ಲಿದ್ದ ಮಹಿಳೆಯೊಬ್ಬರು ಹೆರಿಗೆ ಬೇನೆಯಿಂದ ನರಳುವುದನ್ನು ಗಮನಿಸಿದ್ದರು. ಆ ಬಗ್ಗೆ ಇನ್‌ಸ್ಟಾಗ್ರಾಮ್‌ನಲ್ಲಿ ಮಂಜೀತ್ ದಿಲ್ಲೊನ್ ಎಂಬ ಪ್ರತ್ಯಕ್ಷದರ್ಶಿಯೊಬ್ಬರು ವಿವರವನ್ನು ಹಂಚಿಕೊಂಡಿದ್ದಾರೆ.

ಪಕ್ಕದ ಬೋಗಿಯಲ್ಲಿ ಪ್ರಸವ ವೇದನೆಯಿಂದ ನರಳುತ್ತಿದ್ದ ಮಹಿಳೆಯನ್ನು ಗಮನಿಸುತ್ತಲೇ ಸ್ವಲ್ಪವು ತಡಮಾಡದೆ ಬೆದ್ರೆ ತುರ್ತು ಚೈನ್ ಎಳೆದು ರೈಲು ನಿಲ್ಲಿಸಿದ್ದರು ಎಂದು ಧಿಲ್ಲೋನ್ ಹೇಳಿದ್ದಾರೆ. ''ಈ ವ್ಯಕ್ತಿ ನಿಜವಾಗಿಯೂ ಧೈರ್ಯಶಾಲಿ. ಆತನ ಬಗ್ಗೆ ವಿವರಿಸಲು ಯಾವುದೇ ಶಬ್ದಗಳೂ ಸಾಕಾಗುವುದಿಲ್ಲ. ಮಗು ಅದಾಗಲೇ ಅರ್ಧ ಹೊರ ಬಂದಿತ್ತು. ಅರ್ಧ ಒಳಗಡೆ ಮತ್ತು ಅರ್ಧ ಹೊರಗಡೆ. ಅವನನ್ನು ಒಂದು ನಿರ್ದಿಷ್ಟ ಕಾರಣಕ್ಕೇ ದೇವರು ಅಲ್ಲಿಗೆ ಕಳುಹಿಸಿರಬೇಕು'' ಎಂದು ಧಿಲ್ಲೋನ್ ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ. ಪರಿಸ್ಥಿತಿಯ ಗಂಭೀರತೆಯನ್ನು ಊಹಿಸುತ್ತಲೇ ತಾನು ತಕ್ಷಣವೇ ತನ್ನ ಡಾಕ್ಟರ್ ಸ್ನೇಹಿತೆ ದೇವಿಕಾ ದೇಶ್‌ಮುಖ್‌ಗೆ ಕರೆ ಮಾಡಿದ್ದು, ಕರೆಯನ್ನು ವೀಡಿಯೋ ಕರೆಯಾಗಿ ಪರಿವರ್ತಿಸಿಕೊಂಡು, ಹೆರಿಗೆ ಮಾಡಿಸುವುದಕ್ಕೆ ತನಗೆ ಮಾರ್ಗದರ್ಶನ ಮಾಡುವಂತೆ ಕೋರಿದ್ದರು ಎಂದು ದೂರದರ್ಶನ ಚಾನೆಲೊಂದಕ್ಕೆ ಬಳಿಕ ಬೆದ್ರೆ ಹೇಳಿದ್ದಾರೆ. **3ನೇ ಪುಟಕ್ಕೆ**

## ಮತದಾರರ ಪಟ್ಟಿ ಸರಿಪಡಿಸಬೇಕು ; ವಿಪಕ್ಷಗಳ ಬೇಡಿಕೆಗೆ ದನಿಗೂಡಿಸಿದ ಶಿವಸೇನೆ ಎಂಎಲ್‌ಎ

**ಬುಲ್ಡಾನ, ಅ.16- ವಿರೋಧ ಪಕ್ಷಗಳ ಆರೋಪಕ್ಕೆ ಗುರುವಾರ ದನಿಗೂಡಿಸಿರುವ ಶಿವಸೇನೆ ಎಂಎಲ್‌ಎ ಸಂಜಯ್ ಗಾಯಕ್ವಾಡ್ ಅವರು, ಚುನಾವಣಾ ಆಯೋಗವು ಮತದಾರರ ಪಟ್ಟಿಯಿಂದ ಎರಡೆರಡು ಬಾರಿ ಹೆಸರಿರುವ ಮತದಾರರ ಮತ್ತು ಮೃತರಾದವರ ಹೆಸರುಗಳನ್ನು ತೆಗೆಯಬೇಕು ಎಂದು ಆಗ್ರಹಿಸಿದ್ದಾರೆ.**



ಸುದ್ದಿಗಾರರ ಜತೆ ಇಲ್ಲಿ ಮಾತನಾಡುತ್ತಿದ್ದ ಅವರು ಪ್ರತಿಯೊಬ್ಬ ಮತದಾರರ ಹೆಸರೂ ಆಧಾರ್ ಕಾರ್ಡ್ ಜತೆ ಲಿಂಕ್ ಆಗಬೇಕು ಮತ್ತು ಮರಣ ಸರ್ಟಿಫಿಕೇಟ್ ಕೂಡ ಮತದಾರರ ಪಟ್ಟಿಗೆ ಸಂಪರ್ಕಿತವಾಗಬೇಕು. ಆಗ ಮತದಾರ ಮೃತಪಟ್ಟ ಕೂಡಲೇ ಮತದಾರರ ಪಟ್ಟಿಯಿಂದ ಆತನ ಹೆಸರು ಅಳಿಸಡುತ್ತದೆ ಎಂದು ಹೇಳಿದರು.

ಮತದಾರರ ಪಟ್ಟಿಯಲ್ಲಿ ಎರಡು ಅಥವಾ ಹೆಚ್ಚು ಕಡೆ ಹೆಸರು ಇರುವಂತೆ ಚುನಾವಣಾ ಆಯೋಗ ಮತದಾರರ ಪಟ್ಟಿಯನ್ನು ಅಂತಿಮಗೊಳಿಸಿಲ್ಲ ಎಂದು ಪ್ರಶ್ನಿಸಿದ ಗಾಯಕ್ವಾಡ್, ತನ್ನ ಜಿಲ್ಲೆಯಲ್ಲಿ 30 ವರ್ಷಗಳ ಹಿಂದೆ ಮೃತರಾದವರ ಹೆಸರುಗಳು ಇನ್ನೂ ಮತದಾರರಪಟ್ಟಿಯಲ್ಲಿ ಇವೆ ಎಂದು ಹೇಳಿದರು. ಮೃತಪಟ್ಟವರ ಹೆಸರುಗಳು ಜಿಲ್ಲೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಇದೆ ಎಂದು ಗಾಯಕ್ವಾಡ್ ತಿಳಿಸಿದರು. ಜು.25 ರಂದು ಮತದಾರರಪಟ್ಟಿಯ ಪರಿಷ್ಕರಣೆಯನ್ನು ಚು.ಆಯೋಗ ನಿಲ್ಲಿಸಿದೆ. ಹಾಗಾದರೆ ಜು.25ರ ತನಕ ಮತದಾನಕ್ಕೆ ಅರ್ಹರಾದ ಮತದಾರರ ಸ್ಥಿತಿಯೇನು ಎಂದು ಅವರು ಪ್ರಶ್ನಿಸಿದರು.

ಮತದಾರರಪಟ್ಟಿಯಲ್ಲಿ ಲೋಪವಿದ್ದರೆ, ಅದನ್ನು ಸರಿಪಡಿಸುವುದರಲ್ಲಿ ತಪ್ಪಿಲ್ಲ ಎಂದು ರತ್ನಗಿರಿಯಲ್ಲಿ ಶಿವಸೇನೆ ನಾಯಕ ಗೃಹಖಾತೆ ಸಹಾಯಕ ಸಚಿವ ಯೋಗೇಶ್ ಕದಂ ಹೇಳಿರುವ ಬಗ್ಗೆ ಗಾಯಕ್ವಾಡ್ ಅವರನ್ನು ಸುದ್ದಿಗಾರರೊಬ್ಬರು ಪ್ರಶ್ನಿಸಿದಾಗ ಅವರು ಮಾತು ಸರಿಯಾಗಿದೆ ಎಂದು ಉತ್ತರಿಸಿದರು. **3ನೇ ಪುಟಕ್ಕೆ**

## ಸಿಜೆಐ ಬಿ. ಆರ್. ಗವಾಯಿ ಮೇಲೆ ಶೂ ಎಸೆತ ಪ್ರಕರಣ ವಕೀಲನ ವಿರುದ್ಧ ಕಾನೂನು ಕ್ರಮಕ್ಕೆ ಅಟಾರ್ನಿ ಜನರಲ್ ಸಮ್ಮತಿ

**ಹೊಸದಿಲ್ಲಿ, ಅ. 16- ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ. ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಮುಂದಾದ ಸುಪ್ರೀಂಕೋರ್ಟಿನ ವಕೀಲ ರಾಕೇಶ್ ಕಿಶೋರ್ ವಿರುದ್ಧ ಅವಹೇಳನ ಕಾನೂನು ಕ್ರಮಕ್ಕೆ ಅಟಾರ್ನಿ ಜನರಲ್ ತುಷಾರ್ ಮೆಹ್ತಾ ಅವರು ಒಪ್ಪಿಗೆ ನೀಡಿದ್ದಾರೆಂದು ಗುರುವಾರ ಸುಪ್ರೀಂಕೋರ್ಟಿಗೆ ಮಾಹಿತಿ ನೀಡಲಾಗಿದೆ.**

ಸಿಜೆಐಯವರತ್ತ ಶೂ ಎಸೆದ ನ್ಯಾಯವಾದಿ ರಾಕೇಶ್ ಕಿಶೋರ್ ವಿರುದ್ಧ ಅವಹೇಳನ ಪ್ರಕರಣ ವಿಚಾರಣೆ ಕುರಿತಂತೆ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್ ಮಲ್ಯ ಬಗ್ಚಿ ಅವರನ್ನೊಳಗೊಂಡ ವಿಭಾಗೀಯ ಪೀಠವನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಸುಪ್ರೀಂಕೋರ್ಟ್ ಬಾರ್ ಅಸೋಸಿಯೇಶನ್ ಅಧ್ಯಕ್ಷ ಹಾಗೂ ಹಿರಿಯ ವಕೀಲ ವಿಕಾಸ್ ಸಿಂಗ್ ವಿನಂತಿಸಿಕೊಂಡಿದ್ದಾರೆ.



ಅಕ್ಟೋಬರ್ 6ರಂದು ನಡೆದ ಘಟನೆ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಾಕ ಆಕ್ರೋಶ ವ್ಯಕ್ತವಾಗಿದೆ. ಆ ಘಟನೆ ದೇಶದ ಸರ್ವೋಚ್ಚ ಸಂಸ್ಥೆಯ ಸಮಗ್ರತೆ ಮತ್ತು ಗೌರವಕ್ಕೆ ಅಪಚಾರ ತಂದಿದೆ ಎಂದು ವಿಕಾಸ್ ಸಿಂಗ್ ಹೇಳಿದ್ದಾರೆ.

ಮೆಹ್ತಾ ಮತ್ತು ಸಿಂಗ್ ಅವರು ಸರ್ವೋಚ್ಚ ಕೋರ್ಟಿಗೆ ಮಾಡಿಕೊಂಡಿರುವ ಮನವಿಯಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ನ್ಯಾಯಾಂಗಕ್ಕೆ ಅಗೌರವ ವಾಗುತ್ತಿರುವಂತಹ ಹೇಳಿಕೆಗಳು ಬರುತ್ತಿರುವುದಕ್ಕೆ ನಿರ್ಬಂಧಿಸಿ ಆದೇಶ ನೀಡುವಂತೆ ಕೋರಿದ್ದಾರೆ.

ಆಗ, ಮಾತು ಮತ್ತು ಅಭಿವ್ಯಕ್ತಿಯ ಮೂಲಭೂತ ಹಕ್ಕು ಪರಮಾಧಿಕಾರವಲ್ಲ ಮತ್ತು ಇತರರ ಗೌರವ ಮತ್ತು ಘನತೆಗೆ ಚ್ಯುತಿ ತರುವಂತಿಲ್ಲ ಎಂದು ವಿಭಾಗೀಯ ಪೀಠ ಹೇಳಿದೆ. ಸಾಮಾಜಿಕ ಮಾಧ್ಯಮದ ಮೇಲೆ ಕಾನೂನಿನ ನಿಯಂತ್ರಣ ಇಲ್ಲದೇ ಇರುವುದರಿಂದ ಅದರ ಪರಿಣಾಮ ಹೀಗಾಗಲು ಕಾರಣವಾಗಿದೆ ಎಂದು ಹೇಳಿದ ವಿಭಾಗೀಯ ಪೀಠ, ನಾವು ಅಂತಹ ವಿಚಾರದ ಉತ್ಪಾದಕರೂ ಹೌದು ಗ್ರಾಹಕರೂ ಹೌದು ಎಂದು ಅಭಿಪ್ರಾಯಪಟ್ಟಿದೆ.

ಆದರೆ, ರಾಕೇಶ್ ಕಿಶೋರ್ ವಿರುದ್ಧದ ಅವಹೇಳನ ಪ್ರಕರಣವನ್ನು ತುರ್ತಾಗಿ ವಿಚಾರಣೆಗೆ ಕಲಾಪ ಪಟ್ಟಿಗೆ ಸೇರಿಸಲು ಒಪ್ಪಿಕೊಳ್ಳದ ವಿಭಾಗೀಯ ಪೀಠ, ''ಒಂದು ವಾರದ ಬಳಿಕವೂ ಕೆಲವು ಮಾರಾಟಾರ್ಹ ಅಂಶಗಳು ಉಳಿದಿವೆಯೇ ಎಂದು ನಾವು ಕಾಯೋಣ'' ಎಂದು ಹೇಳಿದೆ. **3ನೇ ಪುಟಕ್ಕೆ**




## ಗುಜರಾತ್ : ಎಲ್ಲ 16 ಸಚಿವರ ರಾಜೀನಾಮೆ ಇಂದು ಹೊಸ ಸಚಿವರ ಪ್ರತಿಜ್ಞೆ ಸ್ವೀಕಾರ

**ಗಾಂಧಿನಗರ, ಅ.16- ಗುಜರಾತ್‌ನಲ್ಲಿ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹೊರತಾಗಿ ಇತರ ಎಲ್ಲ 16 ಮಂತ್ರಿಗಳೂ ಗುರುವಾರ ರಾಜೀನಾಮೆ ನೀಡಿರುವುದಾಗಿ ಆಡಳಿತ ಬಿಜೆಪಿ ಮೂಲಗಳು ತಿಳಿಸಿವೆ.**

ಬಿಜೆಪಿ ನಾಯಕತ್ವ ಗುಜರಾತ್‌ನಲ್ಲಿ ಸಂಪುಟ ವಿಸ್ತರಣೆಗೆ ನಿರ್ಧರಿಸಿರುವ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ. ಪಟೇಲ್ ಅವರು ಶುಕ್ರವಾರ ಸಂಪುಟ ವಿಸ್ತರಣೆ ಮಾಡಲಿದ್ದಾರೆಂದು ಇಂದು ಬೆಳಿಗ್ಗೆ ಬಿಜೆಪಿ ಹೇಳಿದೆ.

ಎಲ್ಲ 16 ಮಂತ್ರಿಗಳ ರಾಜೀನಾಮೆಯನ್ನು ಪಕ್ಷಪಡೆದುಕೊಂಡಿದೆ. ಮುಖ್ಯಮಂತ್ರಿ ಪಟೇಲ್ ಹೊರತಾಗಿ ಎಲ್ಲ ಮಂತ್ರಿಗಳೂ ರಾಜೀನಾಮೆ ನೀಡಿದ್ದಾರೆಂದು ಬಿಜೆಪಿ ಮೂಲಗಳು ತಿಳಿಸಿವೆ. ಶುಕ್ರವಾರ ಪೂರ್ವಾಹ್ನ ಗಂಟೆ 11.30ಕ್ಕೆ ಸಂಪುಟ ವಿಸ್ತರಣೆಯಾಗಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ನಾಳೆ ನಡೆಯಲಿರುವ ಸಂಪುಟ ವಿಸ್ತರಣೆಯಲ್ಲಿ ಸುಮಾರು 22 ಸಚಿವರ ಪದಗ್ರಹಣ ನಡೆಯಲಿದ್ದು, ಅದರಲ್ಲಿ ಆರು ಹಾಲಿ ಸಚಿವರೂ ಉಳಿಯಲಿದ್ದಾರೆಂದು ಮೂಲಗಳು ತಿಳಿಸಿವೆ. **3ನೇ ಪುಟಕ್ಕೆ**

## ಬಿಹಾರ : ಜೆಡಿಯು 101 ಅಭ್ಯರ್ಥಿಗಳ ಪಟ್ಟಿ ಪ್ರಕಟ

**ಪಾಟ್ನ, ಅ.16- ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಆಡಳಿತ ಜೆಡಿಯು ಪಕ್ಷದ ಎಲ್ಲ 101 ಅಭ್ಯರ್ಥಿಗಳ ಹೆಸರುಗಳನ್ನು ಗುರುವಾರ ಪ್ರಕಟಿಸಿದ್ದು, ಅವರು ಹಿಂದುಳಿದ ವರ್ಗಗಳು ಮತ್ತು ಅತ್ಯಂತ ಹಿಂದುಳಿದ ವರ್ಗಗಳಿಗೆ ಅವುಗಳಲ್ಲಿ ಅರ್ಧಕ್ಕೂ ಹೆಚ್ಚು ಸೀಟುಗಳನ್ನು ನೀಡಿದ್ದು, ನಾಲ್ವರು ಮುಸ್ಲಿಮರಿಗೂ ಟಿಕೆಟ್ ನೀಡಿದ್ದಾರೆ.**

ಜೆಡಿಯು ಇಂದು 44 ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಿಸಿದೆ . ಬುಧವಾರ ಪಕ್ಷ 57 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿತ್ತು. ಜೆಡಿಯು ಪಕ್ಷದ ಹಲವರು ಅಭ್ಯರ್ಥಿಗಳ ಪಟ್ಟಿ ಪ್ರಕಟ ಮೊದಲೇ ಮಂಗಳವಾರವೇ ತಾನು ಪತ್ರ ಸಲ್ಲಿಸಿಯೂ ಆಗಿತ್ತು.

ನಿತೀಶ್ ಕುಮಾರ್ ಅವರು ಇತರ ಹಿಂದುಳದ ವರ್ಗಗಳಿಗೆ ( ಒಬಿಸಿ) 37 ಸೀಟುಗಳನ್ನು ನೀಡಿದ್ದರೆ ಅತ್ಯಂತ ಹಿಂದುಳಿದ ವರ್ಗಗಳಿಗೆ ( ಇಬಿಸಿ) 22 ಸ್ಥಾನ ನೀಡಿದ್ದಾರೆ. ಮೇಲ್ದರ್ಜೆ ಜಾತಿಗಳಿಂದ ಅವರು 22 ಜನರಿಗೆ ಟಿಕೆಟ್ ನೀಡಿದ್ದಾರೆ. ಮುಸ್ಲಿಮರಿಗೆ ಕೇವಲ 4 ಸೀಟು ನೀಡಿರುವುದರಿಂದ ಜೆಡಿಯು ಅಲ್ಪ ಸಂಖ್ಯಾಪರ ಮತಗಳನ್ನು ಕಳೆದುಕೊಳ್ಳಬಹುದು ಎಂಬ ವದಂತಿ ಹರಡಿದೆ. **3ನೇ ಪುಟಕ್ಕೆ**



# ಸಮ್ಮಿಶ್ರ ಸರ್ಕಾರ ಬಿದ್ದು ಹೋಗುವ ವೇಳೆ ಪಕ್ಷನಿಷ್ಠನಾಗಿ ಜೈಲುವಾಸ ಆಯ್ಕೆ ಮಾಡಿಕೊಂಡೆ : ಡಿ.ಕೆ. ಶಿವಕುಮಾರ್



ಬೆಂಗಳೂರು, ಅ. 16 - ಸಮ್ಮಿಶ್ರ ಸರ್ಕಾರ ಬಿದ್ದು ಹೋಗುವ ವೇಳೆ ಪಕ್ಷನಿಷ್ಠನಾಗಿ ಜೈಲುವಾಸ ಆಯ್ಕೆ ಮಾಡಿಕೊಂಡೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ನಗರದ ಎಫ್ ಕೆಸಿಸಿಐ ಸಭಾಂಗಣದಲ್ಲಿ ಬುಧವಾರ ನಡೆದ ಕೆ.ಎಂ. ರಘು ಡೈರೆಕ್ಟರ್ ಅವರು ಬರೆದಿರುವ ಡಿ.ಕೆ. ಶಿವಕುಮಾರ್ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಿಸಿಎಂ ಮಾತನಾಡಿದರು.

ಸಮ್ಮಿಶ್ರ ಸರ್ಕಾರದಲ್ಲಿ ಹತ್ತು ಜನ ಶಾಸಕರು ರಾಜೀನಾಮೆ ನೀಡಲು ಹೊರಟಿದ್ದರು. ಕನಕಪುರದಲ್ಲಿದ್ದ ನಾನು ಬೆಂಗಳೂರಿಗೆ ಬಂದು ಐದಾರು ಜನರನ್ನು ವಾಪಸ್ ಕ್ವಾಟ್ರಸ್‌ಗೆ ಕರೆದುಕೊಂಡು ಬಂದೆ. ಆಗ ನನಗೆ ಒಬ್ಬ ಆದಾಯ ತೆರಿಗೆ ಆಡಿಟರ್‌ಫೋನ್ ನಿಂದ ಕರೆ ಬಂದಿತ್ತು. ನನ್ನ ಜೊತೆ ಡಿಜಿಯೂ ಇದ್ದರು. ಅವರು ದೂರವಾಣಿ ಕರೆಯಲ್ಲಿ ಮಾತನಾಡಿದರು. ನನ್ನ ಜೊತೆ ಡಿ.ಕೆ. ಸುರೇಶ್ ಅವರೂ ಇದ್ದರು. ಕರೆ ಮಾಡಿದವರು ನೀವು ಡಿಸಿಎಂ ಆಗುವಿರಾ? ಅಥವಾ ಜೈಲಿಗೆ ಹೋಗುವಿರಾ? ಎಂದು ಕೇಳಿದರು. ಎಲ್ಲಾ ಶಾಸಕರನ್ನು ವಾಪಸ್ಸು ಕರೆದುಕೊಂಡು ಬನ್ನಿ ಎಂದು ಆಯ್ಕೆ ನೀಡಿದರು ಎಂದು ತಿಳಿಸಿದರು.

ಆಗ ನಾನು ನನಗೆ ಇಷ್ಟೆಲ್ಲಾ ಸ್ಥಾನ ನೀಡಿರುವ ಪಕ್ಷವನ್ನು ಬಿಡುವುದಿಲ್ಲ. ಬೇಕಾದರೆ ಜೈಲಿಗೆ ಹೋಗುತ್ತೇನೆ ಎಂದೆ. ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ ರಾಜೀವ್ ಗಾಂಧಿ ಅವರು ನನಗೆ ಟಿಕೆಟ್ ನೀಡಿ, ಮಂತ್ರಿ ಮಾಡಿದ್ದರು. ಬಂಗಾರಪ್ಪ ಅವರು ನನಗೆ ಸಹಕಾರ ನೀಡಿದ್ದರು. ಈ ಪಕ್ಷದಿಂದ ಈ ಮಟ್ಟಕ್ಕೆ ಬೆಳೆದಿದ್ದೇನೆ ಎಂದು ಜೈಲು ಆಯ್ಕೆ ಮಾಡಿಕೊಂಡೆ. ಅಂದು ನಾನು ಬೇರೆ ಆಯ್ಕೆ ಮಾಡಿದ್ದರೆ ಏನೇನು ಆಗುತ್ತಿತ್ತೋ ಗೊತ್ತಿಲ್ಲ? ಎಂದರು.

**ಶಾಲಾ ಚುನಾವಣೆಯಲ್ಲಿಯೇ ಅನೇಕ ಒತ್ತಡಗಳಿಂದ ನನಗೆ ಬೇರೆ ಸ್ಥಾನ ನೀಡಲಾಗಿತ್ತು**

ನಾನು ವಿದ್ಯಾರ್ಥಿ ದೆಸೆಯಿಂದಲೇ ರಾಜಕೀಯ ನಾಯಕನಾಗಬೇಕು ಎನ್ನುವ ಅಭಿಲಾಷೆ ಹೊಂದಿದ್ದವನು. ಮೌಂಟ್ ಕಾರ್ಮೆಲ್ ಶಾಲಾ ಚುನಾವಣೆಯಲ್ಲಿ ಗೆದ್ದಿದ್ದ ನನಗೆ ಅಂದೇ ಅನೇಕ ಒತ್ತಡಗಳಿಂದ ಪ್ರತ್ಯೇಕ ಸ್ಥಾನ ನೀಡಲಾಯಿತು ಎಂದು ತಿಳಿಸಿದರು.

ಚುನಾವಣೆಯ ಕೌಂಟಿಂಗ್ ಪ್ರತಿನಿಧಿಯಾಗಿದ್ದ ನನ್ನ ಸಹಪಾಠಿ ಮಾಧವ ನಾಯಕ್ ನೀನು 400 ಮತಗಳಿಂದ ಗೆಲ್ಲುತ್ತೀಯಾ ಎಂದಿದ್ದನು. ಆದರೆ, ಬೆಳಿಗ್ಗೆ ಫಲಿತಾಂಶ ಘೋಷಣೆ ಮಾಡುವಾಗ ಬೇರೆ ಯಾವುದೋ ಹುಡುಗಿಯ ಹೆಸರನ್ನು ಘೋಷಣೆ ಮಾಡಲಾಯಿತು. ನನಗೆ ಪ್ರತ್ಯೇಕವಾಗಿ ಕ್ರೀಡಾ ಕಾರ್ಯದರ್ಶಿ ಹುದ್ದೆ ನೀಡಲಾಯಿತು ಎಂದರು.

ರಾಜಕಾರಣದಲ್ಲಿಯೂ ಸುಮಾರು ಶೇ.80 ರಷ್ಟು ಜನ ದುಡಿಯುತ್ತಲೇ ಇದ್ದಾರೆ. ಶೇ. 20 ರಷ್ಟು ಜನರಿಗೆ ಮಾತ್ರ ಸಣ್ಣಪುಟ್ಟ ಸ್ಥಾನಮಾನ ಸಿಕ್ಕಿದೆ. ನನಗೂ 63 ವರ್ಷವಾಯಿತು. ನಾವುಗಳೇ ಇನ್ನೆಷ್ಟು ದಿನ ರಾಜಕಾರಣ ಮಾಡಲು ಸಾಧ್ಯ? ಹೊಸಬರು ಬರಬೇಕು. ಐದು ಪಾಲಿಕೆಗಳು ಮಾಡಿದ ಕಾರಣಕ್ಕೆ ಬೆಂಗಳೂರಿನಲ್ಲಿ ಹೊಸದಾಗಿ 500 ಕ್ಕೂ ಹೆಚ್ಚು ನಾಯಕರು ಬೆಳಕಿಗೆ ಬರಲಿದ್ದಾರೆ ಎಂದರು.

**ನಾನು ಜಾತ್ಯತೀತ ತತ್ವದಲ್ಲಿ ಬೆಳೆದವನು:**

ಜಾತ್ಯಾತೀತ ತತ್ವದಲ್ಲಿ ಬೆಳೆದವನು. ಸದನದಲ್ಲಿ ಆರ್‌ಎಸ್‌ಎಸ್ ಬಗ್ಗೆ ತಿಳಿದಿದೆ ಎಂದು ಹೇಳಿದೆ ಅಷ್ಟೇ. ಅದನ್ನೇ ದೊಡ್ಡದಾಗಿ ಬಿಂಬಿಸಲಾಯಿತು. ಕಾರ್ಯಕರ್ತರಿಗೆ, ನನ್ನ ನಂಬಿಕೊಂಡವರಿಗೆ ನೋವಾಗಬಾರದು ಎಂದು ನಾನು ಏನೂ ಮಾತನಾಡಲಿಲ್ಲ ಎಂದರು

ನಾನು ಪುಸ್ತಕ ಓದುವವನಲ್ಲ. ಶಾಲೆ, ಕಾಲೇಜುಗಳಲ್ಲಿ ಓದಲಿಲ್ಲ. ಅಂದಿನಿಂದಲೂ ರಾಜಕಾರಣ ಮಾಡಿಕೊಂಡು ಬೆಳೆದವನು ನಾನು. ಅಂತಿಮ ಪದವಿ ಓದುವಾಗ ಟಿಕೆಟ್ ದೊರೆಯಿತು. ಇದನ್ನು ಯಾರೂ ಸಹ ಊಹಿಸಲೂ ಸಾಧ್ಯವಿಲ್ಲ. ಅಂದಿನಿಂದ 8 ಬಾರಿ ಶಾಸಕನಾಗಿ ಇಂದು ಉಪಮುಖ್ಯಮಂತ್ರಿಯಾಗಿದ್ದೇನೆ ಎಂದರು.

**ಟೀಕೆಗಳನ್ನು ಮುಕ್ತವಾಗಿ ಸ್ವೀಕರಿಸುವೆ**

ಟೀಕೆಗಳನ್ನು ಮುಕ್ತವಾಗಿ ನಾನು ಸ್ವೀಕಾರ ಮಾಡುತ್ತೇನೆ. ಸ್ನೇಹಿತರು ಟೀಕೆ ಮಾಡುತ್ತಾರೆ. ವೈರಿಗಳು ನನ್ನ ಬಗ್ಗೆ ಇಲ್ಲ ಸಲ್ಲದ ಸಂಗತಿಗಳನ್ನು ಕಟ್ಟಿ ಮಾತನಾಡುತ್ತಾರೆ. ಆಪಾದನೆಗಳನ್ನು ಮಾಡುತ್ತಾರೆ. ಆದರೂ ನಾನು ಸಂತೋಷದಿಂದ ಕೇಳಿಸಿಕೊಳ್ಳುತ್ತೇನೆ ಎಂದರು.

> **ನಾನು ರಾಜೀವ್ ಗಾಂಧಿ ಮಾತಿನ ಮೇಲೆ ನಂಬಿಕೆ ಇಟ್ಟವನು :**
>
> ಈ ಪುಸ್ತಕ ರಾಜಕೀಯದಲ್ಲಿ ಬೆಳೆಯಬೇಕು ಎನ್ನುವವರಿಗೆ ಒಂದಷ್ಟು ಮಾರ್ಗದರ್ಶನ ನೀಡಬಹುದು. ಏಕೆಂದರೆ ನಾನು ರಾಜೀವ್ ಗಾಂಧಿ ಅವರ ಮಾತಿನ ಮೇಲೆ ನಂಬಿಕೆ ಇಟ್ಟವನು. ಹಿಂಬಾಲಕರನ್ನು ಸೃಷ್ಟಿಸಬೇಡಿ ನಾಯಕರನ್ನು ಸೃಷ್ಟಿಸಿ ಎನ್ನುವ ಮಾತನ್ನು ಹೆಚ್ಚು ನಂಬುವವನು ಎಂದರು. ನಾನು ಇಷ್ಟು ಎತ್ತರಕ್ಕೆ ಬೆಳೆಯಲು ನನ್ನ ಕ್ಷೇತ್ರದ ಜನತೆ ಹಾಗೂ ಪಕ್ಷದ ಕಾರ್ಯಕರ್ತರು ಕಾರಣ. ತಿಹಾರ್ ಜೈಲಿಗೆ ನನ್ನ ಮೇಲೆ ಷಡ್ಯಂತ್ರ ಮಾಡಿ ಕಳುಹಿಸಿದಾಗಲೂ ಈ ಜನ ನನ್ನ ಜೊತೆ ನಿಂತಿದ್ದಾರೆ. ಲಕ್ಷಾಂತರ ಜನರು, ತಾಯಂದಿರು ಹರಕೆ ಕಟ್ಟಿಕೊಂಡು ನನ್ನ ಪರವಾಗಿ ಪ್ರಾರ್ಥನೆ ಮಾಡಿದ್ದರು. ಎಲ್ಲರ ಹರಕೆ, ಹಾರೈಕೆಯಿಂದ ನಾನು ನಿಮ್ಮ ಮುಂದೆ ನಿಂತಿದ್ದೇನೆ ಎಂದರು.

ದೇವೆಗೌಡರು, ಕುಮಾರಸ್ವಾಮಿ ವಿರುದ್ಧ ರಾಜಕೀಯ ಮಾಡಿದ್ದೇನೆ. ಜಾತ್ಯಾತೀತತೆ ಉಳಿಯಬೇಕು ಎನ್ನುವ ಕಾರಣಕ್ಕೆ, ಹೈ ಕಮಾಂಡ್ ಹೇಳಿದಕ್ಕೆ ಅವರ ಕೈ ಹಿಡಿದು ಮೇಲಕ್ಕೆತ್ತಿ ಮುಖ್ಯಮಂತ್ರಿ ಮಾಡಿದ್ದೇವೆ. ನನ್ನ ಮನಸ್ಸು ಒಪ್ಪಿತೋ ಇಲ್ಲವೋ ಬೇರೆ ವಿಚಾರ. ಆದರೆ, ಪಕ್ಷದ ಮಾತಿಗೆ ನಿಷ್ಠನಾಗಿ ನಡೆದುಕೊಂಡೆ. ನಾನು ಜೈಲಿಗೆ ಹೋದ ತಕ್ಷಣ ನಾವೇನಾದರೂ ದುಡ್ಡು ಹೊಡೆಯಲು ಹೇಳಿದ್ದೇವೆಯೋ ಎನ್ನುವ ಮಾತನ್ನೂ ಇದೇ ಕಿವಿಯಲ್ಲಿ ಕೇಳಿದ್ದೇನೆ ಎಂದರು.

**ಪುಸ್ತಕದಲ್ಲಿ ಶೇ.99ರಷ್ಟು ಸತ್ಯ ಸಂಗತಿಗಳು ಕಾಣುತ್ತಿವೆ:**

ಪುಸ್ತಕದ ಲೇಖಕ ರಘು ನನಗೆ ಪರಿಚಿತನಲ್ಲ, ಪುಸ್ತಕ ಬರೆಯುತ್ತೇನೆ ಎಂದು ಅನುಮತಿ ಪಡೆದಿಲ್ಲ, ನನ್ನ ಬಳಿ ಹತ್ತು ನಿಮಿಷ ಮಾತನಾಡಿಲ್ಲ. ಆದರೆ, ತನ್ನದೇ ಆದ ಮಾದರಿಯಲ್ಲಿ ಸಂಶೋಧನೆ ಮಾಡಿದ್ದಾರೆ. ನನ್ನ ಭಾಷಣಗಳು ಸೇರಿದಂತೆ ಇತರೇ ಮಾತುಗಳನ್ನು ಕೇಳಿ ಮಾಹಿತಿ ಸಂಗ್ರಹ ಮಾಡಿದ್ದಾರೆ. ಇದರಲ್ಲಿ ಶೇ.99 ರಷ್ಟು ಸತ್ಯ ಸಂಗತಿಗಳು ಕಾಣುತ್ತಿವೆ ಎಂದರು.

ಮೈಸೂರಿನ ರಮ್ಯ ಎಂಬ ಪಿಎಚ್‌ಡಿ ವಿದ್ಯಾರ್ಥಿನಿ ನನ್ನ ಬಗ್ಗೆ ಕಳೆದ ಆರೇಳು ವರ್ಷಗಳಿಂದ ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆದಿದ್ದಾರೆ. ಆಕೆ ಸಹ ನನ್ನ ಬಗ್ಗೆ ಬರೆದಿರುವ ಪುಸ್ತಕ ಬಿಡುಗಡೆಗೆ ಬಂದಿಲ್ಲ. ಈ ಪುಸ್ತಕ ಬಿಡುಗಡೆಗೆ ಹೋಗುತ್ತಿದ್ದೀರಿ ಎಂದು ಬೇಸರಿಸುತ್ತಿದ್ದಳು. ನನ್ನ ಬಗ್ಗೆ ಅತ್ಯುತ್ತಮವಾಗಿ ಸಂಶೋಧನೆ ನಡೆಸಿ ರಘು ಅವರು ಪುಸ್ತಕ ಬರೆದಿದ್ದಾರೆ. ನನ್ನ ಬಗ್ಗೆ ತಿಳಿದುಕೊಳ್ಳಲು, ನನ್ನ ಹೆಜ್ಜೆಗಳನ್ನು ಅರಿಯಲು ಈ ಪುಸ್ತಕ ನೆರವಾಗುತ್ತದೆ. ನನ್ನ ಶ್ರಮ, ಫಲವನ್ನು ಈ ಪುಸ್ತಕದ ಮೂಲಕ ತಿಳಿದುಕೊಳ್ಳಬಹುದು ಎಂದರು.

ಸಮಾರಂಭದ ನಂತರ ಮಾಧ್ಯಮಗಳಿಗೆ ಹೇಳಿಕೆ ನೀಡಿದ ಡಿಸಿಎಂ ಅವರು ಜಾತಿಗಣತಿಗೆ ಮಾಹಿತಿ ನೀಡುವುದಿಲ್ಲ ಎನ್ನುವ ಸುಧಾಮೂರ್ತಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಯಾರನ್ನೂ ಮಾಹಿತಿ ನೀಡಿ ಎಂದು ಬಲವಂತ ಮಾಡಲು ಆಗುವುದಿಲ್ಲ. ಇದು ಅವರ ಇಚ್ಛೆ ಎಂದರು.

# ಸರ್ಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದನ್ನು ನಿಷೇಧಿಸುವಂತೆ ಸಿಎಂಗೆ ಪ್ರಿಯಾಂಕ್ ಖರ್ಗೆ ಮತ್ತೊಂದು ಪತ್ರ



ಬೆಂಗಳೂರು, ಅ. 16 - ಆರ್‌ಎಸ್‌ಎಸ್ ವಿಚಾರವಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಿಎಂ ಸಿದ್ದರಾಮಯ್ಯಗೆ ಮತ್ತೊಂದು ಪತ್ರ ಬರೆದಿದ್ದಾರೆ. ಈ ಬಾರಿ ಸರ್ಕಾರಿ ನೌಕರರು ಆರ್‌ಎಸ್‌ಎಸ್ ಸಂಘದ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸುವಂತೆ ಕೋರಿದ್ದಾರೆ.

ತಮ್ಮ ಪತ್ರದಲ್ಲಿ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು, 2021 ಅಡಿ ನಿಯಮ 5(1) ಪ್ರಕಾರ ಈ ಕೆಳಕಂಡ ನಿಯಮವು ಈಗಾಗಲೇ ಜಾರಿಯಲ್ಲಿದೆ. ಅದರಂತೆ ಯಾರೇ ಸರ್ಕಾರಿ ನೌಕರನು, ಯಾವುದೇ ರಾಜಕೀಯ ಪಕ್ಷದ ಅಥವಾ ರಾಜಕಾರಣದಲ್ಲಿ ಭಾಗವಹಿಸುವಂಥ ಯಾವುದೇ ಸಂಘ ಸಂಸ್ಥೆಯ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಅವುಗಳೊಂದಿಗೆ ಅನ್ಯಥಾ ಸಂಬಂಧ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ರಾಜಕೀಯ ಚಳುವಳಿ ಅಥವಾ ಚಟುವಟಿಕೆಯಲ್ಲಿ ಭಾಗವಹಿಸತಕ್ಕದ್ದಲ್ಲ. ಅದರ ಸಹಾಯಾರ್ಥ ವಂತಿಗೆ ನೀಡತಕ್ಕದ್ದಲ್ಲ ಅಥವಾ ಅದಕ್ಕೆ ಯಾವುದೇ ರೀತಿಯ ನೆರವು ನೀಡತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ನಿರ್ದೇಶನ ನೀಡಲಾಗಿದೆ ಎಂದು ವಿವರಿಸಿದ್ದಾರೆ.

ಈ ಸ್ಪಷ್ಟ ನಿರ್ದೇಶನ ಇದ್ದರೂ ಸಹ ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಇತರೆ ಸಂಘ ಸಂಸ್ಥೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ಭಾಗವಹಿಸುತ್ತಿರುವುದನ್ನು ಗಮನಿಸಲಾಗಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಆದ್ದರಿಂದ ರಾಜ್ಯದ ಸರ್ಕಾರಿ ಅಧಿಕಾರಿ ಮತ್ತು ನೌಕರರು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಇತರೆ ಸಂಘ ಸಂಸ್ಥೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು. ಹಾಗೂ ಇದನ್ನು ಉಲ್ಲಂಘಿಸುವ ಅಧಿಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ಸುತ್ತೋಲೆಯನ್ನು ಹೊರಡಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಸಚಿವರು ಮನವಿ ಮಾಡಿದ್ದಾರೆ.

ಸರ್ಕಾರಿ ಜಾಗಗಳಲ್ಲಿ ಆರ್‌ಎಸ್‌ಎಸ್ ಕಾರ್ಯಕ್ರಮಗಳಿಗೆ ಅವಕಾಶ ನೀಡಬಾರದೆಂದು ಸಿಎಂಗೆ ಪತ್ರ ಬರೆದ ಬೆನ್ನಲ್ಲೇ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಕರೆಗಳು ಬರುತ್ತಿವೆ. ಈ ಸಂಬಂಧ ಅಪರಿಚಿತ ವ್ಯಕ್ತಿಗಳ ವಿರುದ್ಧ ಸದಾಶಿನವಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕರ್ನಾಟಕವು ಭಾರತದಲ್ಲಿ ಅತಿ ಹೆಚ್ಚು ಆನೆಗಳನ್ನು ಹೊಂದಿದ ರಾಜ್ಯ



ಬೆಂಗಳೂರು, ಅ. 16 - ಕಳೆದ 2021ರಲ್ಲಿ ಪ್ರಾರಂಭವಾದ ಡಿಎನ್‌ಎ ಆಧಾರಿತ ಆನೆಗಳ ಜನಸಂಖ್ಯಾ ಸಮೀಕ್ಷೆಯು ಸುಮಾರು 4 ವರ್ಷಗಳ ನಂತರ ಅ.14ರಂದು ಬಿಡುಗಡೆಯಾಗಿದೆ. ಈ ಸಮೀಕ್ಷೆಯ ಅಂಕಿ ಅಂಶಗಳ ಪ್ರಕಾರ ಕರ್ನಾಟಕವು ಭಾರತದಲ್ಲಿ ಅತಿ ಹೆಚ್ಚು ಕಾಡು ಆನೆಗಳನ್ನು ಹೊಂದಿದೆ.

ದೇಶದಲ್ಲಿ ಅಂದಾಜು 22,446 ಕಾಡು ಆನೆಗಳಿದ್ದು ಕರ್ನಾಟಕ ಭಾರತದಲ್ಲೇ ಮೊದಲ ಸ್ಥಾನದಲ್ಲಿದೆ. ಆದರೆ, 2017ರ ಡಿಎನ್‌ಎ ಆಧಾರಿತ ಎಣಿಕೆಯ ಪ್ರಕಾರ ಈ ಸಂಖ್ಯೆ 2017 ರ ಅಂಕಿ ಅಂಶವಾದ 27,312 ಕ್ಕಿಂತ ಕಡಿಮೆಯಾಗಿದೆ.

ದಕ್ಷಿಣ ರಾಜ್ಯಗಳು ಅತಿ ಹೆಚ್ಚು ಆನೆಗಳಿಗೆ ನೆಲೆಯಾಗಿವೆ ಎಂದು ಅಧ್ಯಯನ ವಿವರಿಸಿದ್ದು ಕರ್ನಾಟಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ತಮಿಳುನಾಡು 3ನೇ ಮತ್ತು ಕೇರಳ 4ನೇ ಸ್ಥಾನಗಳಲ್ಲಿವೆ. ದಕ್ಷಿಣದ ಮೂರು ರಾಜ್ಯಗಳು ಭಾರತದಲ್ಲಿ ಶೇ. 53.16ರಷ್ಟು ಆನೆಗಳನ್ನು ಹೊಂದಿವೆ. ಕರ್ನಾಟಕದಲ್ಲಿ 6,013, ತಮಿಳುನಾಡಿನಲ್ಲಿ 3,136 ಮತ್ತು ಕೇರಳದಲ್ಲಿ 2,785 ಆನೆಗಳಿದ್ದು, ಪಶ್ಚಿಮ ಘಟ್ಟಗಳಲ್ಲಿ ಆನೆಗಳ ಒಟ್ಟು ಸಂಖ್ಯೆ 11,934 ಕ್ಕೆ ತಲುಪಿದೆ.

ಈ ಅಧ್ಯಯನದ ಪ್ರಕಾರ ಮಧ್ಯ ಭಾರತ ಮತ್ತು ಪೂರ್ವ ಘಟ್ಟಗಳಲ್ಲಿ 1,891 ಆನೆಗಳಿವೆ, ಶಿವಾಲಿಕ್ ಬೆಟ್ಟಗಳು ಮತ್ತು ಗಂಗಾ ಬಯಲು ಪ್ರದೇಶಗಳಲ್ಲಿ 2,062 ಆನೆಗಳು ಮತ್ತು ಈಶಾನ್ಯ ಬೆಟ್ಟಗಳು ಮತ್ತು ಬ್ರಹ್ಮಪುತ್ರ ಪ್ರವಾಹ ಬಯಲು ಪ್ರದೇಶಗಳಲ್ಲಿ 6,559 ಆನೆಗಳಿವೆ ಎಂದು ದಾಖಲಾಗಿದೆ. ಇದರಲ್ಲಿ ಪ್ರಮುಖವಾಗಿ ಅಸ್ಸಾಂ ಉತ್ತರ ಭಾರತದ ಆನೆಗಳ ಜನಸಂಖ್ಯೆ ವಿಷಯದಲ್ಲಿ ವಿಭಿನ್ನವಾಗಿದ್ದು, ಸುಮಾರು 4,159 ಆನೆಗಳಿಗೆ ನೆಲೆಯಾಗಿ 2ನೇ ಸ್ಥಾನದಲ್ಲಿದೆ, ಇದು ತಮಿಳುನಾಡು ಮತ್ತು ಕೇರಳದ ಎಣಿಕೆಗಿಂತ ಹೆಚ್ಚಾಗಿದೆ.

ಕಳೆದ ಐದು ವರ್ಷಗಳ ಅವಧಿಯಲ್ಲಿ ಈ ಸಮಿಕ್ಷೆಗಾಗಿ ತಂಡಗಳು 21,056 ಸಗಣಿ ಮಾದರಿಗಳನ್ನು ಮೌಲ್ಯಮಾಪನ ಮಾಡಿ, ಭಾರತದಲ್ಲಿ 26,645 ಆನೆಗಳಿರುವುದಾಗಿ ತೀರ್ಮಾನಿಸಿವೆ. ಆನೆಗಳ ಸಗಣಿಯ ಮಾದರಿ ಪಡೆದು ಡಿಎನ್‌ಎ ವಿಶ್ಲೇಷಣೆ ನಡೆಸಿರುವುದು ಇದೇ ಮೊದಲು.

ಈ ವರದಿ ಭವಿಷ್ಯದಲ್ಲಿ ಆನೆಗಳ ಮೇಲ್ವಿಚಾರಣೆ ಮತ್ತು ಅಂದಾಜಿಗೆ ಹೊಸ ಆಧಾರಸ್ತಂಭವಾಗಲಿದೆ. ಈ ವಿಧಾನವನ್ನು ಮತ್ತಷ್ಟು ಪರಿಷ್ಕರಿಸಲಾಗುವುದು. ಈ ಉದ್ದೇಶಕ್ಕಾಗಿಯೇ ಎಲ್ಲಾ ವನ್ಯಜೀವಿ ವಾರ್ಡನ್‌ಗಳಿಂದ ಅಭಿಪ್ರಾಯಗಳನ್ನು ಪಡೆಯಲಾಗಿದೆ.

ಪಶ್ಚಿಮ ಘಟ್ಟಗಳಲ್ಲಿ ಒಂದು ಕಾಲದಲ್ಲಿ ಹೊಂದಿಕೊಂಡೇ ಇದ್ದ ಆನೆಗಳ ಸಂಖ್ಯೆ, ವಾಣಿಜ್ಯ ತೋಟಗಳು (ಕಾಫಿ ಮತ್ತು ಚಹಾ), ಆಕ್ರಮಣಕಾರಿ ಸಸ್ಯಗಳು, ಕೃಷಿಭೂಮಿ ಬೇಲಿ, ಮಾನವ ಅತಿಕ್ರಮಣ ಮತ್ತು ಬೆಳೆಯುತ್ತಿರುವ ಅಭಿವೃದ್ಧಿ ಯೋಜನೆಗಳು ಸೇರಿದಂತೆ ಬದಲಾಗುತ್ತಿರುವ ಭೂ ಬಳಕೆಯಿಂದಾಗಿ ವೇಗವಾಗಿ ಸಂಪರ್ಕ ಕಡಿತಗೊಳ್ಳುತ್ತಿದೆ ಎಂದು ವರದಿ ಹೇಳಿದೆ.

ಪ್ರಾಜೆಕ್ಟ್ ಎಲಿಫೆಂಟ್‌ನ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ರಾಜನ್, ಡಿಎನ್‌ಎ ಆಧಾರಿತ ಮೌಲ್ಯಮಾಪನದ ಪ್ರಕಾರ, 2017 ರ ರಾಷ್ಟ್ರೀಯ ಸಿಂಕ್ರೊನೈಸ್ಡ್ ಅಂದಾಜಿನಲ್ಲಿ, ಕರ್ನಾಟಕದಲ್ಲಿ 6,049 ಆನೆಗಳಿವೆ ಎಂದು ಹೇಳಿದರು. ವ್ಯತ್ಯಾಸವೆಂದರೆ ಕೇವಲ 36 ಆನೆಗಳ (1%) ಕನಿಷ್ಠ ಕುಸಿತ, ಇದು ನಿರೀಕ್ಷಿತ ಅಂಕಿಅಂಶಗಳ ವ್ಯಾಪ್ತಿಯಲ್ಲಿದೆ.

ಪರಿಸರ ಸಚಿವಾಲಯ, ಪ್ರಾಜೆಕ್ಟ್ ಎಲಿಫೆಂಟ್ ಮತ್ತು ಭಾರತೀಯ ವನ್ಯಜೀವಿ ಸಂಸ್ಥೆ ಜಂಟಿಯಾಗಿ ನಡೆಸಿದ 2025ರ ಸರ್ವೆಯು ಭವಿಷ್ಯದಲ್ಲಿ ಆನೆಗಳ ಮೇಲ್ವಿಚಾರಣೆ ಮತ್ತು ಸಂರಕ್ಷಣಾ ಯೋಜನೆಗಳಿಗೆ ಹೊಸ ವೈಜ್ಞಾನಿಕ ಆಧಾರವನ್ನು ನೀಡಿದೆ.

# ಫಿಲಿಫೈನ್ಸ್ ಕೃಷಿ ವಿ.ವಿಗಳಿಗೆ ಸಚಿವ ಚಲುವರಾಯಸ್ವಾಮಿ ಭೇಟಿ




ಬೆಂಗಳೂರು, ಅ. 16 - ಕೃಷಿ ಸಂಶೋಧನೆಗಳ ಅಧ್ಯಯನಕ್ಕಾಗಿ ಅಧಿಕೃತ ಫಿಲಿಫೈನ್ಸ್ ಪ್ರವಾಸಕ್ಕೆ ತೆರಳಿರುವ ಕೃಷಿ ಸಚಿವರಾದ ಎನ್.ಚಲುವರಾಯಸ್ವಾಮಿ ಅವರು ಅಲ್ಲಿನ ವಿವಿಧ ಕೃಷಿ ವಿವಿಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ಅಕ್ಟೋಬರ್ 15ರಂದು ಅಂತರಾಷ್ಟ್ರೀಯ ಭತ್ತ ಸಂಶೋಧನೆ ಕೇಂದ್ರಕ್ಕೆ ಭೇಟಿ ನೀಡಿದ್ದ ಸಚಿವರು ಇಂದು ರಾಜಧಾನಿ ಮನಿಲಾದ ಡಿ.ಎಲ್.ಎಸ್ .ಎ ಖಾಸಗಿ ಸಮಗ್ರ ಕೃಷಿ ವಿ.ವಿಗೆ ಭೇಟಿ ನೀಡಿ ಮಾಹಿತಿ ಪಡೆದರು.

ಅಲ್ಲಿನ ಕೃಷಿ ಯಾಂತ್ರೀಕರಣ, ರೈತರು ಹಾಗೂ ಕೃಷಿ ಆರ್ಥಿಕತೆ ಅಭಿವೃದ್ಧಿ ಮುನ್ನೋಟಗಳು, ಪಶು ಪಸಂಗೋಪನೆಯನ್ನೂ ಒಳಗೊಂಡಂತೆ ಕೃಷಿ, ಆಹಾರ ವಿಜ್ಞಾನ ಅಧ್ಯಯನ ಬೋದನಾ ಕ್ರಮಗಳು, ಸಂಶೋಧನೆ, ಕ್ಷೇತ್ರ ಪ್ರಯೋಗಗಳ ಸ್ವರೂಪಗಳ ಬಗ್ಗೆ ಸಚಿವ ಎನ್ ಚಲುವರಾಯಸ್ವಾಮಿ ಇಲ್ಲಿಯ ತಜ್ಞರು, ಅಧಿಕಾರಿಗಳಿಂದ ಮಾಹಿತಿ ಪಡೆದು ವಿಚಾರ ವಿನಿಮಯ ಮಾಡಿಕೊಂಡರು.

ರಾಜ್ಯದಲ್ಲಿ ಕೃಷಿ, ತೋಟಗಾರಿಕೆ ಹಾಗೂ ಪಶುಪಾಲನೆ ಕ್ಷೇತ್ರಗಳ ಸಂಶೋಧನೆಗೆ ಹೆಚ್ಚು ಆಧ್ಯತೆ ನೀಡುವ ಸಲುವಾಗಿ ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆ ಮಾಡಿದ್ದು ಅದರಿಂದಾಗಿರುವ ಪರಿಣಾಮಗಳು, ಯೋಜಿತ ಸುಧಾರಣಾ ಚಿಂತನೆಗಳ ಬಗ್ಗೆ ಸಚಿವರು ಫಿಲಿಫೈನ್ಸ್ ನ ವಿಶ್ವ ವಿದ್ಯಾಲಯದ ತಜ್ಞರೊಂದಿಗೆ ಅಭಿಪ್ರಾಯ ಹಂಚಿಕೊಂಡರು.

ಕೃಷಿ ಕ್ಷೇತ್ರದ ಸುಧಾರಣೆ, ಸಂಶೋಧನೆ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ವಿನಿಮಯಕ್ಕೆ ಉಬಯ ರಾಷ್ಟ್ರಗಳ ಪ್ರತಿನಿಧಿಗಳು ಒಮ್ಮತ ವ್ಯಕ್ತಪಡಿಸಿದರು.

# ದೀಪಾವಳಿ ಕೊಡುಗೆ ಎಂದು ಹೇಳಿ ಕರ್ನಾಟಕ ಸರ್ಕಾರ ಬೆಂಗಳೂರು ಜನರ ಕಿಸೆಗೆ ಕೈ ಹಾಕಿದೆ : ಎಚ್‌ಡಿಕೆ



ಮಂಡ್ಯ, ಅ.16 - ದೀಪಾವಳಿ ಕೊಡುಗೆ ಕೊಡುತ್ತಿದ್ದೇವೆ ಎಂದು ಹೇಳಿ ರಾಜ್ಯ ಸರ್ಕಾರ ಬೆಂಗಳೂರು ಜನರ ಕಿಸೆಗೆ ಕೈ ಹಾಕಿದೆ. ಎ-ಖಾತಾ ಸೋಗಿನಲ್ಲಿ 15,000 ಕೋಟಿ ಸುಲಿಗೆ ಮಾಡುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ನೇರ ಆರೋಪ ಮಾಡಿದ್ದಾರೆ.

ಮಂಡ್ಯ ನಗರದ ಸಂಜಯ್ ವೃತ್ತದಲ್ಲಿ ಹೊಸದಾಗಿ ನಿರ್ಮಿಸಿರುವ ಸುಸಜ್ಜಿತ ಆಟೋ ನಿಲ್ದಾಣವನ್ನು ಉದ್ಘಾಟಿಸಿದ ಬಳಿಕ ರೈತ ಭವನದ ಬಳಿ ನಡೆದ ಮಾಧ್ಯಮಗೋಷ್ಟಿಯಲ್ಲಿ ಅವರು ಮಾತನಾಡಿದರು.

ದೀಪಾವಳಿ ಕೊಡುಗೆ ಎಂದರೆ ಏನೋ ನಮಗೆ ದೊಡ್ಡ ಕೊಡುಗೆಯನ್ನು ಕೊಡುತ್ತದೆ ಎಂದು ಜನರು ಭಾವಿಸಿದ್ದರು. ದೊಡ್ಡ ದೊಡ್ಡ ಜಾಹೀರಾತುಗಳನ್ನು ನೋಡಿ ನಾನು ಕೂಡ ಹಾಗೆಯೇ ಅಂದುಕೊಂಡಿದ್ದೆ. ಆದರೆ, ಅದು ದೀಪಾವಳಿ ಹೆಸರಿನಲ್ಲಿ ಜನರಿಗೆ ಮಾಡುತ್ತಿರುವ ಮಹಾನ್ ದೋಖಾ ಇದಾಗಿದೆ ಎಂದು ಕೇಂದ್ರ ಸಚಿವರು ಕಿಡಿಕಾರಿದರು.

ಬೆಂಗಳೂರು ನಗರ ಜನರಿಗೆ ದೀಪಾವಳಿ ಕೊಡುಗೆ ನೀಡಲು ಶಾಕ್ ಕೊಡ್ತಿದ್ದಾರೆ. ಅದು ಹೇಗಿದೆ ಎಂದರೆ, ಬಿ-ಖಾತಾದಿಂದ ಎ ಖಾತಾಗೆ ಪರಿವರ್ತನೆ ಮಾಡುವ ಅರ್ಜಿಗೆ 500 ರೂಪಾಯಿ ಶುಲ್ಕ ತುಂಬಬೇಕು. ಆ ಶುಲ್ಕದ ಹೆಸರಿನಲ್ಲಿಯೇ ನೂರಾರು ಕೋಟಿ ರೂಪಾಯಿ ಸುಲಿಗೆ ಮಾಡುತ್ತಿದೆ ಈ ಸರ್ಕಾರ. 30/40 ನಿವೇಶನಕ್ಕೆ 4 ರಿಂದ 8 ಲಕ್ಷ ರೂಪಾಯಿವರೆಗೂ ಕಿತ್ತುಕೊಳ್ಳುತ್ತಿದ್ದಾರೆ. ಮೊದಲು 10 ರಿಂದ 13 ಸಾವಿರ ರೂಪಾಯಿ ಅಷ್ಟನ್ನೇ ಕಟ್ಟಬೇಕಿದ್ದ ಬೆಂಗಳೂರು ಜನರು ಇನ್ನು ಮುಂದೆ ಲಕ್ಷಗಳಲ್ಲಿ ಹಣ ಏರಬೇಕಿದೆ. ಎ-ಖಾತಾ ದಂಧೆಯ ಮೂಲಕ ರಾಜ್ಯ ಸರ್ಕಾರ 15,000 ಕೋಟಿ ರೂಪಾಯಿ ವಸೂಲಿ ಮಾಡುತ್ತಿದೆ ಎಂದು ಕೇಂದ್ರ ಸಚಿವರು ಆರೋಪ ಮಾಡಿದರು.

ಗ್ಯಾರಂಟಿ ಕೊಟ್ಟು ಜನರ ಬದುಕು ಹಸನು ಮಾಡೋದು ಎಂದರೆ ಹೀಗೆನಾ? ಜನರ ಮೇಲೆ ತೆರಿಗೆ ವಿಧಿಸಿ 6ನೇ ಗ್ಯಾರಂಟಿ ಕೊಡಲು ಹೊರಟಿದ್ದಾರೆ. ಈ ಸರ್ಕಾರ ಬಂದ ಮೇಲೆ ನಿರಂತರವಾಗಿ ಸುಲಿಗೆ ಮಾಡುತ್ತಿದೆ. ಕೇವಲ ಹಣ ಮಾಡುವುದಕ್ಕೆ ಸರ್ಕಾರ ಹೊರಟಿದೆ. ಪ್ರತಿಯೊಂದರಲ್ಲಿ ದುಡ್ಡು ಮಾಡುವ ಬಗ್ಗೆಯಷ್ಟೇ ಆಲೋಚನೆ ಮಾಡುತ್ತಿದೆ ಎಂದು ಕಟುವಾಗಿ ಟೀಕಿಸಿದರು.

ಈ ಸರ್ಕಾರದಲ್ಲಿ ಹಣ ಇಲ್ಲ. ಅದಕ್ಕೆ ಕಂಡ ಕಂಡ ಕಡೆ ಹಣಕ್ಕೆ ಕೈ ಹಾಕುತ್ತಿದೆ. ಜೆಡಿಎಸ್ ಕೊಡುಗೆ ಏನು ಎಂದು ಹಾಸನದಲ್ಲಿ ಸಿಎಂ ಪ್ರಶ್ನೆ ಮಾಡಿದ್ದಾರೆ. ನನ್ನ ಆರೋಗ್ಯ ವಿಚಾರಿಸಲು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೊಬ್ಬರು ದೆಹಲಿಗೆ ಬಂದಿದ್ದರು. 2018ರಲ್ಲಿ ನೀವು ಕೊಟ್ಟ 500 ಕೋಟಿ ರೂಪಾಯಿ ಅನುದಾನದಲ್ಲಿಯೇ ಇನ್ನೂ ಕೆಲಸ ನಡೆಯುತ್ತಿದೆ ಎಂದು ಅವರೇ ಹೇಳುತ್ತಾರೆ. ಅನುದಾನದ ಬಗ್ಗೆ ಮಾತನಾಡುವ ಮುಖ್ಯಮಂತ್ರಿಗಳು, ನಾನು ಅಧಿಕಾರದಲ್ಲಿ ಇದ್ದಾಗ ಎಷ್ಟು ಕೊಟ್ಟಿದ್ದೇನೆ, ಇವರು ಎಷ್ಟು ಕೊಟ್ಟಿದ್ದಾರೆ ಎಂಬ ಬಗ್ಗೆ ಜನರ ಮುಂದೆ ದಾಖಲೆ ಇಡಲಿ ಎಂದು ಕೇಂದ್ರ ಸಚಿವರು ಸವಾಲು ಹಾಕಿದರು.

**ಸುಸಜ್ಜಿತ ಆಟೋ ನಿಲ್ದಾಣ ಲೋಕಾರ್ಪಣೆ:**

ಮಂಡ್ಯದ ಸಂಜಯ ನಗರ ವೃತ್ತದಲ್ಲಿ 35 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಆಗಿರುವ ಸುಸಜ್ಜಿಯ ಆಟೋ ನಿಲ್ದಾಣವನ್ನು ಇದೇ ಸಂದರ್ಭದಲ್ಲೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಉದ್ಘಾಟನೆ ಮಾಡಿದರು.

# ಮಂಗಳೂರಿನಲ್ಲಿ ತಿರುಪತಿ ದೇವಸ್ಥಾನ ; ಟಿಟಿಡಿ ಸದಸ್ಯ ಎಸ್ ನರೇಶ್ ಕುಮಾರ್



ಬೆಂಗಳೂರು, ಅ. 16 - ಮಂಗಳೂರಿನಲ್ಲಿ ತಿರುಪತಿ ದೇವಸ್ಥಾನ ಮತ್ತು ಕಲ್ಯಾಣಮಂಟಪ ನಿರ್ಮಾಣ ಮಾಡುವ ಪ್ರಸ್ತಾವನೆಗೆ ಟಿಟಿಡಿ ಒಪ್ಪಿಗೆ ನೀಡಿದೆ ಎಂದು ಟಿಟಿಡಿ ಸದಸ್ಯರಾದ ಎಸ್. ನರೇಶ್ ಕುಮಾರ್ ತಿಳಿಸಿದರು.

ನಗರದಲ್ಲಿಂದು 2026 ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆ ಮಾಡಿ ಮಾತನಾಡಿ, ಇತ್ತೀಚೆಗೆ ನಡೆದ ಟಿಟಿಡಿ ಮಂಡಳಿ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಟಿಟಿಡಿ ಆಡಳಿತ ಮಂಡಳಿಯ ಮುಂದೆ ಇಡಲಾಗಿತ್ತು. ಅದಕ್ಕೆ ಆಡಳಿತ ಮಂಡಳಿಯು ತನ್ನ ಒಪ್ಪಿಗೆ ನೀಡಿದೆ ಎಂದರು ಅವರು ಮಾಹಿತಿ ನೀಡಿದರು.

ಕರ್ನಾಟಕ ಸರ್ಕಾರದಿಂದ ಜಾಗ ಮಂಜೂರು ಆದ ಬಳಿಕ ನಿರ್ಮಾಣ ಕಾರ್ಯಕ್ಕೆ ಚಾಲನೆ ಸಿಗಲಿದೆ.

ಇದೇ ವೇಳೆ ಟಿಟಿಡಿ ದೇವಸ್ಥಾನದ 2026ನೇ ಸಾಲಿನ ಕ್ಯಾಲೆಂಡರ್ ಮತ್ತು ಡೈರಿಯನ್ನು ಟಿಟಿಡಿ ಸದಸ್ಯರಾದ ಎಸ್. ನರೇಶ್ ಕುಮಾರ್ ಮತ್ತು ಟಿಟಿಡಿ ಬೆಂಗಳೂರು ದೇವಸ್ಥಾನದ ಸೂಪರಿಂಟೆಂಡೆಂಟ್ ಜಯಂತಿ ಅವರು ಅನಾವರಣಗೊಳಿಸಿದರು.

ತಿರುಪತಿಯು ಬೌದ್ಧರ ಕ್ಷೇತ್ರವಾಗಿತ್ತು ಎನ್ನುವ ಬೌದ್ಧ ಚಿಂತಕಿ ಜಯದೇವಿ ಗಾಯಕವಾಡ ಅವರ ಹೇಳಿಕೆಗೆ ನರೇಶ್ ಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದು ತೀರಾ ಹಾಸ್ಯಾಸ್ಪದ. ಹೆಸರು ಮಾಡಬೇಕು, ಪ್ರಚಾರ ಪಡ್ಕೋಬೇಕು ಅಂತ ಧರ್ಮನ ಬಳಸ್ಕೋಳ್ಳೋದು ಸರಿ ಅಲ್ಲ ಎಂದರು ನರೇಶ್ ಕುಮಾರ್ ಅವರು ಇದೇ ವೇಳೆ ಅಭಿಪ್ರಾಯಪಟ್ಟರು.

# ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಗೆ 2 ತಿಂಗಳು ವಿಜಯಪುರ ಜಿಲ್ಲೆಗೆ ಪ್ರವೇಶಿಸದಂತೆ ನಿರ್ಬಂಧ



ವಿಜಯಪುರ, ಅ. 16 - ಲಿಂಗಾಯತ ಮಠಾಧೀಶರ ಒಕ್ಕೂಟದ ಸ್ವಾಮಿಜಿಗಳ ಅವಹೇಳನ ಮತ್ತು ಧರ್ಮದ ಹೆಸರಿನಲ್ಲಿ ವಿಭಜನೆ ಮೂಡಿಸಬಹುದಾದ ಅಸಂವಿಧಾನಿಕ ಆಶ್ಲೀಲ ಭಾಷೆ ಬಳಸಿದ ಆರೋಪದ ಹಿನ್ನಲೆ ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಜಿ ಎರಡು ತಿಂಗಳುಗಳ ಕಾಲ ವಿಜಯಪುರ ಜಿಲ್ಲೆಗೆ ಪ್ರವೇಶಿಸದಂತೆ ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ. ಆನಂದ್ ಆದೇಶ ಹೊರಡಿಸಿದ್ದಾರೆ.

ಆದೇಶದ ಅನ್ವಯ ಅಕ್ಟೋಬರ್ 16ರಿಂದ ಡಿಸೆಂಬರ್ 14ರ ವರೆಗೆ ಸ್ವಾಮೀಜಿ ವಿಜಯಪುರ ಜಿಲ್ಲೆಗೆ ಭೇಟಿ ನೀಡುವಂತಿಲ್ಲ.

ಇತ್ತೀಚೆಗೆ ಮಹಾರಾಷ್ಟ್ರದ ಜತ್ತ ತಾಲೂಕಿನ ಬೀಳೂರು ಗ್ರಾಮದ ಸಮಾರಂಭದಲ್ಲಿ ಮಾತನಾಡಿದ್ದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ಕೆಲ ಲಿಂಗಾಯತ ಸ್ವಾಮೀಜಿಗಳ ವಿರುದ್ಧ ವಾಗ್ದಾಳಿ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕಳೆದ ಎರಡು ತಿಂಗಳುಗಳಿಂದ ದೇವಾಲಯಕ್ಕೆ ಹೋಗಬೇಡಿ ಎಂದು ಪ್ರಚಾರ ಮಾಡಲಾಗ್ತಿದೆ. ಮುಖ್ಯಮಂತ್ರಿಗಳ ಕೃಪಾಪೋಷಿತ ಲಿಂಗಾಯತ ಮಠಾಧೀಪತಿಗಳ ಒಕ್ಕೂಟದ ಕಲಾವಿದರು ಸೇರಿ ಬಸವ ಸಂಸ್ಕೃತಿ ಅಭಿಯಾನ ಎನ್ನುವ ನಾಟಕವನ್ನು ರಾಜ್ಯಾದ್ಯಂತ ಮಾಡುತ್ತಿದ್ದಾರೆ. ಗುಡಿಯಲ್ಲಿ ದೇವರಲಿಲ್ಲ. ಮನೆಯಲ್ಲಿನ ದೇವರನ್ನು ಹೊಳೆಗೆ ಹಾಕಿ ಎನ್ನುತ್ತಿದ್ದಾರೆ. ಇವರಿಗೆ ನಾನೇ ಬುದ್ಧಿ ಹೇಳಬೇಕು ಎಂದು ಕೆಲ ಅಸಂವಿಧಾನಿಕ ಪದ ಬಳಸಿ ಆಕ್ರೋಶ ವ್ಯಕ್ತಪಡಿಸಿದ್ದರು.

ಸ್ವಾಮೀಜಿಗಳ ಹೇಳಿಕೆಗೆ ರಾಜ್ಯದ ವಿವಿಧ ಭಾಗಗಳಲ್ಲಿ ಆಕ್ರೋಶ ವ್ಯಕ್ತವಾಗಿದ್ದು, ಪ್ರತಿಕೃತಿಗಳನ್ನು ದಹಿಸಿ ಪ್ರತಿಭಟನೆಗಳನ್ನು ನಡೆಸಲಾಗಿದೆ. ಈ ನಡುವೆ ಬಸವನ ಬಾಗೇವಾಡಿಯಲ್ಲಿ ನಡೆಯುತ್ತಿರುವ ಸಮರ್ಥ ಸದ್ಗುರು, ಶ್ರೀ ಸಿದ್ದರಾಮೇಶ್ವರ ಮಹಾರಾಜರ ಪುಣ್ಯತಿಥಿ ಉತ್ಸವ ಕಾರ್ಯಕ್ರಮದಲ್ಲಿ ಅ.16 ಮತ್ತು 17ರಂದು ಕನೇರಿ ಶ್ರೀಗಳು ಭಾಗವಹಿಸಲಿರುವ ಕಾರಣ, ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವ ಸಾಧ್ಯತೆ ಇದೆ ಎಂದು ಸ್ಥಳೀಯ ಠಾಣಾ ವರದಿ ತಿಳಿಸಿದೆ. ಹೀಗಾಗಿ ಜಿಲ್ಲೆಗೆ ಕಾಡಸಿದ್ದೇಶ್ವರ ಸ್ವಾಮೀಜಿಯವರ ಭೇಟಿಯನ್ನ ಕನಿಷ್ಠ 2 ತಿಂಗಳವರೆಗೆ ನಿರ್ಬಂಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಕಾಡಸಿದ್ದೇಶ್ವರ ಶ್ರೀಗೆ ವಿಜಯಪುರ ಜಿಲ್ಲೆ ಪ್ರವೇಶಿಸದಂತೆ ನಿರ್ಬಂಧ ವಿಧಿಸಿ ಡಿಸಿ ಆದೇಶ ವಿಚಾರವಾಗಿ ರಾಜ್ಯ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಆರ್. ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ಈ ಸರ್ಕಾರದಲ್ಲಿ ಪಾಕಿಸ್ತಾನದಿಂದ ಬಂದು ಊಟ ಮಾಡಿ ಮಲಗಿ ಹೋಗಬಹುದು. ಹೀಗಿರುವಾಗ ಕನ್ನೇರಿ ಕಾಡಸಿದ್ದೇಶ್ವರ ಶ್ರೀಗಳು ಹಿಂದೂ ಧರ್ಮದ ಕೆಲಸ ಮಾಡಿದ್ದಾರೆ. ಅವರೇನು ರಾಜಕೀಯ ಭಾಷಣ ಮಾಡಿದ್ದಾರಾ? ಎಂದು ಪ್ರಶ್ನಿಸಿದ್ದಾರೆ. ಹಿಂದೂಗಳು ಈಗ ಒಗ್ಗಟ್ಟಾಗುತ್ತಿದ್ದು, ಈ ಸರ್ಕಾರವನ್ನು ಕಿತ್ತು ಬಿಸಾಡುತ್ತಾರೆ ಎಂದು ಕಿಡಿಕಾರಿದ್ದಾರೆ.

# ಸಮೀಕ್ಷೆಗೆ ಮಾಹಿತಿ ಕೊಡದೇ ವಾಪಸ್ ಕಳಿಸಿದ ಸುಧಾಮೂರ್ತಿ ; ಪ್ರದೀಪ್ ಈಶ್ವರ್ ಆಕ್ರೋಶ



ಬೆಂಗಳೂರು, ಅ. 16 - ರಾಜ್ಯದಲ್ಲಿ ಹಿಂದುಳಿದ ವರ್ಗದಿಂದ ಸಮೀಕ್ಷೆ ಮಾಡುತ್ತಾರೆಂದು ರಾಜ್ಯಸಭಾ ಸಂಸದೆ ಸುಧಾಮೂರ್ತಿ ಮಾಹಿತಿ ಕೊಡದೇ ವಾಪಸ್ ಕಳಿಸಿದ್ದಾರೆ. ಆದರೆ, ಇಲ್ಲಿ ಹಿಂದುಳಿದವರು ಸಮೀಕ್ಷೆ ಮಾಡುತ್ತಿದ್ದಾರೆಂದು ಮುಂದುವರಿದ, ಶ್ರೀಮಂತೆ ಸುಧಾ ಮೂರ್ತಿ ಅವರು ಮಾಹಿತಿ ಕೊಡಲು ನಿರಾಕರಿಸಿದ್ದಾರೆ. ಆದರೆ, ಮುಂದುವರಿದವರು ದೇವಸ್ಥಾನದಲ್ಲಿ ಪೂಜೆ ಮಾಡಿದರೂ, ನಾವು ಹಿಂದುಳಿದವರು ಅಲ್ಲಿಗೆ ಹೋಗಿ ಕೈ ಮುಗಿತೇವೆ ಅಲ್ವಾ? ಇವರು ಮಾಡಿದ್ದು ಸರಿಯಾಗಿಲ್ಲ ಎಂದು ಶಾಸಕ ಪ್ರದೀಪ್ ಈಶ್ವರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸುಧಾಮೂರ್ತಿ ಮೇಡಂ ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ, ಸಮೀಕ್ಷೆ ವೇಳೆ ಅವರು ನೀಡಿದ ಪ್ರತಿಕ್ರಿಯೆಯಿಂದ ಬೇಸರವಾಗಿದೆ. ನಾವು ಈ ಸಮೀಕ್ಷೆಯನ್ನು ಯಾವತ್ತೂ ಹಿಂದುಳಿದ ವರ್ಗದವರಿಗೆ ಎಂದು ಹೇಳಿಲ್ಲ. ಕರ್ನಾಟಕ ಜನರಿಗೆ ಮಾಡುತ್ತಿರುವ ಸಮೀಕ್ಷೆ ಎಂದು ಹೇಳಿದ್ದೇವೆ. ಸುಧಾಮೂರ್ತಿ ಅವರು ಕರ್ನಾಟಕದ ಭಾಗವಾಗಿದ್ದಾರೆ. ನೀವು ಹಿಂದುಳಿದ ವರ್ಗದವರು ಆಗದೇ, ಮುಂದುವರೆದವರು ಆಗಿದ್ದರೆ, ನೀವು ಶ್ರೀಮಂತರು, ನಿಮ್ಮ ಆಸ್ತಿ ಇಷ್ಟಿದೆ ಎಂಬುದನ್ನು ಮಾಹಿತಿ ಕೊಟ್ಟರೆ ನಮ್ಮ ಸರ್ಕಾರದಿಂದ ಮುಂದುವರೆದವರು ಇಷ್ಟು ಜನರಿದ್ದಾರೆ ಎಂದು ಹೇಳಲಾಗುತ್ತದೆ. ಇನ್ನು ನೀವು ಉದ್ಯೋಗಸ್ಥರಾ? ಉದ್ಯೋಗ ಕೊಟ್ಟಿದ್ದೀರಾ? ಎಂಬ ಮಾಹಿತಿ ಕಲೆಹಾಕಲಾಗುತ್ತದೆ ಎಂದರು.

ಸುಧಾಮೂರ್ತಿ ಅವರು ಬಿಜೆಪಿಯಲ್ಲಿ ರಾಜ್ಯಸಭಾ ಸಂಸದರಾದ ನಂತರ ಇಂತಹದ್ದಕ್ಕೆ ಮಾಹಿತಿ ಕೊಟ್ಟರೆ ತಪ್ಪೇನು. ಮುಂದುವರಿದವರು ಮಾಹಿತಿ ಕೊಡಬಾರದು ಎಂದೇನೂ ಹೇಳಿಲ್ಲ. ಹಿಂದುಳಿದ ವರ್ಗದವರು ಸಮೀಕ್ಷೆಗೆ ತೆರಳಿರುವುದು ಒಂದು ಏಜೆನ್ಸಿ ಅಷ್ಟೇ. ಮೇಡಂ ಅವರು ಹಿಂದುಳಿದ ವರ್ಗದವರು ಸಮೀಕ್ಷೆ ಮಾಡ್ತೀವಿ ಅಂತಾ, ಮುಂದುವರೆದವರು ಮಾಹಿತಿ ಕೊಡಲ್ಲ ಎಂದರೆ ಹೇಗೆ? ಮುಂದುವರೆದವರು ಪೂಜೆ ಮಾಡುತ್ತಾರೆ ಅಂತಾ ಹಿಂದುಳಿದವರು ಅಂತಹ ದೇವಸ್ಥಾನಕ್ಕೆ ಹೋಗಲ್ಲ ಎಂದರೆ ಆಗುತ್ತದೆಯಾ? ಇಲ್ಲಿ ಹಿಂದುಳಿದವರು ಮಾಡ್ತಾರಂತಾ ಮುಂದುವರೆದವರು ಅದನ್ನು ಸ್ವೀಕರಿಸುತ್ತಿಲ್ಲ. ಇದು ಏನು ಪಕ್ಷಪಾತ ಅಲ್ಲವಾ? ನೀವು ಶಿಕ್ಷಣವಂತರಾಗಿ ಮಾಹಿತಿ ಕೊಡಬೇಕಿತ್ತು ಎಂದು ಆಗ್ರಹಿಸಿದರು.

ನಿಮ್ಮ ಇನ್ಫೋಸಿಸ್ ಸಂಸ್ಥೆಯನ್ನು ಕಟ್ಟುವುದಕ್ಕೆ ಹಿಂದುಳಿದ ವರ್ಗದವರ ಯಾವುದೇ ಶ್ರಮವಿಲ್ಲವೇ? ನಿಮ್ಮ ಸಂಸ್ಥೆಯನ್ನು ಮುಂದುವರೆದ ಉದ್ಯೋಗಿಗಳನ್ನು ಮಾತ್ರ ಇಟ್ಟುಕೊಂಡು ಸಂಸ್ಥೆ ಕಟ್ಟಿದ್ದೀರಾ? ಅಲ್ಲಿ ಹಿಂದುಳಿದವರು ಇಲ್ಲವೇ? ನನ್ನದೊಂದು ಬೇಸಿಕ್ ಪ್ರಶ್ನೆ, ನೀವು ಮಾಹಿತಿ ಕೊಡುವುದಿಲ್ಲ ಎಂದತೆ ಏನು ಅರ್ಥ ಎಂದರು.

ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ಮಾಡುತ್ತಿದೆ. ಬೆಂಗಳೂರಿನಲ್ಲಿಯೂ ಕೂಡ ಈ ಸಮೀಕ್ಷೆ ನಡೆಯುತ್ತಿದೆ. ಈ ವೇಳೆ ಸಮೀಕ್ಷಾ ಸಿಬ್ಬಂದಿ ಇನ್ಫೋಸಿಸ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಾರಾಯಣಮೂರ್ತಿ ಅವರ ಪತ್ನಿ ಹಾಗೂ ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಅವರ ಮನೆಗೆ ಹೋದಾಗ ನಾವು ಹಿಂದುಳಿದ ವರ್ಗಗಳ ಇಲಾಖೆಯಿಂದ ಸಮೀಕ್ಷೆ ನಡೆಯುತ್ತಿದೆ. ಆದರೆ, ನಾವು ಹಿಂದುಳಿದ ವರ್ಗದವರಲ್ಲ ಎಂದು ಹೇಳಿದ್ದಾರೆ.

ಇನ್ನು ಕಿರಣ್ ಮಜುಂದಾರ್ ಶಾ ಅವರು, ರಸ್ತೆಗುಂಡಿಗಳ ಬಗ್ಗೆ ಮಾತನಾಡುತ್ತಾರೆ. ನಾವು ರಸ್ತೆಗುಂಡಿಗಳನ್ನು ಮುಚ್ಚುತ್ತೇವೆ. ಆದರೆ, ನಮ್ಮ ರಾಜ್ಯದ ಪರವಾಗಿ ಇವರು ಯಾವಾಗಲಾದರೂ ಮಾತನಾಡಿದ್ದಾರಾ? ಸೆಂಟ್ರಲ್‌ನಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಜಿಎಸ್‌ಟಿ ಹಣದ ಬಗ್ಗೆ ಮಾತನಾಡಿದ್ದಾರಾ? ಬೆಂಗಳೂರು ನೆಲ, ನೀರು, ಗಾಳಿ ಎಲ್ಲವೂ ಇವರಿಗೆ ಬೇಕು. ಆದರೆ, ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಬರಬೇಕಾದ ಅನುದಾನದ ಬಗ್ಗೆ ಕಿರಣ್ ಮಜುಂದಾರ್ ಶಾಹ ಮೇಡಂ ಅವರು ಟ್ವೀಟ್ ಮಾಡಿ ಪ್ರಶ್ನೆ ಮಾಡಬೇಕು ಎಂದು ಆಗ್ರಹಿಸಿದರು.



ಸ್ತನ ಕ್ಯಾನ್ಸರ್ ಜಾಗೃತಿ ಅಭಿಯಾನದ ಅಂಗವಾಗಿ ಸ್ತನ ಕ್ಯಾನ್ಸರ್ ರೋಗಿಗಳ ಆರೋಗ್ಯದಲ್ಲಿ ತ್ವರಿತ ಸುಧಾರಣೆಗಾಗಿ ರೊಬೊಟಿಕ್ ಶಸ್ತ್ರಚಿಕಿತ್ಸೆಯನ್ನು ಬಳಸಿಕೊಂಡು ಕ್ಯಾನ್ಸರ್‌ನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಮತ್ತು ಶಸ್ತ್ರಚಿಕಿತ್ಸೆಯ ಗಾಯಗಳನ್ನು ಕಡಿಮೆ ಮಾಡಿ ರೋಗಿಯು ಸಾಧ್ಯವಾದಷ್ಟು ಬೇಗ ತಮ್ಮ ಸಾಮಾನ್ಯ ಜೀವನವನ್ನು ಪುನರಾರಂಭಿಸಲು ಅನುವು ಮಾಡಿಕೊಡುವ ಬಗ್ಗೆ ಜನ ಜಾಗೃತಿಯನ್ನು ನವಿ ಮುಂಬಯಿ ಅಪೋಲೋ ಆಸ್ಪತ್ರೆ ತಂಡದಿಂದ ಮಾಡಲಾದ ಸಂದರ್ಭ.

# 2020ರಲ್ಲಿ ಪತ್ನಿಯನ್ನು ಕೊಲೆ ಮಾಡಿದ್ದ ಪತಿಗೆ ಜೀವಾವಧಿ ಶಿಕ್ಷೆ

ಥಾಣೆ, ಅ. 16 - ಮಹಾರಾಷ್ಟ್ರದ ಥಾಣೆ ಜಿಲ್ಲೆಯ ನ್ಯಾಯಾಲಯವು 2020ರಲ್ಲಿ ಪತ್ನಿಯನ್ನು ಕೊಲೆ ಮಾಡಿದ್ದಕ್ಕಾಗಿ ಪತಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ.

2020ರ ನವೆಂಬರ್‌ನಲ್ಲಿ ತನ್ನ ಪತ್ನಿ ಲಕ್ಷ್ಮಿ ಕಟುವಾ ಅವರನ್ನು ಕೊಂದಿದ್ದಕ್ಕಾಗಿ ಆಕಾಶ್ ಮೇಘಜಿ ಕಟುವಾ (29) ಎಂಬಾತನನ್ನು ಬುಧವಾರ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ವಿ ಜಿ ಮೋಹಿತೆ ದೋಷಿ ಎಂದು ತೀರ್ಪು ನೀಡಿದ್ದಾರೆ ಮತ್ತು ಆತನಿಗೆ 10,000 ರೂ. ದಂಡವನ್ನೂ ವಿಧಿಸಿದ್ದಾರೆ.

ಕಲ್ವಾ ಪೊಲೀಸ್ ಠಾಣೆಯಲ್ಲಿ ಕಟುವಾ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಘಟನೆಯ ನಂತರ ಆತನನ್ನು ಬಂಧಿಸಿದಾಗಿನಿಂದ ಆತ ಬಂಧನದಲ್ಲಿದ್ದಾನೆ.

ಈ ಜೋಡಿ ಅಕ್ಟೋಬರ್ 2018ರಲ್ಲಿ ವಿವಾಹವಾದರು.

ಆರೋಪಿ ಮೃತರಿಗೆ ಕೌಟುಂಬಿಕ ವಿಷಯಗಳ ಬಗ್ಗೆ ನಿಯಮಿತವಾಗಿ ಕಿರುಕುಳ ನೀಡುತ್ತಿದ್ದ ಮತ್ತು ಆಕೆಯ ಚಾರಿತ್ರ್ಯದ ಬಗ್ಗೆ ಅನುಮಾನಿಸುತ್ತಿದ್ದ ಎಂದು ಹೆಚ್ಚುವರಿ ಸಾರ್ವಜನಿಕ ಅಭಿಯೋಜಕ ರಶ್ಮಿ ಕ್ಷೀರಸಾಗರ್ ನ್ಯಾಯಾಲಯಕ್ಕೆ ತಿಳಿಸಿದರು.

ಥಾಣೆ ನಗರದ ಕಲ್ವಾ ಪ್ರದೇಶದಲ್ಲಿರುವ ಅವರ ನಿವಾಸದಲ್ಲಿ ನಡೆದ ಘಟನೆಯ ದಿನದಂದು, ಪೆಟ್ರೋಲ್‌ಗೆ ಹಣ ನೀಡಲು ನಿರಾಕರಿಸಿದ ಕಾರಣ, ಲಕ್ಷ್ಮಿಯ ತಲೆಯ ಮೇಲೆ ಪ್ರೆಶರ್ ಕುಕ್ಕರ್‌ನ ಮುಚ್ಚಳದಿಂದ ಹಲ್ಲೆ ಮಾಡಿದನು. ನಂತರ, ಸಣ್ಣ ಚಾಕುವಿನಿಂದ ಆಕೆಯ ಕತ್ತು ಕೊಯ್ದು, ಆಕೆಯ ಮೇಲೆ ಥಿನ್ನರ್ ಎಸೆದು ಬೆಂಕಿ ಹಚ್ಚಿದ್ದ.

ಆರೋಪಿ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ವಿಚಾರಣೆಯ ಸಮಯದಲ್ಲಿ ಒಟ್ಟು 13 ಪ್ರಾಸಿಕ್ಯೂಷನ್ ಸಾಕ್ಷಿಗಳನ್ನು ಪರೀಕ್ಷಿಸಲಾಯಿತು ಎಂದು ಕ್ಷೀರಸಾಗರ್ ಹೇಳಿದ್ದಾರೆ.

''ವೈದ್ಯಾಧಿಕಾರಿಯ ಮೌಖಿಕ ಸಾಕ್ಷ್ಯ ಮತ್ತು ಮರಣೋತ್ತರ ವರದಿಯ ವಿಷಯಗಳು ಲಕ್ಷ್ಮಿಯ ಸಾವು ನರಹತ್ಯೆ ಎಂದು ಸ್ಪಷ್ಟವಾಗಿ ತೋರಿಸುತ್ತವೆ. ಆಕೆಯ ಕುತ್ತಿಗೆಯ ಮೇಲೆ ಹರಿತವಾದ ಆಯುಧದಿಂದ ಕತ್ತರಿಸಿದ ಗಾಯವಿತ್ತು ಮತ್ತು ಉಳಿದ ಗಾಯಗಳು ಗಟ್ಟಿಯಾದ ಮತ್ತು ಮೊಂಡಾದ ವಸ್ತುವಿನಿಂದ ಮಾಡಲ್ಪಟ್ಟಿದ್ದವು, ಇವು ಒಟ್ಟಾರೆಯಾಗಿ ಆಕೆಯ ಸಾವಿಗೆ ಕಾರಣವಾಗಿದ್ದವು. ಅದೇ ಸಮಯದಲ್ಲಿ, ಸುಟ್ಟ ಗಾಯವು ಆಕೆಯ ಸಾವಿಗೆ ಕಾರಣವಾಗಲು ವೈಯಕ್ತಿಕವಾಗಿ ಸಾಕಾಗುತ್ತದೆ'' ಎಂದು ನ್ಯಾಯಾಲಯ ಹೇಳಿದೆ.

''ಒಲೆ ಸ್ಫೋಟದಿಂದಾಗಿ ಅಥವಾ ಪ್ರಾಸಿಕ್ಯೂಷನ್ ಸಾಕ್ಷಿಯ ಅಡ್ಡ-ವಿಚಾರಣೆಯ ಸಮಯದಲ್ಲಿ ಪ್ರತಿವಾದಿಯು ಸೂಚಿಸಿದ ಯಾವುದೇ ರೀತಿಯಲ್ಲಿ ಲಕ್ಷ್ಮಿ ಆಕಸ್ಮಿಕವಾಗಿ ಸುಟ್ಟ ಗಾಯವನ್ನು ಅನುಭವಿಸಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಗಳಿಲ್ಲ'' ಎಂದು ಅದು ಹೇಳಿದೆ.

ಆರೋಪಿಯೇ ಕೊಲೆ ಮಾಡಿದ್ದಾನೆ ಎಂಬುದನ್ನು ಪ್ರಾಸಿಕ್ಯೂಷನ್ ಅನುಮಾನಾಸ್ಪದವಾಗಿ ಸಾಬೀತುಪಡಿಸಿದೆ ಎಂದು ನ್ಯಾಯಾಲಯ ಹೇಳಿದೆ.

ಪ್ರಾಸಿಕ್ಯೂಷನ್ ಸಾಧ್ಯವಾದಷ್ಟು ಕಠಿಣ ಶಿಕ್ಷೆಯನ್ನು ಕೋರಿದ್ದರೂ, ಈ ಪ್ರಕರಣವು ಮರಣದಂಡನೆಗೆ ಅಗತ್ಯವಾದ 'ಅಪರೂಪದ' ವರ್ಗದ ಅಡಿಯಲ್ಲಿ ಬರುವುದಿಲ್ಲ ಎಂದು ನ್ಯಾಯಾಲಯ ಗಮನಿಸಿದೆ.

# ಬಿಎಂಸಿ, ಬೆಸ್ಟ್ ಸಿಬ್ಬಂದಿಗೆ 31 ಸಾವಿರ, ನವಿಮುಂಬಯಿ ಪಾಲಿಕೆ ನೌಕರರಿಗೆ 34.5 ಸಾವಿರ ರೂ. ದೀಪಾವಳಿ ಬೋನಸ್

ಮುಂಬಯಿ, ಅ.16 - ಬೃಹನ್ಮುಂಬೈ ಮುನ್ಸಿಪಲ್ ಕಾರ್ಪೋರೇಶನ್ ಗುರುವಾರ ದೀಪಾವಳಿಗೆ ತನ್ನ ಸಿಬ್ಬಂದಿಗೆ ರೂ. 31,000 ಎಕ್ಸ್-ಗ್ರೇಷಿಯಾ ಪಾವತಿಯನ್ನು ಘೋಷಿಸಿದೆ.

''ಪ್ರತಿಯೊಬ್ಬ ಅರ್ಹ ಬಿಎಂಸಿ ಅಧಿಕಾರಿ ಮತ್ತು ಉದ್ಯೋಗಿ, ಬೋಧನಾ ಸಹಾಯಕರು ಮತ್ತು ಶಿಕ್ಷಣ ಸೇವಾ ಕಾರ್ಯಕರ್ತರು ಸೇರಿದಂತೆ ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗೆ ರೂ. 31,000 ಎಕ್ಸ್-ಗ್ರೇಷಿಯಾ ನೀಡಲಾಗುತ್ತದೆ. ಶಿಕ್ಷಕ ಸೇವಕರು ಮತ್ತು ಶಿಕ್ಷಕ ಶಿಕ್ಷಣ ಸಂಸ್ಥೆಗಳ (ಅನುದಾನಿತ ಮತ್ತು ಅನುದಾನರಹಿತ) ಉದ್ಯೋಗಿಗಳಿಗೆ ಸಹ ಎಕ್ಸ್-ಗ್ರೇಷಿಯಾ ನೀಡಲಾಗುತ್ತದೆ'' ಎಂದು ಬಿಎಂಸಿ ಪ್ರಕಟಣೆ ತಿಳಿಸಿದೆ.

ಇದರ ಜೊತೆಗೆ, ಸಮುದಾಯ ಆರೋಗ್ಯ ಸ್ವಯಂಸೇವಕರಿಗೆ (ಸಿಎಚ್‌ವಿಎಸ್) ರೂ. 14,000 'ಭಾಯಿ ದೂಜ್' ಉಡುಗೊರೆಯಾಗಿ ನೀಡಲಾಗುವುದು, ಆದರೆ ಕಿಂಡರ್ ಗಾರ್ಟನ್ ಶಿಕ್ಷಕರು ಮತ್ತು ಸಹಾಯಕರು ರೂ. 5,000 ಪಡೆಯುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಉಪಮುಖ್ಯಮಂತ್ರಿಗಳಾದ ಏಕನಾಥ್ ಶಿಂದೆ ಮತ್ತು ಅಜಿತ್ ಪವಾರ್ ಅವರು ಎಲ್ಲಾ ಬಿಎಂಸಿ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ದೀಪಾವಳಿ ಶುಭಾಶಯಗಳನ್ನು ತಿಳಿಸಿದ್ದಾರೆ ಎಂದು ಅದು ತಿಳಿಸಿದೆ.

ಬಿಎಂಸಿ ಮತ್ತು ಬೆಸ್ಟ್ ಉದ್ಯೋಗಿಗಳಿಗೆ 31,000 ರೂ. ಬೋನಸ್ ಘೋಷಿಸಲಾಗಿದೆ ಎಂದು ಶಿಂದೆ ಅವರ ಕಚೇರಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ. ಆದರೆ ಥಾಣೆ ಮುನ್ಸಿಪಲ್ ಕಾರ್ಪೋರೇಷನ್‌ನಲ್ಲಿರುವವರಿಗೆ 24,500 ರೂ. ಮತ್ತು ನವಿಮುಂಬಯಿ ಮುನ್ಸಿಪಲ್ ಕಾರ್ಪೋರೇಷನ್‌ನಲ್ಲಿರುವವರಿಗೆ 34,500 ರೂ., ಬೋನಸ್ ಘೋಷಿಸಲಾಗಿದೆ.

ದೇವೇಂದ್ರ ಫಡ್ನವೀಸ್ ಸರ್ಕಾರದಲ್ಲಿ ಶಿಂದೆ ನಗರಾಭಿವೃದ್ಧಿ ಖಾತೆಯನ್ನು ಸಹ ಹೊಂದಿದ್ದಾರೆ.

''ಬೋನಸ್ ನಿರ್ಧಾರದ ಬಗ್ಗೆ ಉಪಮುಖ್ಯಮಂತ್ರಿ ಎಲ್ಲಾ ನಾಗರಿಕ ಸಂಸ್ಥೆಗಳ ಮುಖ್ಯಸ್ಥರಿಗೆ ಆದೇಶಗಳನ್ನು ನೀಡಿದ್ದಾರೆ'' ಎಂದು ಶಿಂದೆ ಅವರ ಕಚೇರಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಖ್ಯಾತ ಯಕ್ಷಗಾನ ಭಾಗವತ ಗಾನ ಕೋಗಿಲೆ ದಿನೇಶ ಅಮ್ಮಣ್ಣಾಯ ವಿಧಿವಶ



ಮಂಗಳೂರು, ಅ. 16 - ಯಕ್ಷಗಾನ ಹಿರಿಯ ಭಾಗವತ ಗಾನ ಕೋಗಿಲೆ ದಿನೇಶ್ ಅಮ್ಮಣ್ಣಾಯ(65) ಬೆಳ್ತಂಗಡಿಯ ಅರಸಿನಮಕ್ಕಿಯ ಸ್ವಗೃಹದಲ್ಲಿ ವಿಧಿವಶರಾಗಿದ್ದಾರೆ.

ತೆಂಕುತಿಟ್ಟು ಯಕ್ಷಗಾನ ಪರಂಪರೆಯ ಹಿರಿಯ ಭಾಗವತರಾಗಿ ನಾಲ್ಕು ದಶಕಕ್ಕೂ ಹೆಚ್ಚು ಕಾಲ ಕಲಾ ಸೇವೆ ಸಲ್ಲಿಸಿದ್ದ ಅಮ್ಮಣ್ಣಾಯ 'ರಸರಾಗ ಚಕ್ರವರ್ತಿ' ಎಂಬ ಬಿರುದು ಹೊಂದಿದ್ದರು.

ದಾಮೋದರ ಮಂಡೆಚ್ಚರ ಗರಡಿಯಲ್ಲಿ ಆರಂಭದಲ್ಲಿ ಪುತ್ತೂರು ಮೇಳದಲ್ಲಿ ಚಂಡೆ ಮತ್ತು ಮದ್ದಳೆ ವಾದಕರಾಗಿ ಯಕ್ಷಗಾನ ಲೋಕಕ್ಕೆ ಕಾಲಿಟ್ಟ ಇವರು ನಂತರ ಭಾಗವತಿಕೆಯತ್ತ ಆಸಕ್ತಿ ಬೆಳೆಸಿ ಪ್ರಖ್ಯಾತ ಭಾಗವತರಾಗಿ ಹೊರಹೊಮ್ಮಿದರು.

ಪ್ರಸಿದ್ಧ ಡೇರೆ ಮೇಳವಾಗಿದ್ದ ಕರ್ನಾಟಕ ಮೇಳದಲ್ಲಿ ದಿಗ್ಗಜ ಕಲಾವಿದರನ್ನು ರಂಗದಲ್ಲಿ ಕುಣಿಸಿದ ಕೀರ್ತಿ ಅಮ್ಮಣ್ಣಾಯರಿಗೆ ಸಲ್ಲುತ್ತದೆ. ತುಳು ಪ್ರಸಂಗಗಳಿಗೆ ತನ್ನ ಕಂಠ ಮಾಧುರ್ಯದಿಂದ ಅಪಾರ ಅಭಿಮಾನಿಗಳನ್ನು ಸಂಪಾದಿಸಿಕೊಂಡಿದ್ದರು.

ಎಡನೀರು ಮಠದ ಪರಮಶಿಷ್ಯರಾದ ಅಮ್ಮಣ್ಣಾಯರು ತಮ್ಮ ಜೀವನ ಅತೀ ಹೆಚ್ಚು ಯಕ್ಷಗಾನ ಭಾಗವತಿಕೆಯನ್ನು ಎಡನೀರು ಮಠದ ಮೇಳ ಹಾಗೂ ಎಡನೀರು ಕ್ಷೇತ್ರದಲ್ಲೇ ಮಾಡಿರುವುದು ವಿಶೇಷ. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಇವರು ಇಂದು ತಮ್ಮ ಮನೆಯಲ್ಲೇ ಕೊನೆಯುಸಿರೆಳೆದಿದ್ದಾರೆ.

# ಮಹಿಳೆಯ ಹೆರಿಗೆಗೆ ನೆರವಾದ 'ನಿಜವಾದ ಜೀವನದ ರಾಂಚೋ'

ಮೊದಲ ಪುಟದಿಂದ

ಪ್ಲಾಟ್‌ಫಾರ್ಮ್‌ನಲ್ಲಿರುವ ಅಂಗಡಿಯೊಂದರಿಂದ ಒಂದು ಜತೆ ಕತ್ತರಿಯನ್ನು ಪಡೆಯಲು ಅವರಿಗೆ ಸಾಧ್ಯವಾಗಿತ್ತು ಎಂದು ಗುರುವಾರ ವಾರ್ತಾ ಚಾನೆಲ್‌ಗೆ ತಿಳಿಸಿರುವ ವೈದ್ಯೆ ದೇವಿಕಾ ಅವರು, ಹೆರಿಗೆಗೆ ಮಹಿಳೆಗೆ ಸಹಾಯವಾಗಲು ಆತ ಕೆಲವು ಬೆಡ್‌ಶೀಟ್‌ಗಳನ್ನೂ ಒಟ್ಟುಗೂಡಿಸಿದ್ದರು ಎಂದು ತಿಳಿಸಿದ್ದಾರೆ.

ನಾನು ಅತ್ಯಂತ ಆತಂಕಕ್ಕೆ ಒಳಗಾಗಿದ್ದೆ. ಆದರೆ ಡಾ| ದೇವಿಕಾ ನನಗೆ ಧೈರ್ಯ ತುಂಬಿದ್ದರು. ದೇವಿಕಾ ನೀಡಿದ ಮಾರ್ಗದರ್ಶನದಿಂದಾಗಿ ಮಹಿಳೆಯು ಸಮಸ್ಯೆಯಿಲ್ಲದೆ ಮಗುವನ್ನು ಹೆರಲು ನೆರವಾಗಲು ಸಾಧ್ಯವಾಯಿತು ಎಂದು ಬೆದ್ರೆ ಹೇಳಿದ್ದಾರೆ.

ಬೆದ್ರೆ ಬೇರೆಡೆ ತೆರಳಲು ವಿಮಾನ ಹಿಡಿಯಲು ಹೋಗಬೇಕಾಗಿತ್ತು. ಆದರೆ ಆತನ ಮಾನವೀಯ ಜಾಗೃತೆ ಅವರ ವಿಮಾನ ಯಾನವನ್ನು ಮುಂದೂಡುವಂತೆ ಮಾಡಿತ್ತು.

ತಾಯಿ ಮತ್ತು ಮಗು ಆರೋಗ್ಯವಾಗಿದ್ದು ಆಸ್ಪತ್ರೆಯೊಂದಕ್ಕೆ ದಾಖಲಿಸಲ್ಪಟ್ಟಿದ್ದಾರೆ.

ರೈಲ್ವೇ ಪ್ಲಾಟ್‌ಫಾರ್ಮ್‌ನಲ್ಲಿ ಏನು ನಡೆಯಿತು ಎಂಬ ವೀಡಿಯೋ ದೃಶ್ಯವನ್ನು ಧಿಲ್ಲೋನ್ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದು ಅದಕ್ಕೆ ಅಪಾರ ಪ್ರತಿಕ್ರಿಯೆಗಳು ಬಂದಿವೆ.

ಕೆಲವು ಬೆದ್ರೆಯನ್ನು ''ನಿಜವಾದ ಜೀವನದ ರಾಂಚೋ'' (3 ಈಡಿಯೆಟ್ಸ್ ಚಿತ್ರದ ಪಾತ್ರ) ಎಂದು ವ್ಯಾಖ್ಯಾನಿಸಿದ್ದಾರೆ. ರೈಲ್ವೇ ಪ್ಲಾಟ್‌ಫಾರ್ಮನ್ನೇ ಪ್ರಸವ ಕೊಠಡಿಯಾಗಿ ಪರಿವರ್ತಿಸಿದ ಸಾಹಸಿ ಎಂದು ಹಲವರು ಪ್ರತಿಕ್ರಿಯೆ ನೀಡಿದ್ದಾರೆ.

ನಾವು ಎಲ್ಲ ರೀತಿಯಲ್ಲೂ ಪ್ರಯತ್ನ ಮಾಡಿದ್ದೆವು. ನಾವು ಹಲವು ವೈದ್ಯರುಗಳಿಗೆ ಕರೆ ಮಾಡಿದ್ದೆವು. ಆದರೆ ಅಂಬುಲೆನ್ಸ್ ಆಗಮನಕ್ಕೆ ಸಮಯ ಹಿಡಿಯುತ್ತಿತ್ತು. ಅಂತಿಮವಾಗಿ, ಮಹಿಳಾ ವೈದ್ಯರೊಬ್ಬರು ವೀಡಿಯೋ ಕರೆಯ ಮೂಲಕ ಅವರಿಗೆ ಹೆರಿಗೆಗೆ ನೆರವಾಗಲು ಮಾರ್ಗದರ್ಶನ ನೀಡಿದ್ದರು. ವೈದ್ಯೆ ನೀಡಿದ ಸೂಚನೆಯಂತೆ ಆತ ಕಾರ್ಯ ನಿರ್ವಹಿಸಿದ್ದರು. ಆ ಕ್ಷಣದಲ್ಲಿ ಆತ ತೋರಿದ ಧೈರ್ಯದ ಬಗ್ಗೆ ಹೇಳಲು ಶಬ್ದಗಳಿಂದ ಸಾಧ್ಯವಿಲ್ಲ ಎಂದು ಧಿಲ್ಲೋನ್, ಬೆದ್ರೆ ಅವರ ಮಾನವೀಯ ಕಾಳಜಿಯ ಜವಾಬ್ದಾರಿ ಬಗ್ಗೆ ಮೆಚ್ಚುಗೆಯ ಮಾತನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ.

ಮಹಿಳೆಯ ಕುಟುಂಬಿಕರು ಆಕೆಯನ್ನು ಹತ್ತಿರದ ಆಸ್ಪತ್ರೆಯೊಂದಕ್ಕೆ ಕರೆದೊಯ್ದರು. ಆದರೆ ಅಲ್ಲಿ ಹೆರಿಗೆ ಮಾಡಿಸುವುದಿಲ್ಲ ಎಂದು ಅವರಿಗೆ ತಿಳಿಸಲಾಗಿತ್ತು. ಇದರಿಂದಾಗಿ ಆಕೆಯನ್ನು ಕುಟುಂಬ ರೈಲಲ್ಲಿ ಕರೆದೊಯ್ಯುತ್ತಿದ್ದರು ಎಂದೂ ಧಿಲ್ಲೋನ್ ಹೇಳಿದ್ದಾರೆ.

# ವಿಪಕ್ಷಗಳ ಬೇಡಿಕೆಗೆ ದನಿಗೂಡಿಸಿದ ಶಿವಸೇನೆ ಎಂಎಲ್‌ಎ

ಮೊದಲ ಪುಟದಿಂದ

ಮತದಾರರ ಪಟ್ಟಿಯಲ್ಲಿ ಒಬ್ಬ ಮತದಾರನ ಹೆಸರು ಒಂದಕ್ಕಿಂತ ಹೆಚ್ಚು ಕಡೆ ಇದ್ದರೆ ಅದನ್ನು ಅಳಿಸಲೇಬೇಕು. ಈ ವಿಚಾರದಲ್ಲಿ ವಿರೋಧ ಪಕ್ಷಗಳ ಬೇಡಿಕೆಗೆ ನಮ್ಮ ಬೆಂಬಲ ಕೂಡ ಇದೆ ಎಂದು ಅವರು ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಭಾರೀ ಹಿನ್ನಡೆಯಾದ ಬಳಿಕ ಮತದಾರರ ಪಟ್ಟಿಗೆ ಬೋಗಸ್ ಮತದಾರರ ಸೇರ್ಪಡೆಯಾಗಿದೆ. ಅರ್ಹ ಮತದಾರರ ಹೆಸರುಗಳನ್ನು ಗರಿಷ್ಠ ಪ್ರಮಾಣದಲ್ಲಿ ಅಳಿಸಲಾಗಿದೆ . ಒಬ್ಬ ಮತದಾರರ ಹೆಸರನ್ನು ಹಲವು ಕಡೆಗಳಲ್ಲಿ ನೋಂದಾಯಿಸಿಕೊಳ್ಳಲಾಗಿದೆ ಎಂದು ಇದೇ ವೇಳೆ ಎನ್‌ಸಿಪಿ ( ಎಸ್‌ಪಿ) ಎಂಎಲ್‌ಎ ರೋಹಿತ್ ಪವಾರ್ ಇಂದು ಆಪಾದಿಸಿದ್ದಾರೆ.

2019 ಮತ್ತು 2024ರ ಲೋಕಸಭಾ ಚುನಾವಣೆಯ ನಡುವೆ 32 ಲಕ್ಷ ಮತದಾರರ ಹೆಸರುಗಳ ಸೇರ್ಪಡೆಯಾಗಿವೆ. ಇದರಿಂದಾಗಿ ವರ್ಷದಲ್ಲಿ 6.5 ಲಕ್ಷ ಅಥವಾ ತಿಂಗಳಿಗೆ 54,000 ಮತಗಳ ಸೇರ್ಪಡೆಯಾಗಿದೆ.ಆದರೆ, 2024ರ ಲೋಕಸಭಾ ಚುನಾವಣೆಯಿಂದ 2024ರ ರಾಜ್ಯ ವಿಧಾನಸಭಾ ಚುನಾವಣೆಯ ನಡುವೆ ಕೇವಲ 6 ತಿಂಗಳಲ್ಲಿ 48 ಲಕ್ಷ ಮತದಾರರ ಹೆಸರುಗಳು ಸೇರ್ಪಡೆಯಾಗಿವೆ ಎಂದು ರೋಹಿತ್ ಹೇಳಿದ್ದಾರೆ.

ತನ್ನ ಕರ್ಜತ್ ಜಮ್ಕೇಡ್ ಕ್ಷೇತ್ರದಲ್ಲಿ 14,292 ಮತದಾರರ ಹೆಸರು ಸೇರ್ಪಡೆಯಾಗಿದ್ದು, 5,360 ಹೆಸರುಗಳನ್ನು ಅಳಿಸಲಾಗಿದೆ. ಲೋಕಸಭೆಯ ಚುನಾವಣೆ ಬಳಿಕ 14,162 ನಕಲಿಮತದಾರರ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸಲಾಗಿದೆ ಎಂದು ಅವರು ಆಪಾದಿಸಿದ್ದಾರೆ.

ಮತದಾರರ ಪಟ್ಟಿಯ ಲೋಪವನ್ನು ಸರಿಪಡಿಸದೇ ಸ್ಥಳೀಯಾಡಳಿತ ಸಂಸ್ಥೆಗಳ ಚುನಾವಣೆ ನಡೆಯಬಾರದು ಎಂದು ವಿರೋಧಪಕ್ಷಗಳ ನಾಯಕರು ರಾಜ್ಯಚುನಾವಣಾ ಆಯೋಗವನ್ನು ಒತ್ತಾಯಿಸಿ ಮನವಿ ಸಲ್ಲಿಸಿದ್ದಾರೆ.

# ಅಪರಿಚಿತ ತರಬೇತುದಾರನಿರುವ ಜಿಮ್‌ಗಳಿಗೆ ಹೋಗದಂತೆ ಹಿಂದೂ ಹುಡುಗಿಯರಿಗೆ ಬಿಜೆಪಿ ಎಂಎಲ್‌ಎ ಕರೆ

ಮುಂಬಯಿ, ಅ.16- ಜಿಮ್‌ಗಳಲ್ಲಿ 'ದೊಡ್ಡ ಸಂಚು ಇದೆ' ಎಂದು ಗುರುವಾರ ಆಪಾದಿಸಿರುವ ಮಹಾರಾಷ್ಟ್ರದ ಬಿಜೆಪಿ ಎಂಎಲ್‌ಎ ಗೋಪಿಚಂದ್ ಪಡಾಲ್ಕರ್ ಅವರು, ಕಾಲೇಜಿಗೆ ಹೋಗುತ್ತಿರುವ ಹುಡುಗಿಯರು ತರಬೇತು ನೀಡುವ ತರಬೇತುದಾರ ಯಾರೆಂದು ಅರಿತುಕೊಳ್ಳದೇ ಜಿಮ್‌ಗಳಿಗೆ ಹೋಗುವ ಬದಲು ಮನೆಗಳಲ್ಲೇ ಯೋಗ ಮಾಡುವಂತೆ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ ಸಭೆಯೊಂದನ್ನು ಉದ್ದೇಶಿಸಿ ಯಾರನ್ನೂ ಹೆಸರಿಸದೇ ಈ ಹೇಳಿಕೆ ನೀಡಿರುವ ಪಡಾಲ್ಕರ್ ಅವರು, ಮತ್ತೊಂದು ಸಮುದಾಯದ ಮಹಿಳೆಯನ್ನು ಅಂತಹ ಜಿಮ್‌ಗಳಲ್ಲಿ ಬಲೆಗೆ ಬೀಳಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ. ತರಬೇತುದಾರ ಯಾರೆಂದು ಮೊದಲಾಗಿ ತಿಳಿದುಕೊಳ್ಳದೆ ಹಿಂದೂ ಹುಡುಗಿಯರು ಜಿಮ್‌ಗಳಿಗೆ ಹೋಗಬಾರದು ಎನ್ನುವುದು ನನ್ನ ಕಳಕಳಿಯ ವಿನಂತಿಯಾಗಿದೆ. ಅದರ ಬದಲು ನೀವು ಮನೆಯಲ್ಲೇ ಯೋಗ ಮಾಡಿ. ಇದೊಂದು ಎಂತಹ ದೊಡ್ಡ ಸಂಚು ಎನ್ನುವುದು ನಿಮಗೆ ಗೊತ್ತಿಲ್ಲ. ಹಿಂದೂ ಯುವತಿಯರು ಮನೆಯಲ್ಲೇ ಯೋಗ ಅಥವಾ ವ್ಯಾಯಾಮ ಮಾಡಿ ಎಂದು ಹೇಳಿ. ಅವರೆಲ್ಲ ತರಬೇತಿಗಾಗಿ ಜಿಮ್‌ಗೆ ಹೋಗುವುದು ಬೇಡ ಎಂದು ಪಡಾಲ್ಕರ್ ಹೇಳಿದ್ದಾರೆ.

ಕಾಲೇಜುಗಳಿಗೆ ಗುರುತು ವಿವರಗಳು ಇಲ್ಲದೇ ಇರುವವರಿಗೆ ಪ್ರವೇಶವನ್ನು ನಿರ್ಬಂಧಿಸಿ ತಡೆ ಹಿಡಿಯಬೇಕು ಎಂದು ಸಾಂಗ್ಲಿ ಜಿಲ್ಲೆಯ ಜತ್ ಬಿಜೆಪಿ ಎಂಎಲ್‌ಎ ಅವರು ಹೇಳಿದ್ದಾರೆ.

ಪಡಾಲ್ಕರ್ ಹೇಳಿಕೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದ್ದು, ಅವರು ಮುಸ್ಲಿಂ ಸಮುದಾಯದ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆಂದು ವಿರೋಧ ಪಕ್ಷಗಳು ಆಪಾದಿಸಿವೆ.

# ಬಿಹಾರ : ಜೆಡಿಯು 101 ಅಭ್ಯರ್ಥಿಗಳ ಪಟ್ಟಿ ಪ್ರಕಟ

ಮೊದಲ ಪುಟದಿಂದ

ನಿತೀಶ್ ಕುಮಾರ್ ಅವರು ಅವರ ಸಂಪುಟದಲ್ಲಿ ಇರುವ ಎಲ್ಲ ಹಾಲಿ ಜೆಡಿಯು ಎಂಎಲ್‌ಎಗಳಿಗೂ ಟಿಕೆಟ್ ನೀಡಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ವಿಜಯ್‌ಕುಮಾರ್ ಚೌಧರಿ, ಬಿಜೇಂದ್ರ ಪ್ರಸಾದ್ ಯಾದವ್, ಝಮಾ ಖಾನ್, ಶೀಲಾ ಮಂಡಲ್ ಮತ್ತು ಲೇಷಿ ಸಿಂಗ್. ಕಳೆದ ಬಾರಿ ಪಕ್ಷೇತರರಾಗಿ ಚಕಾಯಿ ಕ್ಷೇತ್ರದಿಂದ ಗೆದ್ದಿದ್ದ ಸುಮಾತ್ ಕುಮಾರ್ ಸಿಂಗ್ ಅವರಿಗೂ ನಿತೀಶ್ ಕುಮಾರ್ ಟಿಕೆಟ್ ನೀಡಿದ್ದಾರೆ.

ಒಂದು ವಾರದ ಹಿಂದೆಯಷ್ಟೇ ಆರ್‌ಜೆಡಿ ಬಿಟ್ಟು ಜೆಡಿಯು ಸೇರಿರುವ ವಿಭಾ ದೇವಿ ಅವರಿಗೆ ನವಾಡ ಕ್ಷೇತ್ರವನ್ನೇ ನೀಡಿರುವ ನಿತೀಶ್ ಕುಮಾರ್ ಅವರು, ಶೇಯೋಹಾರ್ ಕ್ಷೇತ್ರದ ಹಾಲಿ ಎಂಎಲ್‌ಎ ಚೇತನ್ ಆನಂದ್ ಅವರನ್ನು ನಬಿನಗರ ಕ್ಷೇತ್ರಕ್ಕೆ ಬದಲಿಸಿದ್ದಾರೆ.

# ಇಂದು ಹೊಸ ಸಚಿವರ ಪ್ರತಿಜ್ಞೆ ಸ್ವೀಕಾರ

ಮೊದಲ ಪುಟದಿಂದ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರು ಇಂದು ಸಂಜೆ ಗಾಂಧಿನಗರ ತಲುಪಿದ್ದು, ಮುಖ್ಯಮಂತ್ರಿ ಪಟೇಲ್ ಜತೆ ಮಾತುಕತೆ ನಡೆಸಿದ್ದಾರೆ. ಹಿರಿಯ ಬಿಜೆಪಿ ನಾಯಕರ ಜತೆಗೂ ಅವರು ಸಮಾಲೋಚನೆ ನಡೆಸಿದ್ದಾರೆ.

ನಾಳೆ ನಡೆಯಲಿರುವ ಸಚಿವರ ಪಮಾಣವಚನ ಸ್ವೀಕಾರ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಶಾಹ ಭಾಗವಹಿಸಲಿದ್ದಾರೆಂದು ಮೂಲಗಳು ತಿಳಿಸಿವೆ.

ಗುಜರಾತ್ 182 ಸದಸ್ಯ ಬಲದ ವಿಧಾನಸಭೆಯನ್ನು ಹೊಂದಿದ್ದು, ಗರಿಷ್ಠ 27 ಸಚಿವರನ್ನು ಹೊಂದಿರಲು ಸಾಂವಿಧಾನಿಕ ಅವಕಾಶವಿದೆ.

# ಕಾನೂನು ಕ್ರಮಕ್ಕೆ ಅಟಾರ್ನಿ ಜನರಲ್ ಸಮ್ಮತಿ

ಮೊದಲ ಪುಟದಿಂದ

ಅಕ್ಟೋಬರ್ 6ರಂದು ಸುಪ್ರೀಂಕೋರ್ಟಿನಲ್ಲಿ ಸಿಜೆಐ ಅವರ ಕೊಠಡಿಯಲ್ಲಿ ನಡೆದ ಆಘಾತಕಾರಿ ಭದ್ರತಾ ವೈಫಲ್ಯದಲ್ಲಿ ಸುಪ್ರೀಂಕೋರ್ಟಿನ ವಕೀಲ ರಾಕೇಶ್ ಕಿಶೋರ್ (71) ಸಿಜೆಐ ಗವಾಯಿ ಅವರತ್ತ ಒಂದು ಶೂ ಎಸೆದಿದ್ದು, ಘಟನೆಯನ್ನು ಅನುಸರಿಸಿ ಭಾರತದ ಬಾರ್ ಕೌನ್ಸಿಲ್ ರಾಕೇಶ್‌ನ ಪರವಾನಗಿಯನ್ನು ತಕ್ಷಣದಿಂದ ಅಮಾನತು ಮಾಡಿದೆ.

ಆದರೆ, ಘಟನೆಯಿಂದ ಅಧೀರರಾಗದ ಸಿಜೆಐ, ಕೋರ್ಟಿನ ಕೊಠಡಿಯಲ್ಲಿದ್ದ ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿಗಳಿಗೆ ಘಟನೆಯನ್ನು ''ಕೇವಲ ನಿರ್ಲಕ್ಷಿಸಿ ಬಿಡಿ'' ಎಂದು ತಿಳಿಸಿ, ಉದ್ರಿಕ್ತ ವಕೀಲನಿಗೆ ಎಚ್ಚರಿಕೆ ನೀಡಿ ಬಿಟ್ಟು ಬಿಡಿ ಎಂದು ಹೇಳಿದ್ದರು.

# ಅಗತ್ಯವಾಗಿದೆ : ಗೃಹ ಸಚಿವ ಶಾಹ

ಮೊದಲ ಪುಟದಿಂದ

ಅಲ್ಲಿ ಕಳಪೆ ವ್ಯವಸ್ಥೆಯಿದೆ ಎಂದು ವಿದೇಶೀ ಕೋರ್ಟ್‌ಗಳಲ್ಲಿ ಹಸ್ತಾಂತರಕ್ಕೆ ಆಕ್ಷೇಪ ಸಲ್ಲಿಸುತ್ತಿದ್ದಾರೆ.

ವಿವಿಧ ವಿದೇಶಗಳಲ್ಲಿ ಭಾರತದ 338 ಹಸ್ತಾಂತರ ಮನವಿಗಳು ಬಾಕಿಯಿವೆ.

ಆ ಮೊದಲು ಸ್ವಾಗತ ಭಾಷಣ ಮಾತನಾಡಿದ ಸಿಬಿಐ ನಿರ್ದೇಶಕ ಪ್ರವೀಣ್ ಸೂದ್ ಅವರು 2025ರಲ್ಲಿ ಭಾರತ ದಾಖಲೆ 199 ಇಂಟರ್‌ಪೋಲ್ ನೋಟಿಸ್‌ಗಳನ್ನು ನೀಡಿದೆ. 2024ಕ್ಕೆ ಹೋಲಿಸಿದರೆ ಇದು ದುಪ್ಪಟ್ಟು ಆಗಿದೆ. 2024ರಲ್ಲಿ 96 ಇಂಟರ್‌ಪೋಲ್ ನೋಟಿಸ್‌ಗಳನ್ನು ನೀಡಲಾಗಿತ್ತು. ಅದರಲ್ಲಿ 52 ರೆಡ್ ಆದರೆ, 44 ಬ್ಲ್ಯೂ ಎಂದು ಹೇಳಿದರು. 2025ರ ಮೊದಲು 9 ತಿಂಗಳಲ್ಲಿ 189 ನೋಟಿಸ್‌ಗಳನ್ನು ನೀಡಲಾಗಿದೆ. ಅದರಲ್ಲಿ 79 ರೆಡ್ ನೋಟಿಸ್‌ಗಳಾದರೆ, 110 ಬ್ಲೂ ನೋಟಿಸ್‌ಗಳು ಎಂದು ಸೂದ್ ಹೇಳಿದರು. ಈವರೆಗೆ ಒಟ್ಟು 957 ಇಂಟರ್‌ಪೋಲ್ ರೆಡ್ ನೋಟಿಸ್‌ಗಳನ್ನು ದೇಶದಿಂದ ಪಲಾಯನಗೈದವರ ವಿರುದ್ಧ ನೀಡಲಾಗಿದೆ. ಇದರಲ್ಲಿ 231 ನೋಟಿಸ್‌ಗಳು ಸಿಬಿಐ ಪ್ರಕರಣಕ್ಕೆ ಸಂಬಂಧಿಸಿದ್ದರೆ 130 ಎನ್‌ಐಎ, 21 ಇಡಿ, 12 ಎನ್‌ಸಿಬಿ ಪ್ರಕರಣಗಳು ಹಾಗೂ ಇತರ ನೋಟಿಸ್‌ಗಳು ವಿವಿಧ ರಾಜ್ಯಗಳ ಪೊಲೀಸರು ನೀಡಿದ್ದು ಎಂದು ಅವರು ಹೇಳಿದರು.

# 140 ಕೋಟಿ ಭಾರತೀಯರದು : ಮೋದಿ

ಮೊದಲ ಪುಟದಿಂದ

ಆದಾಯ ತೆರಿಗೆ ಮಿತಿಯನ್ನು 12 ಲಕ್ಷ ರೂ.ಗೆ ಏರಿಸಿರುವುದು ಮತ್ತು ಜಿಎಸ್‌ಟಿ ದರ ಸುಧಾರಣೆಯನ್ನು ಪ್ರಸ್ತಾವಿಸಿದ ಮೋದಿ ಅವರು, ಎನ್‌ಡಿಎ ಸರಕಾರದ ಗುರಿ ''ನಾಗರಿಕರ ಕೇಂದ್ರೀಕೃತ ಅಭಿವೃದ್ಧಿಯಾಗಿದೆ'' ಎಂದರಲ್ಲದೆ ಜನರ ಜೀವನ ಸುಖಕರವಾಗುವಂತೆ ಮಾಡಲು ನಿರಂತರ ಸುಧಾರಣೆಗಳನ್ನು ಮಾಡಲಾಗುತ್ತಿದೆ ಎಂದು ಹೇಳಿದರು.

ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರ ಬಾಬು ನಾಯ್ಡು ಹೇಳಿರುವಂತೆಯೇ ದೇಶದ ಸ್ವಾತಂತ್ರ್ಯದ ಶತಮಾನ ವರ್ಷವಾದ 2047ರೊಳಗೆ ವಿಕಸಿತ ಭಾರತ ನಿರ್ಮಾಣವಾಗಲಿದೆ. 21ನೇ ಶತಮಾನವು ಭಾರತದ ಶತಮಾನ ಎಂದು ನಾನು ವಿಶ್ವಾಸದಿಂದ ಹೇಳಬಲ್ಲೆ. 21ನೇ ಶತಮಾನ 140 ಕೋಟಿ ಭಾರತೀಯರಿಗೆ ಸೇರಿದೆ ಎಂದು ಮೋದಿ ಹೇಳಿದರು.

ಭಾರತವು 21ನೇ ಶತಮಾನದ ಹೊಸ ಉತ್ಪಾದನಾ ಕೇಂದ್ರ ಎಂದು ವಿಶ್ವ ನೋಡುತ್ತಿದೆ ಎಂದು ಅಭಿಪ್ರಾಯಪಟ್ಟ ಪ್ರಧಾನಿ, ಇದರ ಯಶಸ್ಸಿನ ಮೂಲಗಳು ಸ್ವಾವಲಂಬಿ ಭಾರತದ ಗುರಿಯಾಗಿದೆ. ಆಂಧ್ರ ಪ್ರದೇಶ ಅದರ ಯಶಸ್ಸಿನ ಮುಖ್ಯ ಕೇಂದ್ರವಾಗಲಿದೆ ಎಂದು ನುಡಿದರು.

11 ವರ್ಷಗಳ ಹಿಂದೆ ದೇಶದಲ್ಲಿ ಕಾಂಗ್ರೆಸ್ ಸರಕಾರವಿದ್ದಾಗ, ತಲಾವಾರು ವಿದ್ಯುತ್ ಬಳಕೆಯು 1000 ಯೂನಿಟ್‌ಗಳಿಗಿಂತಲೂ ಕಡಿಮೆಯಾಗಿತ್ತು ಮತ್ತು ಆ ಕಾಲದಲ್ಲಿ ದೇಶದಲ್ಲಿ ವಿದ್ಯುತ್ ಕಣ್ಣುಮುಚ್ಚಾಲೆ ಸವಾಲುಗಳು ಸಾಮಾನ್ಯವಾಗಿತ್ತು. ಆಗ ನಮ್ಮ ಹಳ್ಳಿಗಳಲ್ಲಿ ವಿದ್ಯುತ್ ಕಂಬಗಳೇ ಇರಲಿಲ್ಲ ಎಂದು ಮೋದಿ ಹೇಳಿದರು.

ಸ್ವಚ್ಛ ಇಂಧನದಿಂದ ಪೂರ್ಣ ಇಂಧನ ಉತ್ಪಾದನೆ ಈಗ ಸಾಧ್ಯವಾಗಿದೆ. ಪ್ರತಿಯೊಂದು ವಲಯದಲ್ಲೂ ಭಾರತ ಹೊಸ ದಾಖಲೆಗಳನ್ನು ಮಾಡುತ್ತಿದೆ. ಇಂದು ದೇಶದ ಎಲ್ಲ ಹಳ್ಳಿಗಳಿಗೂ ವಿದ್ಯುತ್ ತಲುಪಿದೆ. ವಿದ್ಯುತ್ ಬಳಕೆ ತಲಾವಾರು 1400 ಯೂನಿಟ್‌ಗೆ ತಲುಪಿದೆ ಎಂದು ಪ್ರಧಾನಿ ನುಡಿದರು.

ಆಂಧ್ರ ಪ್ರದೇಶಕ್ಕೆ ಚಂದ್ರಬಾಬು ನಾಯ್ಡು ಅವರಂತಹ ದೂರದೃಷ್ಟಿಯ ಮುಖ್ಯಮಂತ್ರಿ ಸಿಕ್ಕಿದ್ದಾರೆ. ಅವರ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ನಾಯ್ಡು ಅವರಿಗೆ ಪೂರ್ಣ ಸಹಕಾರ ನೀಡುತ್ತಿದ್ದಾರೆ. ಆಂಧ್ರ ಪ್ರದೇಶಕ್ಕೆ ಕೇಂದ್ರ ಸರಕಾರ ಎಲ್ಲ ರೀತಿಯ ಸಹಾಯ ನೀಡುತ್ತಿದೆ ಎಂದು ಪ್ರಧಾನಿ ಹೇಳಿದರು.

ಆಂಧ್ರ ಪ್ರದೇಶದ ವಿಶಾಖ ಪಟ್ಟಣದಲ್ಲಿ ಹೊಸ ಅಂತಾರಾಷ್ಟ್ರೀಯ ಹೂಡಿಕೆ ಕೇಂದ್ರ ಸ್ಥಾಪನೆಯಾಗಲಿದ್ದು ಗೂಗಲ್ ಕಂಪನಿಯ ಎಐ ಹಬ್ ಸ್ಥಾಪನೆಯಾಗಲಿದೆ. ಆ ಮೂಲ ಸೌಕರ್ಯ ಕೇಂದ್ರವು ಜಾಗತಿಕ ಹೂಡಿಕೆ ಕೇಂದ್ರವಾಗಲಿದೆ ಎಂದು ಮೋದಿ ತಿಳಿಸಿದರು.

# ಶ್ರೀ ಶೈಲಂ ದೇವಸ್ಥಾನಕ್ಕೆ ಪ್ರಧಾನಿ ಭೇಟಿ

ಮೊದಲ ಪುಟದಿಂದ

ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನವು 12 ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದ್ದು 52 ಶಕ್ತಿ ಪೀಠಗಳಲ್ಲೂ ಒಂದಾಗಿದೆ. ಒಂದೇ ಸ್ಥಳದಲ್ಲಿ ಒಂದು ಜ್ಯೋತಿರ್ಲಿಂಗ ಮತ್ತು ಒಂದು ಶಕ್ತಿಪೀಠ ಈ ದೇವಸ್ಥಾನದ ವಿಶೇಷ ಲಕ್ಷಣವಾಗಿದ್ದು, ಭಾರತದಲ್ಲಿ ಇಂತಹ ದೇವಸ್ಥಾನವಿರುವುದು ಇದೊಂದು ಮಾತ್ರವಾಗಿದೆ.

ದೇವಸ್ಥಾನ ದರ್ಶನ ಬಳಿಕ ಮೋದಿ ಅವರು ಮರಾಠ ದೊರೆ ಛತ್ರಪತಿ ಶಿವಾಜಿ ಸ್ಮಾರಕವಾದ ಶ್ರೀ ಶಿವಾಜಿ ಸ್ಫೂರ್ತಿ ಕೇಂದ್ರಕ್ಕೆ ಭೇಟಿ ನೀಡಿದರು. ಈ ಕೇಂದ್ರದಲ್ಲಿ ಒಂದು ಧ್ಯಾನ ಸಭಾಗೃಹ ಇದೆ. ಅದರಲ್ಲಿ ನಾಲ್ಕು ಚಾರಿತ್ರಿಕ ಕೋಟೆಗಳಾದ ಪ್ರತಾಪಗಢ, ರಾಜಗಢ, ರಾಯಗಢ ಮತ್ತು ಶಿವನೇರಿಯ ಮಾದರಿಗಳಿವೆ.

# ಅನಗತ್ಯ ಅಧಿಕಾರಶಾಹಿ ಅಡೆತಡೆಗಳನ್ನು ಸೃಷ್ಟಿಸಬಾರದು, ವ್ಯಕ್ತಿಯ ಪ್ರಯಾಣದ ಹಕ್ಕನ್ನು ನಿರಾಶೆಗೊಳಿಸಬಾರದು: ಬಾಂಬೇ ಹೈಕೋರ್ಟ್

ಮುಂಬಯಿ, ಅ.16 - ಪ್ರಯಾಣದ ಹಕ್ಕು ಭಾರತದ ಸಂವಿಧಾನದಡಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ನೀಡಿರುವ ಮೂಲಭೂತ ಹಕ್ಕು ಎಂದು ಒತ್ತಿ ಹೇಳಿದೆ ಮತ್ತು ಈ ಹಕ್ಕನ್ನು ನಿರಾಶೆಗೊಳಿಸಲು ಅನಗತ್ಯ ಅಧಿಕಾರಶಾಹಿ ಅಡೆತಡೆಗಳನ್ನು ಸೃಷ್ಟಿಸಬಾರದು ಎಂದು ಬಾಂಬೇ ಹೈಕೋರ್ಟ್ ಪ್ರತಿಪಾದಿಸಿದೆ.

ನ್ಯಾಯಮೂರ್ತಿಗಳಾದ ಎಂ ಎಸ್ ಸೋನಕ್ ಮತ್ತು ಅದ್ವೈತ್ ಸೇಥ್ನಾ ಅವರ ಪೀಠವು 76 ವರ್ಷದ ಶರದ್ ಖಾಟು ಅವರ ರಕ್ಷಣೆಗೆ ಬಂದಿತು, ಪೊಲೀಸರು ತಮ್ಮ ಪೋರ್ಟಲ್‌ನಲ್ಲಿ ಮಾಡಿದ ತಪ್ಪಾದ ನಮೂದನ್ನು ಆಧರಿಸಿ ಪಾಸ್‌ಪೋರ್ಟ್ ನವೀಕರಣ/ಮರು ವಿತರಣೆಗಾಗಿ ಅರ್ಜಿಯನ್ನು ಪಾಸ್‌ಪೋರ್ಟ್ ಅಧಿಕಾರಿಗಳು ತಿರಸ್ಕರಿಸಿದರು, ಅದರ ಪ್ರಕಾರ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ಬಾಕಿ ಇದೆ.

ಖಾಟು ವಿರುದ್ಧ ವಾಸ್ತವವಾಗಿ ಯಾವುದೇ ಪ್ರಕರಣ ಬಾಕಿ ಇಲ್ಲ ಎಂದು ಪೊಲೀಸರು ಹೈಕೋರ್ಟ್‌ಗೆ ತಿಳಿಸಿದಾಗ, ಅಕ್ಟೋಬರ್ 14ರಂದು ಹೊರಡಿಸಿದ ಆದೇಶದಲ್ಲಿ, ಅವರ ಪಾಸ್‌ಪೋರ್ಟ್ ನವೀಕರಣ/ಮರು ವಿತರಣೆಗಾಗಿ ಹೊಸ ಅರ್ಜಿಯನ್ನು ಸಲ್ಲಿಸುವಂತೆ ನಿರ್ದೇಶಿಸಿತು.

ಖಾಟು ತನ್ನ ಮಗ ಮತ್ತು ಮೊಮ್ಮಕ್ಕಳನ್ನು ಭೇಟಿಯಾಗಲು ದುಬೈಗೆ ಪ್ರಯಾಣಿಸಲು ಬಯಸುತ್ತಿರುವುದರಿಂದ, ಅರ್ಜಿಯನ್ನು ಎರಡು ವಾರಗಳಲ್ಲಿ ನಿರ್ಧರಿಸಿ ಪ್ರಕ್ರಿಯೆಗೊಳಿಸುವಂತೆ ಹೈಕೋರ್ಟ್ ಪಾಸ್‌ಪೋರ್ಟ್ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲೇಖಿಸಿದ ಪೀಠವು, ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ವಿದೇಶ ಪ್ರವಾಸ ಮಾಡುವ ಹಕ್ಕು ಮೂಲಭೂತ ಹಕ್ಕು ಎಂದು ಹೇಳಿದೆ.

''ಈ ಅಮೂಲ್ಯ ಹಕ್ಕನ್ನು ನಿರಾಶೆಗೊಳಿಸಲು ಅನಗತ್ಯ ಅಧಿಕಾರಶಾಹಿ ಅಡೆತಡೆಗಳನ್ನು ಸೃಷ್ಟಿಸಬಾರದು'' ಎಂದು ಹೈಕೋರ್ಟ್ ಹೇಳಿದೆ.

ಪ್ರಸ್ತುತ ಪ್ರಕರಣದಲ್ಲಿ, ಪೊಲೀಸ್ ಆನ್‌ಲೈನ್ ಪೋರ್ಟಲ್ ತನ್ನ ವಿರುದ್ಧ ಪ್ರಕರಣ ಬಾಕಿ ಇದೆ ಎಂದು ತಪ್ಪಾಗಿ ಸೂಚಿಸಿದ್ದರಿಂದ ಖಾಟು ಅಮೂಲ್ಯ ಸಮಯವನ್ನು ಕಳೆದುಕೊಳ್ಳಬೇಕಾಯಿತು ಎಂದು ಹೈಕೋರ್ಟ್ ಗಮನಿಸಿದೆ.

ಅಂತಹ ಯಾವುದೇ ಪ್ರಕರಣ ಬಾಕಿ ಇಲ್ಲ ಎಂದು ಪೊಲೀಸರು ಈಗ ದೃಢಪಡಿಸಿದ್ದಾರೆ ಎಂದು ಅದು ಹೇಳಿದೆ.

''ಆದ್ದರಿಂದ, ತಪ್ಪಾದ ನಮೂದು ಅಳಿಸಲಾಗಿದೆ ಮತ್ತು ಅರ್ಜಿದಾರರು ಯಾವುದೇ ಸಮಸ್ಯೆಗಳನ್ನು ಎದುರಿಸಲು ಒತ್ತಾಯಿಸಲ್ಪಡುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಪೊಲೀಸ್ ಅಧಿಕಾರಿಗಳು ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾವು ನಿರ್ದೇಶಿಸುತ್ತೇವೆ'' ಎಂದು ನ್ಯಾಯಾಲಯ ಹೇಳಿದೆ.

ಖಾಟು ಅವರ ಮನವಿಯ ಪ್ರಕಾರ, ಅವರ ಪಾಸ್‌ಪೋರ್ಟ್ ಅಕ್ಟೋಬರ್ 2022ರಲ್ಲಿ ಅವಧಿ ಮೀರಿತು, ನಂತರ ಅವರು ನವೀಕರಣ/ಮರು ವಿತರಣೆಗಾಗಿ ಅರ್ಜಿಯನ್ನು ಸಲ್ಲಿಸಿದ್ದರು. ಆದಾಗ್ಯೂ, ಆನ್‌ಲೈನ್ ದಾಖಲೆಗಳು 1990ರ ಬಾಕಿ ಇರುವ ಕ್ರಿಮಿನಲ್ ಪ್ರಕರಣವನ್ನು ತೋರಿಸುತ್ತಿರುವುದರಿಂದ ಅದನ್ನು ನೀಡಲು ಸಾಧ್ಯವಿಲ್ಲ ಎಂದು ಪಾಸ್‌ಪೋರ್ಟ್ ಅಧಿಕಾರಿಗಳು ಅವರಿಗೆ ತಿಳಿಸಿದರು.

ಖಾಟು ಪೊಲೀಸ್ ಠಾಣೆ ಮತ್ತು ಸಂಬಂಧಿತ ಸ್ಥಳೀಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದಾಗ, ಅಂತಹ ಯಾವುದೇ ಪ್ರಕರಣ ಬಾಕಿ ಇಲ್ಲ ಎಂದು ಅವರಿಗೆ ತಿಳಿಸಲಾಯಿತು.

ಖಾಟು ಅವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ಬಾಕಿ ಇಲ್ಲ ಎಂದು ಪಾಸ್‌ಪೋರ್ಟ್ ಅಧಿಕಾರಿಗಳಿಗೆ ತಿಳಿಸಿದರು.

ಇದರ ಹೊರತಾಗಿಯೂ, ಪಾಸ್‌ಪೋರ್ಟ್ ಪ್ರಾಧಿಕಾರವು ಅವರ ಅರ್ಜಿಯನ್ನು ಮುಕ್ತಾಯಗೊಳಿಸಿದೆ, ಅದರ ಪ್ರಕಾರ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ ಎಂದು ಅವರ ಅರ್ಜಿಯಲ್ಲಿ ತಿಳಿಸಲಾಗಿದೆ.

# ಎರಡು ವರ್ಷಗಳಲ್ಲಿ ಎಂಎಸ್‌ಆರ್‌ಟಿಸಿಯನ್ನು ಲಾಭಕ್ಕೆ ತರುತ್ತೇನೆ : ಸಚಿವ ಸರ್ನಾಯಕ್

ಥಾಣೆ, ಅ. 16 - ನಷ್ಟದಲ್ಲಿರುವ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು (ಎಂಎಸ್‌ಆರ್‌ಟಿಸಿ) ಮುಂದಿನ ಎರಡು ವರ್ಷಗಳಲ್ಲಿ ಸುಧಾರಿಸಿ ಲಾಭದಾಯಕ ಸಂಸ್ಥೆಯಾಗಿ ಪರಿವರ್ತಿಸುವ ಗುರಿ ಹೊಂದಿರುವುದಾಗಿ ಸಾರಿಗೆ ಸಚಿವ ಪ್ರತಾಪ್ ಸರ್ನಾಯಕ್ ಹೇಳಿದ್ದಾರೆ.

2018-19ರಲ್ಲಿ 4,603 ಕೋಟಿ ರೂ.ಗಳಷ್ಟಿದ್ದ ಎಂಎಸ್‌ಆರ್‌ಟಿಸಿಯ ಒಟ್ಟು ನಷ್ಟವು 2023-24ರ ಹಣಕಾಸು ವರ್ಷದಲ್ಲಿ 10,324 ಕೋಟಿ ರೂ.ಗಳಿಗೆ ಏರಿದೆ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಯು ಕಳೆದ 45 ವರ್ಷಗಳಲ್ಲಿ ಕೇವಲ ಎಂಟು ಆರ್ಥಿಕ ವರ್ಷಗಳಲ್ಲಿ ಲಾಭ ಗಳಿಸಿದೆ ಎಂದು ಜೂನ್ ಅಂತ್ಯದಲ್ಲಿ ನಿಗಮ ಬಿಡುಗಡೆ ಮಾಡಿದ 'ಶ್ವೇತಪತ್ರ'ದಲ್ಲಿ ತಿಳಿಸಲಾಗಿದೆ.

ಜೂನ್ 1, 1948ರಂದು ಅಸ್ತಿತ್ವಕ್ಕೆ ಬಂದ ಎಂಎಸ್‌ಆರ್‌ಟಿಸಿ, 15,000 ಕ್ಕೂ ಹೆಚ್ಚು ಬಸ್‌ಗಳ ಸಮೂಹವನ್ನು ಹೊಂದಿರುವ ಭಾರತದಲ್ಲಿ ಅಂತಹ ಅತಿದೊಡ್ಡ ಸಾರಿಗೆ ಸಂಸ್ಥೆಯಾಗಿದೆ. ಪ್ರತಿದಿನ 55 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರು ಅದರ ಬಸ್‌ಗಳಲ್ಲಿ ಪ್ರಯಾಣಿಸುತ್ತಾರೆ.

ಬುಧವಾರ ತಡರಾತ್ರಿ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸರ್ನಾಯಕ್, ''ಮುಂದಿನ ಎರಡು ವರ್ಷಗಳಲ್ಲಿ, ನಾನು ಖಂಡಿತವಾಗಿಯೂ ಎಂಎಸ್‌ಆರ್‌ಟಿಸಿ ಅನ್ನು ತಿರುಗಿಸಿ ಲಾಭಕ್ಕೆ ತರುತ್ತೇನೆ'' ಎಂದು ಹೇಳಿದರು.

ಎಂಎಸ್‌ಆರ್‌ಟಿಸಿ ಮತ್ತು ರಾಜ್ಯ ಸಾರಿಗೆ ಇಲಾಖೆಯನ್ನು ಈ ಹಿಂದೆ ನಿರ್ಲಕ್ಷಿಸಲಾಗಿದೆ ಎಂದು ಸಚಿವರು ಪ್ರತಿಪಾದಿಸಿದರು.

ಅಧಿಕಾರ ವಹಿಸಿಕೊಂಡ ನಂತರ, ಅವುಗಳ ಕಾರ್ಯನಿರ್ವಹಣೆಯಲ್ಲಿ 'ಆಮೂಲಾಗ್ರ ಸಕಾರಾತ್ಮಕ ಬದಲಾವಣೆ'ಯನ್ನು ಖಚಿತಪಡಿಸಿದ್ದಾರೆ ಎಂದು ಅವರು ಹೇಳಿದರು.

ಭಿವಂಡಿಯಲ್ಲಿ ಗೋದಾಮುಗಳಿಗೆ ಸೇವೆ ಸಲ್ಲಿಸುವ ಭಾರೀ ವಾಹನಗಳ ಚಲನೆಯು ಜಿಲ್ಲೆಯಲ್ಲಿ ಮತ್ತು ಸುತ್ತಮುತ್ತಲಿನ ವಿಶೇಷವಾಗಿ ಜನನಿಬಿಡ ಮುಂಬೈ-ಅಹಮದಾಬಾದ್ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆಗೆ ಪ್ರಮುಖ ಕಾರಣ ಎಂದು ಥಾಣೆಯ ಶಾಸಕರು ಆರೋಪಿಸಿದರು.

ನೆರೆಯ ಪಾಲ್ಘರ್ ಜಿಲ್ಲೆಯ ಮುಂಬೈ-ಅಹಮದಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಸಂಜೆಯಿಂದ ಸುಮಾರು 12 ಗಂಟೆಗಳ ಕಾಲ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರು ಭಾರಿ ಸಂಚಾರ ದಟ್ಟಣೆ ಅನುಭವಿಸಿದರು.

''ಭಿವಂಡಿಯಲ್ಲಿ ಹಲವಾರು ಗೋದಾಮುಗಳಿವೆ, ಅಲ್ಲಿ ಪ್ರತಿದಿನ ಒಂದು ಡಜನ್‌ಗಿಂತಲೂ ಹೆಚ್ಚು ಟ್ರಕ್‌ಗಳು ಸರಕುಗಳೊಂದಿಗೆ ಲೋಡ್ ಮತ್ತು ಇಳಿಸಲ್ಪಡುತ್ತವೆ. ಥಾಣೆಯ ಸುತ್ತಲೂ ಅವುಗಳ ಚಲನೆಯು ಜಿಲ್ಲೆಯ ಸಂಚಾರದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ'' ಎಂದು ಸರ್ನಾಯಕ್ ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರ 75ನೇ ಹುಟ್ಟುಹಬ್ಬವನ್ನು ಆಚರಿಸಲು, ಥಾಣೆಯ ಓವ್ಲಾ-ಮಜಿವಾಡಾ ವಿಧಾನಸಭಾ ಕ್ಷೇತ್ರದ ಕುಟುಂಬಗಳಿಗೆ 75,000 ದೀಪಾವಳಿ ಕಿಟ್‌ಗಳನ್ನು (ಆಹಾರ ಧಾನ್ಯಗಳು, ಎಣ್ಣೆ ಮತ್ತು ಇತರ ಹಬ್ಬಕ್ಕೆ ಸಂಬಂಧಿಸಿದ ವಸ್ತುಗಳನ್ನು ಒಳಗೊಂಡಂತೆ) ವಿತರಿಸುತ್ತಿರುವುದಾಗಿ ಸರ್ನಾಯಕ್ ಹೇಳಿದರು. ಈಗಾಗಲೇ ಸುಮಾರು 21,000 ಕಿಟ್‌ಗಳನ್ನು ವಿತರಿಸಲಾಗಿದೆ ಎಂದು ಅವರು ಹೇಳಿದರು.


ಇಂದು ಸಂಜೆ ಡೊಂಬಿವಲಿಯಲ್ಲಿ

ತ್ರಿರಂಗ ಸಂಗಮ ಮುಂಬಯಿ ಅರ್ಪಿಸುವ

ಇಂದು ತಾ.17-10-2025ನೇ ಶುಕ್ರವಾರ ಸಂಜೆ 4.00ಕ್ಕೆ

ಶಿವಂ ಹೊಟೇಲ್ ಸಭಾಗೃಹ, ಎಂಐಡಿಸಿ ಡೊಂಬಿವಲಿ (ಪೂ) ಇಲ್ಲಿ

ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಕೃಪಾಪೋಷಿತ ಯಕ್ಷಗಾನ ಮಂಡಳಿ ನಾಗಬ್ರಹ್ಮ ಕ್ಷೇತ್ರ ಪಾವಂಜೆ ಇವರ ಸುಪ್ರಸಿದ್ಧ ಕಲಾವಿದರ ಸಂಗಮದಲ್ಲಿ ಯಕ್ಷಧ್ರುವ ಪಟ್ಲ ಸತೀಶ್ ಶೆಟ್ಟಿಯವರ ಗಾನಸಾರಥ್ಯದೊಂದಿಗೆ




ಉಚಿತ ಪ್ರವೇಶ

ಉಚಿತ ಪ್ರವೇಶ

ಸಭಾ ಕಾರ್ಯಕ್ರಮ :

ಅಧ್ಯಕ್ಷತೆ : ಶ್ರೀ ದಿವಾಕರ್ ಶೆಟ್ಟಿ ಇಂದ್ರಾಳಿ

(ಕಾರ್ಯಾಧ್ಯಕ್ಷರು : ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿ, ಬಂಟರ ಸಂಘ ಮುಂಬಯಿ)

ಮುಖ್ಯ ಅತಿಥಿಗಳು : ಶ್ರೀ ಆನಂದ ಶೆಟ್ಟಿ ಎಕ್ಕಾರು

(ಕಾರ್ಯಾಧ್ಯಕ್ಷರು: ಡೊಂಬಿವಲಿ ಪ್ರಾದೇಶಿಕ ಸಮಿತಿ, ಬಂಟರ ಸಂಘ ಮುಂಬಯಿ)

ಶ್ರೀ ಸುಬೋಧ್ ಭಂಡಾರಿ

(ಕಾರ್ಯಾಧ್ಯಕ್ಷರು: ಭಿವಂಡಿ-ಬದ್ಲಾಪುರ ಪ್ರಾದೇಶಿಕ ಸಮಿತಿ, ಬಂಟರ ಸಂಘ ಮುಂಬಯಿ)

ಶ್ರೀ ಸುಬ್ಬಯ್ಯ ಎ. ಶೆಟ್ಟಿ

(ಉಪ ಕಾರ್ಯಾಧ್ಯಕ್ಷರು: ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿ, ಬಂಟರ ಸಂಘ ಮುಂಬಯಿ)

ಶ್ರೀ ಸುಕುಮಾರ್ ಶೆಟ್ಟಿ (ಸಮನ್ವಯಕರು: ಮಧ್ಯವಲಯ, ಬಂಟರ ಸಂಘ ಮುಂಬಯಿ)

ಅತಿಥಿಗಳು :

ಶ್ರೀ ಕರುಣಾಕರ್ ಶೆಟ್ಟಿ ಕಲ್ಲಡ್ಕ (ಸುಯೋಗ್)
ಶ್ರೀ ರಾಜೀವ್ ಭಂಡಾರಿ (ಅನ್ನಪೂರ್ಣ)
ಶ್ರೀ ವಿಜಿತ್ ಶೆಟ್ಟಿ (ದ್ವಾರಕ)
ಶ್ರೀ ವಿಠಲ್ ಶೆಟ್ಟಿ (ಮಾಜಿ ಅಧ್ಯಕ್ಷರು, ಕರ್ನಾಟಕ ಸಂಘ)
ಶ್ರೀ ವೇಣುಗೋಪಾಲ್ ರೈ (ದುರ್ಗಾ)
ಶ್ರೀ ಪ್ರಭಾಕರ್ ವಿ. ಶೆಟ್ಟಿ ಕಲ್ಲಡ್ಕ
ಶ್ರೀ ಸುಂದರ್ ಶೆಟ್ಟಿ (ಮಂಗೇಶ್)
ಶ್ರೀ ಹರಿಶ್ಚಂದ್ರ ಶೆಟ್ಟಿ (ಗೌರವ್)
ಶ್ರೀ ಅರುಣ್ ಶೆಟ್ಟಿ (ಕುಶಲಾ)
ಶ್ರೀ ಹೇಮಂತ್ ಶೆಟ್ಟಿ ಕಾವೂರು ಗುತ್ತು
ಶ್ರೀಮತಿ ಯೋಗಿನಿ ಎಸ್. ಶೆಟ್ಟಿ (ಕಾರ್ಯಾಧ್ಯಕ್ಷರು, ಮಹಿಳಾ ವಿಭಾಗ ಡೊಂಬಿವಲಿ ಪ್ರಾದೇಶಿಕ ಸಮಿತಿ)
ಶ್ರೀ ವಿಜಯ ಶೆಟ್ಟಿ (ಸಜೀಪ)
ಶ್ರೀ ಜಯಂತ್ ಜೆ. ಶೆಟ್ಟಿ
ಶ್ರೀ ಹರೀಶ್ ಶೆಟ್ಟಿ, ಪಡುಕುದ್ರು
ಶ್ರೀ ಅಶೋಕ್ ಶೆಟ್ಟಿ ಮುಂಡ್ಕೂರು
ಶ್ರೀ ಜಯಕರ ಶೆಟ್ಟಿ ಪಡುಕುದ್ರು
ಶ್ರೀ ವಿವೇಕ್ ಶೆಟ್ಟಿ (ಸಾರಥಿ)
ಶ್ರೀ ಸಚಿನ್ ಕುಮಾರ್ ಶೆಟ್ಟಿ (ಜಯಶ್ರೀ)
ಶ್ರೀ ರವೀಂದ್ರ ವೈ. ಶೆಟ್ಟಿ (ಆದರ್ಶ್)
ಶ್ರೀ ಸತೀಶ್ ಎನ್. ಶೆಟ್ಟಿ (ಕೆ.ಎನ್. ಪಾರ್ಕ್)
ಶ್ರೀ ಭಾಸ್ಕರ್ ಶೆಟ್ಟಿ ದೊಂಡೆರಂಗಡಿ(ದೀಪಕ್)
ಶ್ರೀ ಪ್ರಕಾಶ್ ಶೆಟ್ಟಿ (ಮೆಟ್ರೋ)
ಶ್ರೀ ಸುರೇಂದ್ರ ರೈ ಬದ್ಲಾಪುರ (ಹೊಟೇಲ್ ನಕ್ಷತ್ರ)
ಶ್ರೀ ಉದಯ ಶೆಟ್ಟಿ, ಉಲ್ಲಾಸ್‌ನಗರ್ (ಪ್ರವೀಣ್)
ಶ್ರೀ ನಾಗ್‌ಕಿರಣ್ ಶೆಟ್ಟಿ (ದೇವದಾಸ್)
ಶ್ರೀ ಸುಧೀರ್ ಶೆಟ್ಟಿ ವಂಡ್ಸೆ
ಶ್ರೀ ಸುರೇಂದ್ರ ಶೆಟ್ಟಿ, ಶಿಮುಂಜೆ ಪರಾರಿ
ಶ್ರೀ ರಾಮಕೃಷ್ಣ ಶೆಟ್ಟಿ (ಕೆ.ಎನ್. ಪಾರ್ಕ್)
ಶ್ರೀ ಹರೀಶ್ ಶೆಟ್ಟಿ, ಶಿಮುಂಜೆ ಪರಾರಿ
ಶ್ರೀ ಅನಿಲ್ ಶೆಟ್ಟಿ (ಹುಕ್ಕೇರಿ)
ಶ್ರೀ ಸಂತೋಷ್ ಎಚ್. ಶೆಟ್ಟಿ (ಲೀಲಾ)
ಶ್ರೀ ರಾಜೇಶ್ ಶೆಟ್ಟಿ (ಡಿವೈನ್)
ಶ್ರೀ ಜೈಪ್ರಸಾದ್ ಶೆಟ್ಟಿ
ಶ್ರೀಮತಿ ಶೋಭಾ ಶೆಟ್ಟಿ (ಕಾರ್ಯಾಧ್ಯಕ್ಷೆ, ಮಹಿಳಾ ವಿಭಾಗ, ಭಿವಂಡಿ -ಬದ್ಲಾಪುರ)
ಶ್ರೀ ಪ್ರೇಮ್ ಕುಮಾರ್ ರೈ (ಸದ್ಗುರು)
ಶ್ರೀ ನಿತ್ಯಾನಂದ ಶೆಟ್ಟಿ ಮಾಣಿಬೆಟ್ಟು, ಶಿರ್ವ

ವಿಶೇಷ ಸಹಕಾರ : ಪಾಲುದಾರರು, ಹೋಟೇಲು ಶಿವಂ ಡೊಂಬಿವಲಿ

ಸರ್ವರಿಗೂ ಆದರದ ಸ್ವಾಗತವನ್ನು ಬಯಸುವ :

ಕರ್ನೂರು ಮೋಹನ್ ರೈ 9867304757 | ಅಶೋಕ್ ಪಕ್ಕಳ 9323822352 | ನವೀನ್ ಶೆಟ್ಟಿ ಇನ್ನ ಬಾಳಿಕೆ 9820811114


Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane, Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Published from 215, 2nd Flr, Narayan Udyog Bhavan, Industrial Estate, Lalbaug, Mumbai - 400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com

ಕರ್ನಾಟಕ ಮಲ್ಲ

## ಸಂಪಾದಕರ ಮಾತು...

ಶುಕ್ರವಾರ 17, ಅಕ್ಟೋಬರ್ 2025

## ನಕ್ಸಲರ ಸಾಮೂಹಿಕ ಶರಣಾಗತಿ ಸ್ವಾಗತಾರ್ಹ ಬೆಳವಣಿಗೆ

ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯಲ್ಲಿ ಸೋಮವಾರ ತಡರಾತ್ರಿ 61 ನಕ್ಸಲೀಯರು ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗತರಾಗಿದ್ದಾರೆ. ಗಡ್ಚಿರೋಲಿ ಜಿಲ್ಲೆಯ ಲಹೇರಿಯಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಶರಣಾಗತರಾದ ಮಾವೋವಾದಿಗಳು ಬುಧವಾರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಸಮ್ಮುಖದಲ್ಲಿ ಮತ್ತೆ ಅಧಿಕೃತ ಶರಣಾಗತಿ ಕಾರ್ಯಕ್ರಮದಲ್ಲಿ ಸಮಾಜದ ಮುಖ್ಯವಾಹಿನಿಗೆ ಬರುವ ಪ್ರತಿಜ್ಞೆ ಸ್ವೀಕಾರ ಮಾಡಿದ್ದಾರೆ. ಹಿರಿಯ ಮಾವೋವಾದಿ ನಾಯಕ ಮಲ್ಲೋಜುಲ ವೇಣುಗೋಪಾಲ್ ರಾವ್ ಅಲಿಯಾಸ್ ಭೂಪತಿ ನೇತೃತ್ವದಲ್ಲಿ ಮಾವೋವಾದಿಗಳ ಶರಣಾಗತಿ ನಡೆದಿದೆ. ಈ ಬೆಳವಣಿಗೆ ಅತ್ಯಂತ ಸ್ವಾಗತಾರ್ಹವಾಗಿದೆ. ರಕ್ತ ಕ್ರಾಂತಿಯ ಹೋರಾಟ ಮಾರ್ಗವನ್ನು ತ್ಯಜಿಸಿ ದೇಶದ ಸಂವಿಧಾನದ ಚೌಕಟ್ಟಿನ ಅಡಿಯಲ್ಲಿ ಪ್ರಜಾಸತ್ತಾತ್ಮಕ ನೆಲೆಯಲ್ಲಿ ಬದುಕುವ ಬದಲಾವಣೆಯನ್ನು ಬಯಸಿರುವ ಭೂಪತಿ ಮತ್ತು ಅವರ ಜತೆಗಾರರ ನಿರ್ಧಾರ ಅತ್ಯಂತ ಪ್ರಶಂಸನೀಯ.

ಈ ಹಿಂದೆ ಕರ್ನಾಟಕದಲ್ಲಿ ನಕ್ಸಲರು ಶರಣಾಗತರಾಗಿ ಸಮಾಜದ ಮುಖ್ಯವಾಹಿನಿಗೆ ಬರಲು ಅವಕಾಶ ಕಲ್ಪಿಸಲಾಗಿತ್ತು ಮತ್ತು 2025ರ ಜೂನ್ 8ರಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ಸರಕಾರಿ ನಿವಾಸ ಕೃಷ್ಣಾದಲ್ಲಿ ಮುಂಡಗಾರು ಲತಾ ನೇತೃತ್ವದಲ್ಲಿ ನಾಲ್ವರು ಮಹಿಳೆಯರ ಸಹಿತ ಆರು ಮಾವೋವಾದಿಗಳು ಶರಣಶತರಾಗಿ ಸಮಾಜದ ಮುಖ್ಯ ವಾಹಿನಿಗೆ ಮರಳಿದ್ದು, ಆ ಮೂಲಕ ಕರ್ನಾಟಕ ನಕ್ಸಲ್ ಮುಕ್ತ ರಾಜ್ಯ ಎಂದು ಘೋಷಿತವಾಗಿದೆ. ಕರ್ನಾಟಕದ ಶೃಂಗೇರಿಯಲ್ಲಿ 2024ರ ಡಿಸೆಂಬರ್ ತಿಂಗಳಲ್ಲಿ ನಕ್ಸಲ್ ನಾಯಕ ವಿಕ್ರಂ ಗೌಡನನ್ನು ನಕ್ಸಲ್ ನಿಗ್ರಹ ಪಡೆ ಕಾರ್ಯಾಚರಣೆಯಲ್ಲಿ ಹತ್ಯೆ ಮಾಡಿತ್ತು. ವಿಕ್ರಂ ಗೌಡ ಕರ್ನಾಟಕದಲ್ಲಿ 2013-14ರಲ್ಲಿ ನಕ್ಸಲರ ಶರಣಾಗತಿ ನೀತಿ ಜಾರಿಗೆ ಬಂದಾಗ ಅದನ್ನು ಬಲವಾಗಿ ವಿರೋಧಿಸಿ ಶಸ್ತ್ರಾಸ್ತ್ರ ಹೋರಾಟವೇ ಅಂತಿಮ ಎಂದು ನಿರ್ಧಾರ ತಳೆದಿದ್ದ. ಆತನ ಸಾವಿನ ಬಳಿಕ ಕರ್ನಾಟಕದಲ್ಲಿ ಉಳಿದದ್ದು ಆತನ ಜತೆಗಿದ್ದ ಆರು ನಕ್ಸಲರು ಎಂದು ಪರಿಗಣಿಸಲಾಗಿತ್ತು. ಆ ಆರು ಜನರು ಚಿಕ್ಕಮಗಳೂರು ಜಿಲ್ಲಾಧಿಕಾರಿ ಕಚೇರಿ ಬದಲು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ನಿವಾಸದಲ್ಲಿ ಶರಣಾಗತಿ ಆಗಿದ್ದು ಅತ್ಯಂತ ಮಹತ್ತರ ಘಟನೆ. ದೇಶದ ಯಾವುದೇ ರಾಜ್ಯದಲ್ಲಿ ಮಾವೋವಾದಿಗಳು ಮುಖ್ಯಮಂತ್ರಿಯ ಕಚೇರಿಯಲ್ಲಿ ಶರಣಾಗತರಾಗಿರಲಿಲ್ಲ. ಸಿದ್ದರಾಮಯ್ಯ ಅವರು 2013ರಲ್ಲಿ ಮುಖ್ಯಮಂತ್ರಿ ಆದಾಗ ನಕ್ಸಲರ ಶರಣಾಗತಿ ನೀತಿಯನ್ನು ಅನುಷ್ಠಾನಕ್ಕೆ ತಂದಿದ್ದು ಗೌರಿ ಲಂಕೇಶ್ ಅವರ ನೇತೃತ್ವದಲ್ಲಿ ನಕ್ಸಲರ ಶರಣಾಗತಿ ಮಾತುಕತೆಗೆ ತಂಡವೊಂದು ರಚನೆ ಆಗಿ ಆ ಮೂಲಕ ಸಾಕಷ್ಟು ಪ್ರಮುಖ ನಕ್ಸಲರು ಶಸ್ತ್ರಾಸ್ತ್ರ ತ್ಯಜಿಸಿ ಸರಕಾರದ ನಕ್ಸಲರ ಪುನರ್ವಸತಿ ಯೋಜನೆಗೆ ಸೇರ್ಪಡೆ ಆಗಿರುವುದು ಕರ್ನಾಟಕದ ಇತಿಹಾಸವಾಗಿದೆ.

ಮಹಾರಾಷ್ಟ್ರದಲ್ಲಿ ಈಗ 61 ನಕ್ಸಲೀಯರು ಹಿಂಸಾ ಮಾರ್ಗದ ಭೂಗತ ಜಗತ್ತನ್ನು ತೊರೆದು ಸಮಾಜದ ಮುಖ್ಯವಾಹಿನಿಗೆ ಬರುವ ನಿರ್ಧಾರ ತೆಗೆದುಕೊಂಡು ಶರಣಾಗತರಾಗಿದ್ದಾರೆ. ಅದರಲ್ಲೂ ಭೂಪತಿ ನಿಷೇಧಿತ ಮಾವೋವಾದಿ ಸಂಘಟನೆಯ ಕೇಂದ್ರ ಸಮಿತಿ ಸದಸ್ಯ ಆಗಿದ್ದು ತಲೆಗೆ ವಿವಿಧ 6 ಕೋಟಿ ರೂಪಾಯಿ ಬಹುಮಾನ ಘೋಷಿತ ಆಗಿರುವ ತೀವ್ರಗಾಮಿ ನಾಯಕ. ಮಾವೋವಾದಿ ಕ್ರಾಂತಿಕಾರಿ ಸಿದ್ಧಾಂತದ ಪ್ರಮುಖ ಪ್ರತಿಪಾದಕನಾಗಿ, ಸಿದ್ಧಾಂತದ ಪ್ರಚಾರಕರಾಗಿ ಇದ್ದ ವೇಣುಗೋಪಾಲ್ ರಾವ್ ಶರಣಾಗತಿ ಅತ್ಯಂತ ಮಹತ್ತರ ಬೆಳವಣಿಗೆಯಾಗಿದೆ. ರಾವ್ ಅವರ ಪತ್ನಿ ಈ ವರ್ಷದ ಆರಂಭದಲ್ಲೇ ಶಸ್ತ್ರಾಸ್ತ್ರ ತ್ಯಜಿಸಿ ಸಮಾಜದ ಮುಖ್ಯವಾಹಿನಿಗೆ ಮರಳಿದ್ದು, ಕಳೆದ ಕನಿಷ್ಠ ಒಂದು ತಿಂಗಳಿನಿಂದ ಭೂಪತಿ ಅವರ ಶರಣಾಗತಿ ವಿಚಾರವಾಗಿ ರಾಜ್ಯದ ಉನ್ನತ ಪೊಲೀಸ್ ಅಧಿಕಾರಿಗಳ ಜತೆಗೆ ಮಾವೋವಾದಿಗಳ ಸಂಧಾನಕಾರರು ಸಂಪರ್ಕದಲ್ಲಿ ಇದ್ದು ಅದು ಯಶಸ್ವಿಯಾಗಿದೆ. ಭೂಪತಿ ಮತ್ತು ಅವರ ಜತೆಗಾರರು ಸಾಮೂಹಿಕವಾಗಿ ಸಮಾಜದ ಮುಖ್ಯವಾಹಿನಿಗೆ ಮರಳಲು ನಿರ್ಧಾರ ಮಾಡಿದ್ದು ಸಹಜವಾಗಿಯೇ ಮಹಾರಾಷ್ಟ್ರವನ್ನು ನಕ್ಸಲ್ ಮುಕ್ತ ರಾಜ್ಯವನ್ನಾಗಿ ಮಾಡುವ ಡಿಸೆಯಲ್ಲಿ ಒಂದು ದೊಡ್ಡ ಮೈಲಿಗಲ್ಲು ಆಗಿದೆ. ರಕ್ತಪಾತದ ಮಾರ್ಗದಿಂದ ಸಮ ಸಮಾಜ ನಿರ್ಮಾಣ ಸಾಧ್ಯ ಆಗುವುದಿಲ್ಲ ಎಂಬ ವಾಸ್ತವ ಜಗತ್ತಿನ ಮುಂದೆ ಇದೆ. ರಷ್ಯಾ ಮತ್ತು ಚೀನಾ ಕೂಡಾ ತೀವ್ರಗಾಮಿ ಮಾವೋವಾದವನ್ನೇ ಆಯ್ದುಕೊಂಡು ಕ್ರಾಂತಿ ಮಾಡಿದ ದೇಶಗಳಾದರೂ ಅಲ್ಲಿ ಆಗಿರುವ ಬದಲಾವಣೆ ಜಗತ್ತಿನ ಮುಂದೆ ಇದೆ. ರಷ್ಯಾವಂತೂ ಮಾವೋವಾದಿ ಕಮ್ಯೂನಿಸ್ಟ್ ಸಿದ್ಧಾಂತದಿಂದಲೇ ಕಳಚಿಕೊಂಡಿದ್ದರೆ ಚೀನಾದಲ್ಲಿ ಕೂಡಾ ಮೂಲ ಮಾವೋವಾದ ಸಾಕಷ್ಟು ಬದಲಾವಣೆ ಕಂಡಿರುವುದು ವಾಸ್ತವವಾಗಿದೆ.

ಗಡ್ಚಿರೋಲಿಯಲ್ಲಿ ನಕ್ಸಲ್ ನೇತಾರ ಭೂಪತಿ ಮತ್ತು ಇತರ 60 ಮಾವೋವಾದಿಗಳ ಅಧಿಕೃತ ಶರಣಾಗತಿ ಬುಧವಾರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಸಮ್ಮುಖದಲ್ಲಿ ನಡೆದಿದೆ. ಇದು ರಾಜ್ಯದ ಐತಿಹಾಸಿಕ ಘಟನೆ ಎಂದು ಸ್ವಯಂ ಫಡ್ನವೀಸ್ ಅವರು ಭೂಪತಿ ಮತ್ತು ಇತರರ ಶರಣಾಗತಿಯನ್ನು ಸ್ವಾಗತಿಸಿದ್ದಾರೆ. ಇದು ರಾಜ್ಯದಲ್ಲಿ ನಕ್ಸಲ್ ಚಳುವಳಿಯ ಅಂತ್ಯದ ಆರಂಭ ಎಂದು ಮುಖ್ಯಮಂತ್ರಿ ವಿಶ್ಲೇಷಣೆ ಮಾಡಿದ್ದಾರೆ. ನಕ್ಸಲ್ ವಿರೋಧಿ ಹೋರಾಟದಲ್ಲಿ ಮಹಾರಾಷ್ಟ್ರ ಮುಂಚೂಣಿಯಲ್ಲಿ ಇರುವ ರಾಜ್ಯ ಎಂದು ಬೊಟ್ಟು ಮಾಡಿರುವ ಫಡ್ನವೀಸ್ ಅವರು ನಕ್ಸಲ್ ಚಳುವಳಿಯನ್ನು ಬಿಟ್ಟು ಸಮಾಜದ ಮುಖ್ಯ ವಾಹಿನಿಗೆ ಸೇರುವವರಿಗೆ ಹೊಸ ಜೀವನಕ್ಕೆ ಅಗತ್ಯ ವ್ಯವಸ್ಥೆ ಮಾಡುವ ಎಲ್ಲ ಯೋಜನೆಗಳನ್ನು ತ್ವರಿತಗೊಳಿಸುವುದಾಗಿ ಹೇಳಿದ್ದಾರೆ. ಗಡ್ಚಿರೋಲಿ ಜಿಲ್ಲೆಯನ್ನು ನಕ್ಸಲರ ನಿಯಂತ್ರಣದಿಂದ ಮುಕ್ತ ಮಾಡುವ ಮೂಲಕ ಜಿಲ್ಲೆಯನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಾಗಿ ಹೇಳಿದ್ದಾರೆ.

ರಾಜ್ಯದಲ್ಲಿ ಶರಣಾಗತ ಆದ ಮಾವೋವಾದಿಗಳಿಗೆ ಗೌರವದ ಜೀವನ ನಡೆಸಲು ಪುನರ್ವಸತಿ ಮಾಡುತ್ತಿದೆ ಎಂದು ಫಡ್ನವೀಸ್ ತಿಳಿಸಿದ್ದಾರೆ. ರಾಜ್ಯದಲ್ಲಿ ಕಳೆದ ಕೆಲವರ್ಷಗಳಿಂದ ಮಾವೋವಾದಿಗಳ ಶರಣಾಗತಿ ನಡೆಯುತ್ತಿದ್ದರೂ ಇಷ್ಟೊಂದು ಸಂಖ್ಯೆಯಲ್ಲಿ ಒಂದೇ ಬಾರಿ ನಕ್ಸಲರ ಶರಣಾಗತಿ ಇದೇ ಮೊದಲಾಗಿದ್ದು, ಮುಖ್ಯಮಂತ್ರಿ ಫಡ್ನವೀಸ್ ಹೇಳಿರುವಂತೆಯೇ ಇದು ರಾಜ್ಯದಲ್ಲಿ ಚಾರಿತ್ರಿಕ ಘಟನೆ. ರಕ್ತಪಾತದ ತೀವ್ರಗಾಮಿ ಸಿದ್ಧಾಂತ ತೊರೆದು ಸಾಮಾಜಿಕ ಬದುಕಿಗೆ ತೆರೆದುಕೊಳ್ಳುವ ಈ ಬೆಳವಣಿಗೆ ಸಾಮಾನ್ಯ ಘಟನೆ ಅಲ್ಲ. ಏಕಕಾಲದಲ್ಲಿ 61 ನಕ್ಸಲರ ಶರಣಾಗತಿ ಸಹಜವಾಗಿಯೇ ಗಡ್ಚಿರೋಲಿಯನ್ನು ಮಾವೋವಾದಿ ಮುಕ್ತ ಜಿಲ್ಲೆಯನ್ನಾಗಿ ಮಾಡುವಲ್ಲಿ ಮಹತ್ತರ ಹೆಜ್ಜೆಯಾಗಿದೆ. ಭೂಪತಿ ಮತ್ತು ಇತರ 60 ಮಾವೋವಾದಿಗಳ ಸಾಮೂಹಿಕ ಶರಣಾಗತಿ ಗಡ್ಚಿರೋಲಿ ಜಿಲ್ಲೆಯಲ್ಲಿ ಇರುವ ಇತರ ನಕ್ಸಲರ ಶರಣಾಗತಿಗೆ ಪ್ರೇರಣೆ ಆಗಲಿ. ಹಿಂಸಾ ಮಾರ್ಗದಿಂದ ಸಾಮಾಜಿಕ ಸಮಾನತೆ ಮತ್ತು ನ್ಯಾಯ ಕೇವಲ ಕಲ್ಪನೆ ಎಂದು ಅರಿತುಕೊಳ್ಳುವ ದಿಸೆಯಲ್ಲಿ ಮಾವೋವಾದಿಗಳು ಚಿಂತಿಸಲು ಇದು ಸಕಾಲವಾಗಿದೆ. ರಕ್ತಪಾತದ ಅಧ್ಯಾಯಕ್ಕೆ ಅಂತ್ಯ ಹಾಡಿ ಶಾಂತಿಯ ಬದುಕಿಗೆ ಮರಳಲು ಮಾವೋವಾದಿಗಳಿಗೆ ಮುಕ್ತ ಅವಕಾಶ ಇದ್ದು, ಈ ಅವಕಾಶವನ್ನು ಅವರು ಬಳಸಿಕೊಂಡು ಅರಣ್ಯ ಜೀವನ ತೊರೆದು ಸಮಾಜ ಜೀವನಕ್ಕೆ ಸೇರಿಕೊಳ್ಳಬೇಕು.

ಮಹಾರಾಷ್ಟ್ರದ ಗಡ್ಚಿರೋಲಿಯಲ್ಲಿ 61 ಮಾವೋವಾದಿಗಳ ಶರಣಾಗತಿಯ ಬೆನ್ನಲ್ಲೇ ನಕ್ಸಲ್ ಪೀಡಿತ ಛತ್ತೀಸ್ ಗಢದ ಕಂಕೇರ್‌ಮತ್ತು ಸುಕ್ಮಾ ಜಿಲ್ಲೆಗಳಲ್ಲಿ 43 ಮಹಿಳೆಯರ ಸಹಿತ 78 ನಕ್ಸಲೀಯರು ಶಸ್ತ್ರಾಸ್ತ್ರ ತ್ಯಜಿಸಿ ಭದ್ರತಾ ಪಡೆ ಅಧಿಕಾರಿಗಳ ಮುಂದೆ ಶರಣಾಗತರಾಗಿದ್ದಾರೆ. ಛತ್ತೀಸ್‌ಗಢದಲ್ಲಿ ಭದ್ರತಾ ಪಡೆಗಳು ನಕ್ಸಲೀಯರ ವಿರುದ್ಧ ಭಾರೀ ಕಾರ್ಯಾಚರಣೆಯನ್ನು ನಡೆಸುತ್ತಿವೆ. ಮಹಾರಾಷ್ಟ್ರದ ನೆರೆಯ ರಾಜ್ಯ ಅದಾಗಿದ್ದು ಎರಡು ರಾಜ್ಯಗಳ ಗಡಿಯ ಅರಣ್ಯದಲ್ಲಿ ಮಾವೋವಾದಿಗಳ ನೆಲೆ ಇದೆ. ಛತ್ತೀಸ್‌ಗಢವನ್ನು ನಕ್ಸಲ್ ಮುಕ್ತ ರಾಜ್ಯವನ್ನಾಗಿ ಮಾಡುವ ಘೋಷಣೆಯನ್ನು ಸರಕಾರ ಮಾಡಿದೆ. ದೇಶವನ್ನು 2026ರ ಮಾರ್ಚ್ 31ರ ಒಳಗೆ ನಕ್ಸಲ್ ಮುಕ್ತ ಮಾಡುವ ಗುರಿಯನ್ನು ಕೇಂದ್ರ ಸರಕಾರ ಘೋಷಣೆ ಮಾಡಿದೆ. ಈ ಅವಧಿಯಲ್ಲಿ ಶಸ್ತ್ರಾಸ್ತ್ರ ತ್ಯಜಿಸಿ ಮುಖ್ಯ ವಾಹಿನಿಗೆ ಮರಳಲು ಮಾವೋವಾದಿಗಳಿಗೆ ಅವಕಾಶ ಇದೆ. ಶರಣಾಗತಿ ಆಗದೇ ಇದ್ದರೆ ನಕ್ಸಲರನ್ನು ನಿರ್ದಯವಾಗಿ ನಾಶ ಮಾಡುವ ಗುರಿಯನ್ನು ಕೇಂದ್ರ ಸರಕಾರ ಇಟ್ಟಿದೆ. ಇದರಿಂದಾಗಿ ದೇಶ ಮಾವೋವಾದಿಗಳು ಹಿಂಸೆಯ ಸಿದ್ಧಾಂತದಿಂದ ಹೊರ ಬಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮುಖ್ಯ ವಾಹಿನಿಗೆ ಸೇರಿ ಮಾನವರಾಗಿ ಬಾಳುವ ಅವಕಾಶ ಪಡೆಯಲಿ.

## ಮಹಾಯುತಿಯಲ್ಲಿ ಬಿಜೆಪಿ 'ಅಣ್ಣ'; ಬಣದಲ್ಲಿ ಬಿರುಕುಗಳನ್ನು ಉಂಟುಮಾಡುವ ಹೇಳಿಕೆಗಳನ್ನು ನೀಡದಂತೆ ಪಕ್ಷದ ನಾಯಕರಿಗೆ ಎಚ್ಚರಿಕೆ: ಬಾವಂಕುಲೆ

ಮುಂಬಯಿ, ಅ.16 - ಆಡಳಿತಾರೂಢ ಮಹಾಯುತಿ ಒಕ್ಕೂಟದಲ್ಲಿ ಮಿತ್ರಪಕ್ಷಗಳ ನಡುವೆ ಬಿರುಕುಗಳನ್ನು ಉಂಟುಮಾಡುವ ಹೇಳಿಕೆಗಳನ್ನು ನೀಡದಂತೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಪಕ್ಷದ ಸದಸ್ಯರಿಗೆ ಎಚ್ಚರಿಕೆ ನೀಡಿದ್ದಾರೆ ಎಂದು ಮಹಾರಾಷ್ಟ್ರ ಸಚಿವ ಮತ್ತು ಬಿಜೆಪಿ ನಾಯಕ ಚಂದ್ರಶೇಖರ್ ಬಾವಂಕುಲೆ ಗುರುವಾರ ಹೇಳಿದ್ದಾರೆ.

ಉಪಮುಖ್ಯಮಂತ್ರಿಗಳಾದ ಏಕನಾಥ್ ಶಿಂದೆ ಮತ್ತು ಅಜಿತ್ ಪವಾರ್ ನೇತೃತ್ವದ ಶಿವಸೇನೆ ಮತ್ತು ಎನ್‌ಸಿಪಿಯನ್ನು ಒಳಗೊಂಡಿರುವ ಪಕ್ಷದ ನೇತೃತ್ವದ ಮೈತ್ರಿಕೂಟದಲ್ಲಿ ಬಿಜೆಪಿ 'ಅಣ್ಣ'ನ ಪಾತ್ರವನ್ನು ವಹಿಸಬೇಕು ಎಂದು ಅವರು ಪ್ರತಿಪಾದಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಾವಂಕುಲೆ, ಫಡ್ನವೀಸ್ ಬಿಜೆಪಿಯ ಆರು ವಿಭಾಗೀಯ ಸಭೆಗಳನ್ನು ನಡೆಸಿದ್ದಾರೆ ಮತ್ತು ಮಹಾರಾಷ್ಟ್ರದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳ ಕುರಿತು ಅವರೊಂದಿಗೆ ಚರ್ಚೆ ನಡೆಸುವಾಗ ಮಿತ್ರಪಕ್ಷಗಳ ವಿರುದ್ಧ ಮಾತನಾಡದಿರುವ ಬಗ್ಗೆ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಸಂದೇಶವನ್ನು ರವಾನಿಸಿದ್ದಾರೆ ಎಂದು ಬಾವಂಕುಲೆ ತಿಳಿಸಿದರು.

''ಮೈತ್ರಿಕೂಟದ ಪಾಲುದಾರ ಪಕ್ಷಗಳಿಂದ ಯಾರಾದರೂ ನಮ್ಮ ವಿರುದ್ಧ (ಸ್ಥಳೀಯ ಚುನಾವಣೆಯಲ್ಲಿ) ಸ್ಪರ್ಧಿಸಿದರೂ ಸಹ, ಯಾವುದೇ (ಬಿಜೆಪಿ) ನಾಯಕರು ಮಹಾಯುತಿಯ ಬಗ್ಗೆ (ವಿಭಜನಾ) ಹೇಳಿಕೆಗಳನ್ನು ನೀಡುವುದಿಲ್ಲ. ನಾವು ಮೈತ್ರಿಕೂಟದಲ್ಲಿ ಅಣ್ಣನ ಪಾತ್ರವನ್ನು ನಿರ್ವಹಿಸಬೇಕು. ನಮ್ಮ ಕಾರ್ಯಕರ್ತರಿಗೆ ನಾವು ಅಂತಹ ಸಂದೇಶವನ್ನು ನೀಡಬೇಕಾಗಿದೆ'' ಎಂದು ಅವರು ಸಮರ್ಥಿಸಿಕೊಂಡರು.

ಮುಂಬೈ, ಥಾಣೆ ಮತ್ತು ನಾಗ್ಪುರ ಸೇರಿದಂತೆ 29 ಪುರಸಭೆ ನಿಗಮಗಳು ಮತ್ತು ಇತರ ಹಲವಾರು ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಮಹಾರಾಷ್ಟ್ರದಲ್ಲಿ ಚುನಾವಣೆಗಳು ನಡೆಯಲಿವೆ. ಕಳೆದ ತಿಂಗಳು, ಸುಪ್ರೀಂ ಕೋರ್ಟ್ ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗವನ್ನು ಜನವರಿ 31, 2026 ರೊಳಗೆ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವಂತೆ ಕೇಳಿಕೊಂಡಿತ್ತು.

## ಥಾಣೆ: 6 ಲಕ್ಷ ರೂ. ಎಟಿಎಂ ಸಂಗ್ರಹ ವಂಚನೆ; ನಾಲ್ವರು ನಗದು ಸಂಸ್ಥೆಯ ನೌಕರರ ವಿರುದ್ಧ ಪ್ರಕರಣ ದಾಖಲು

ಥಾಣೆ, ಅ. 16 - ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿ ಎಟಿಎಂ ಸಂಗ್ರಹವನ್ನು ನಿರ್ವಹಿಸುವಾಗ 6.18 ಲಕ್ಷ ರೂ. ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ನಗದು ನಿರ್ವಹಣಾ ಕಂಪನಿಯ ನಾಲ್ವರು ಉದ್ಯೋಗಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ನಾಲ್ವರು ಆರೋಪಿಗಳಾದ ಕ್ಯಾಷಿಯರ್, ಇಬ್ಬರು ಭದ್ರತಾ ಸಿಬ್ಬಂದಿ ಮತ್ತು ಚಾಲಕನಿಗೆ ವಿವಿಧ ಬ್ಯಾಂಕ್ ಎಟಿಎಂಗಳಿಂದ ಉಳಿದ ಹಣವನ್ನು ಸಂಗ್ರಹಿಸಿ ಕಂಪನಿಯ ಕಪಾಟಿನಲ್ಲಿ ಠೇವಣಿ ಇಡುವ ಕೆಲಸವನ್ನು ವಹಿಸಲಾಗಿತ್ತು ಎಂದು ಅವರು ಹೇಳಿದರು.

ಅಕ್ಟೋಬರ್ 13ರಂದು ಅವರು ವಿವಿಧ ಎಟಿಎಂಗಳಿಂದ 70,54,100 ರೂ.ಗಳನ್ನು ಸಂಗ್ರಹಿಸಿದರು ಆದರೆ ಕೇವಲ 64,35,200 ರೂ.ಗಳನ್ನು ಠೇವಣಿ ಇಟ್ಟರು. ಕಂಪನಿಯ ಲೆಕ್ಕಪತ್ರ ಪರಿಶೀಲನೆಯಲ್ಲಿ 6,18,900 ರೂ.ಗಳ ಕೊರತೆ ಕಂಡುಬಂದಿದೆ, ನಂತರ ನಗದು ನಿರ್ವಹಣಾ ಸಂಸ್ಥೆಯ ಹಿರಿಯ ಪ್ರತಿನಿಧಿ ಅವರ ವಿರುದ್ಧ ದೂರು ದಾಖಲಿಸಿದ್ದಾರೆ ಎಂದು ಕೊಲ್ಸೆವಾಡಿ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

ಆರೋಪಿಗಳು ಲೆಕ್ಕಪತ್ರವಿಲ್ಲದ ಹಣವನ್ನು ವೈಯಕ್ತಿಕ ಬಳಕೆಗೆ ತಿರುಗಿಸಿದ್ದಾರೆ ಎಂದು ಆರೋಪಿಸಲಾಗಿದೆ. ತನಿಖೆಯ ಭಾಗವಾಗಿ, ಪೊಲೀಸರು ಎಟಿಎಂ ಸಂಗ್ರಹ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ, ಸಿಸಿಟಿವಿ ದೃಶ್ಯಾವಳಿಗಳನ್ನು ವಿಶ್ಲೇಷಿಸುತ್ತಿದ್ದಾರೆ ಮತ್ತು ವಾಹನ ಚಲನವಲನ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

''ನಂಬಿಕೆ ದ್ರೋಹದ ಆರೋಪದ ಬಗ್ಗೆ ನಾವು ತನಿಖೆಯನ್ನು ಪ್ರಾರಂಭಿಸಿದ್ದೇವೆ. ಇಲ್ಲಿಯವರೆಗೆ, ಯಾರನ್ನೂ ಬಂಧಿಸಲಾಗಿಲ್ಲ, ಮತ್ತು ಕಾಣೆಯಾದ ಮೊತ್ತವನ್ನು ಪತ್ತೆಹಚ್ಚಲು ಮತ್ತು ಆರೋಪಿಗಳ ವೈಯಕ್ತಿಕ ಪಾತ್ರಗಳನ್ನು ಪರಿಶೀಲಿಸಲು ಪ್ರಯತ್ನಗಳು ನಡೆಯುತ್ತಿವೆ'' ಎಂದು ಅಧಿಕಾರಿ ಹೇಳಿದರು.

ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 316(4) (ಕ್ರಿಮಿನಲ್ ನಂಬಿಕೆ ದ್ರೋಹ) ಮತ್ತು 3(5) (ಸಾಮಾನ್ಯ ಉದ್ದೇಶ) ಅಡಿಯಲ್ಲಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ರಸ್ತೆ ಗಲಭೆ-ಅಪಹರಣ ಪ್ರಕರಣ: ಪೂಜಾ ಖೇಡ್ಕರ್‌ಅವರ ತಂದೆಗೆ ನಿರೀಕ್ಷಣಾ ಜಾಮೀನು

ಮುಂಬಯಿ, ಅ.16 - ಕಳೆದ ತಿಂಗಳು ನಡೆದ ರಸ್ತೆ ಗಲಭೆ ಘಟನೆಯ ನಂತರ ಟ್ರಕ್ ಕ್ಲೀನರ್‌ನನ್ನು ಅಪಹರಿಸಿದ ಆರೋಪ ಹೊತ್ತಿರುವ ಮಾಜಿ ಐಎಎಸ್ ಪ್ರೊಬೆಷನರ್ ಪೂಜಾ ಖೇಡ್ಕರ್ ಅವರ ತಂದೆ ದಿಲೀಪ್ ಖೇಡ್ಕರ್ ಅವರಿಗೆ ಬಾಂಬೆ ಹೈಕೋರ್ಟ್ ಗುರುವಾರ ನಿರೀಕ್ಷಣಾ ಜಾಮೀನು ನೀಡಿದೆ.

ನ್ಯಾಯಮೂರ್ತಿ ಎನ್ ಆರ್ ಬೋರ್ಕರ್ ಅವರ ಪೀಠವು, ಬಂಧನ ಪೂರ್ವಭಾವಿ ಜಾಮೀನು ನೀಡುತ್ತಾ, ದಿಲೀಪ್ ಖೇಡ್ಕರ್ ಅವರು ಕ್ಲೀನರ್- ಪ್ರಹ್ಲಾದ್ ಕುಮಾರ್ ಅವರಿಗೆ ಆರು ವಾರಗಳಲ್ಲಿ 4 ಲಕ್ಷ ರೂ.ಗಳನ್ನು ನೀಡಿ ಪೊಲೀಸ್ ಕಲ್ಯಾಣ ನಿಧಿಗೆ 1 ಲಕ್ಷ ರೂ.ಗಳನ್ನು ಠೇವಣಿ ಇಡುವಂತೆ ನಿರ್ದೇಶಿಸಿದೆ.

ನವಿಮುಂಬೈ ಸೆಷನ್ಸ್ ನ್ಯಾಯಾಲಯವು ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ ನಂತರ ಖೇಡ್ಕರ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಸೆಪ್ಟೆಂಬರ್ 13ರಂದು ನವಿಮುಂಬೈನ ಮುಲುಂಡ್-ಐರೋಲಿ ರಸ್ತೆಯಲ್ಲಿ ನಡೆದ ಆಪಾದಿತ ಘಟನೆಯ ನಂತರ ಅವರು ಪರಾರಿಯಾಗಿದ್ದಾರೆ.

ಎಫ್‌ಐಆರ್ ಪ್ರಕಾರ, ಸಿಮೆಂಟ್-ಮಿಕ್ಸರ್‌ಟ್ರಕ್ ದಿಲೀಪ್ ಖೇಡ್ಕರ್ ಒಡೆತನದ ಎಸ್‌ಯುವಿಗೆ ಡಿಕ್ಕಿ ಹೊಡೆಯಿತು, ನಂತರ ಅವರು ಮತ್ತು ಅವರ ಚಾಲಕ-ಕಮ್-ಬಾಡಿಗಾರ್ಡ್ ಪ್ರಫುಲ್ ಸಾಳುಂಕೆ ಟ್ರಕ್ ಚಾಲಕ ಚಂದ್ರಕುಮಾರ್ ಚವಾಣ್ ಮತ್ತು ಕ್ಲೀನರ್ ಪ್ರಹ್ಲಾದ್ ಕುಮಾರ್ ಅವರೊಂದಿಗೆ ವಾಗ್ವಾದ ನಡೆಸಿದರು.

ಖೇಡ್ಕರ್ ಮತ್ತು ಸಾಳುಂಕೆ ಕುಮಾರ್ ಅವರನ್ನು ಪೊಲೀಸ್ ಠಾಣೆಗೆ ಕರೆದೊಯ್ಯುತ್ತಿರುವುದಾಗಿ ಹೇಳಿ ಬಲವಂತವಾಗಿ ತಮ್ಮ ವಾಹನಕ್ಕೆ ಹತ್ತಿಸಿಕೊಂಡರು. ಟ್ರಕ್ ಚಾಲಕ ಪದೇ ಪದೇ ಕರೆ ಮಾಡಿದರೂ ಕುಮಾರ್ ಪ್ರತಿಕ್ರಿಯಿಸದ ಕಾರಣ ಟ್ರಕ್ ಮಾಲೀಕ ವಿಲಾಸ್ ಢೇರಂಗೆ ದೂರು ದಾಖಲಿಸಿದರು.

ಪೊಲೀಸರ ಪ್ರಕಾರ, ಕುಮಾರ್ ಅವರನ್ನು ಖೇಡ್ಕರ್ ಅವರ ಪುಣೆಯ ಬಂಗಲೆಯಲ್ಲಿ ಬಂಧಿಸಲಾಯಿತು ಮತ್ತು ಮರುದಿನ ಪೊಲೀಸರು ಅವರನ್ನು ರಕ್ಷಿಸಿದರು.

ಪೊಲೀಸರು ಸಾಳುಂಕೆಯನ್ನು ಬಂಧಿಸಿದ್ದಾರೆ ಮತ್ತು ಪ್ರಸ್ತುತ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ. ಖೇಡ್ಕರ್ ತಮ್ಮ ಅರ್ಜಿಯಲ್ಲಿ, ತಾನು ನಿರಪರಾಧಿ ಎಂದು ಹೇಳಿಕೊಂಡಿದ್ದಾರೆ ಮತ್ತು ತನ್ನ ಕಾರಿಗೆ ಉಂಟಾದ ಹಾನಿಯನ್ನು ಗ್ಯಾರೇಜ್ ಅಥವಾ ಮೆಕ್ಯಾನಿಕ್ ಮೌಲ್ಯಮಾಪನ ಮಾಡುವವರೆಗೆ ಕ್ಲೀನರ್ ತನ್ನೊಂದಿಗೆ ಇರುತ್ತಾನೆ ಎಂದು ಪರಸ್ಪರ ನಿರ್ಧರಿಸಲಾಗಿದೆ ಎಂದು ಹೇಳಿದರು.

ಟ್ರಕ್ ಚಾಲಕ ಸ್ವತಃ ಕುಮಾರ್ ಅವರನ್ನು ಕರೆದುಕೊಂಡು ಹೋಗಲು ಕೇಳಿಕೊಂಡಿದ್ದಾನೆ ಮತ್ತು ತಡವಾಗುತ್ತಿದ್ದ ಕಾರಣ, ಅವರನ್ನು ತನ್ನ ಬಂಗಲೆಗೆ ಕರೆದೊಯ್ದಿದ್ದಾನೆ ಎಂದು ಅವರು ಹೇಳಿಕೊಂಡಿದ್ದಾರೆ. ಖೇಡ್ಕರ್ ಅವರ ಪ್ರಕಾರ, ಕುಮಾರ್ ಮರುದಿನ ಬೆಳಿಗ್ಗೆ ತಮ್ಮ ಬಂಗಲೆಯಿಂದ ಹೊರಟುಹೋದರು.

ಖೇಡ್ಕರ್‌ಗೆ ಜಾಮೀನು ನಿರಾಕರಿಸಿದ ಸೆಷನ್ಸ್ ನ್ಯಾಯಾಲಯವು, ಅವರು ಪೊಲೀಸರ ಸಹಾಯ ಪಡೆಯಬಹುದಿತ್ತು ಎಂದು ಗಮನಿಸಿತು, ಆದರೆ ಅವರು ಕುಮಾರ್ ಅವರನ್ನು ಬಲವಂತವಾಗಿ ಕರೆದೊಯ್ದು ತಮ್ಮ ಬಂಗಲೆಯಲ್ಲಿ ಬಂಧಿಸಿದ್ದರು.

ಪೊಲೀಸರು ಕುಮಾರ್ ಅವರನ್ನು ರಕ್ಷಿಸಲು ಹೋದಾಗ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಕ್ಕಾಗಿ ಖೇಡ್ಕರ್ ಅವರ ಪತ್ನಿ ಮನೋರಮಾ ಅವರನ್ನು ಸಹ ಪ್ರಕರಣದಲ್ಲಿ ಆರೋಪಿಯನ್ನಾಗಿ ಹೆಸರಿಸಲಾಯಿತು. ಸೆಷನ್ಸ್ ನ್ಯಾಯಾಲಯವು ಅವರಿಗೆ ಬಂಧನ ಪೂರ್ವ ಜಾಮೀನು ನೀಡಿತ್ತು. ಕಳೆದ ತಿಂಗಳು ನಡೆದ ಘಟನೆಯ ನಂತರ, ನವಿಮುಂಬೈನ ರಬಾಲೆ ಪೊಲೀಸರು ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 137(2) (ಅಪಹರಣ) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು.

## ಥಾಣೆ: 83 ಲಕ್ಷ ರೂ. ಹೈಬ್ರಿಡ್ ಗಾಂಜಾದೊಂದಿಗೆ ಇಬ್ಬರ ಬಂಧನ

ಥಾಣೆ, ಅ. 16 - ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿ 83 ಲಕ್ಷ ರೂ. ಮೌಲ್ಯದ ಹೈಬ್ರಿಡ್ ಗಾಂಜಾವನ್ನು ವಶಪಡಿಸಿಕೊಂಡ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಮಂಗಳವಾರ ತಡರಾತ್ರಿ ಭಿವಂಡಿ ಪ್ರದೇಶದ ಮಂಕೋಲಿ ಫ್ಲೈಓವರ್ ಬಳಿ ಸ್ಕೂಟರ್‌ನಲ್ಲಿ ಅನುಮಾನಾಸ್ಪದವಾಗಿ ಚಲಿಸುತ್ತಿರುವುದನ್ನು ಪೊಲೀಸ್ ತಂಡ ಗಮನಿಸಿದೆ.

''ನಮ್ಮ ತಂಡ ಅವರನ್ನು ತಡೆದು ಶೋಧ ನಡೆಸಿದಾಗ, ಸ್ಕೂಟರ್ ಒಳಗೆ ಬಚ್ಚಿಟ್ಟಿದ್ದ 833 ಗ್ರಾಂ ತೂಕದ ಹೈಬ್ರಿಡ್ ಗಾಂಜಾ ಪ್ಯಾಕೆಟ್‌ಗಳು ನಮಗೆ ಸಿಕ್ಕವು'' ಎಂದು ನಾರ್ಪೋಲಿ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

''ಇಬ್ಬರು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟಕ್ಕಾಗಿ ನಿಷಿದ್ಧ ವಸ್ತುಗಳನ್ನು ತಂದಿದ್ದರು. ವಶಪಡಿಸಿಕೊಂಡ ವಸ್ತುವಿನ ಒಟ್ಟು ಮೌಲ್ಯ 83.3 ಲಕ್ಷ ರೂ. ಎಂದು ಅಂದಾಜಿಸಲಾಗಿದೆ'' ಎಂದು ಅವರು ಹೇಳಿದರು. ಉಲ್ಲಾಸ್‌ನಗರ ನಿವಾಸಿಗಳಾದ ಆಕಾಶ್ ಗುಪ್ತಾ (24) ಮತ್ತು ಹರ್ಷ್ ಬ್ರಹ್ಮಣೆ (26) ಎಂದು ಗುರುತಿಸಲಾದ ಇಬ್ಬರು ವ್ಯಕ್ತಿಗಳನ್ನು ಪೊಲೀಸರು ತಕ್ಷಣ ವಶಕ್ಕೆ ಪಡೆದರು ಮತ್ತು ಮಾದಕ ದ್ರವ್ಯ ಮತ್ತು ಸ್ಕೂಟರ್ ಅನ್ನು ವಶಪಡಿಸಿಕೊಂಡರು ಎಂದು ಅಧಿಕಾರಿ ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯ ಪ್ರಕಾರ, ಈ ಇಬ್ಬರು ವ್ಯಕ್ತಿಗಳು ಜಿಲ್ಲೆಯ ಉಲ್ಲಾಸ್‌ನಗರ ಮತ್ತು ಭಿವಂಡಿ ನಡುವೆ ಕಾರ್ಯನಿರ್ವಹಿಸುತ್ತಿರುವ ಸಣ್ಣ ಪ್ರಮಾಣದ ವಿತರಣಾ ಜಾಲದ ಭಾಗವಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

''ನಾವು ಈಗ ಕಳ್ಳಸಾಗಣೆ ವಸ್ತುಗಳ ಮೂಲವನ್ನು ಪತ್ತೆಹಚ್ಚುತ್ತಿದ್ದೇವೆ ಮತ್ತು ಉದ್ದೇಶಿತ ಖರೀದಿದಾರರನ್ನು ಗುರುತಿಸುತ್ತಿದ್ದೇವೆ'' ಎಂದು ಅಧಿಕಾರಿ ಹೇಳಿದರು.

ಆರೋಪಿಗಳ ವಿರುದ್ಧ ಮಾದಕ ದ್ರವ್ಯಗಳು ಮತ್ತು ಮನೋವಿಕೃತ ವಸ್ತುಗಳ (ಎನ್‌ಡಿಪಿಎಸ್) ಕಾಯ್ದೆಯ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

## ನಾಂದೇಡ್: ಗುರು ತೇಜ್ ಬಹದ್ದೂರ್ ಅವರ 350ನೇ ಹುತಾತ್ಮ ದಿನಾಚರಣೆ; 5 ಲಕ್ಷ ಪ್ರವಾಸಿಗರು ಆಗಮಿಸುವ ಸಾಧ್ಯತೆ

ನಾಂದೇಡ್, ಅ. 16 - ಮುಂದಿನ ತಿಂಗಳು ನಡೆಯಲಿರುವ ಗುರು ತೇಜ್ ಬಹದ್ದೂರ್ ಅವರ 350ನೇ ಹುತಾತ್ಮ ದಿನಾಚರಣೆಯ ಸ್ಮರಣಾರ್ಥ ನಾಂದೇಡ್ ಆಡಳಿತವು ವಿಸ್ತಾರವಾದ ವ್ಯವಸ್ಥೆಗಳನ್ನು ಮಾಡುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಕಾರ್ಯಕ್ರಮಕ್ಕಾಗಿ ಮಹಾರಾಷ್ಟ್ರದ ನಾಂದೇಡ್‌ಗೆ ಸುಮಾರು ಐದು ಲಕ್ಷ ಜನರು ಭೇಟಿ ನೀಡುವ ಸಾಧ್ಯತೆ ಇದ್ದು, ವಸತಿ, ಆಹಾರ ಮತ್ತು ಪಾರ್ಕಿಂಗ್ ವ್ಯವಸ್ಥೆಗಳಿಗೆ ವಿಶೇಷ ಗಮನ ನೀಡಲಾಗುತ್ತಿದೆ ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

'ಹಿಂದ್ ಕಿ ಚಾದರ್' ಎಂದೂ ಕರೆಯಲ್ಪಡುವ ಒಂಬತ್ತನೇ ಸಿಖ್ ಗುರುವಿನ 350ನೇ ಹುತಾತ್ಮ ದಿನಾಚರಣೆಯ ಸ್ಮರಣಾರ್ಥ ಬಳಕೆಗಾಗಿ ಜಿಲ್ಲೆಯಾದ್ಯಂತ ಶಾಲೆಗಳು, ಕಾಲೇಜುಗಳು, ಮದುವೆ ಮಂಟಪಗಳು ಮತ್ತು ತೆರೆದ ಮೈದಾನಗಳನ್ನು ಸಮೀಕ್ಷೆ ಮಾಡಲಾಗುತ್ತಿದೆ ಎಂದು ಅದು ಹೇಳಿದೆ.

ಛತ್ರಪತಿ ಸಂಭಾಜಿನಗರ, ನಾಂದೇಡ್, ಪರ್ಭಾನಿ, ಜಾಲ್ನಾ, ಲಾತೂರ್, ಧಾರಶಿವ, ಹಿಂಗೋಲಿ, ಬೀಡ್, ನಂದೂರ್ಬಾರ್, ಧುಳೆ ಮತ್ತು ಜಲಗಾಂವ್ ಸೇರಿದಂತೆ ಮಹಾರಾಷ್ಟ್ರದ ವಿವಿಧ ಸ್ಥಳಗಳಿಂದ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಅದ್ದೂರಿ ಕಾರ್ಯಕ್ರಮದ ಸಿದ್ಧತೆಗಳ ಕುರಿತು ಚರ್ಚಿಸಲು ಬುಧವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪರಿಶೀಲನಾ ಸಭೆ ನಡೆಸಲಾಯಿತು.

ಎಲ್ಲಾ ಇಲಾಖೆಗಳು ನಿಗದಿತ ಸಮಯದೊಳಗೆ ಮತ್ತು ಪರಸ್ಪರ ಸಮನ್ವಯದಿಂದ ಕಾರ್ಯಕ್ರಮದ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ತಮಗೆ ನಿಯೋಜಿಸಲಾದ ಜವಾಬ್ದಾರಿಗಳನ್ನು ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ರಾಹುಲ್ ಕಾರ್ಡಿಲೆ ನಿರ್ದೇಶಿಸಿದರು. ರೈಲುಗಳು, ಬಸ್ಸುಗಳು ಮತ್ತು ಖಾಸಗಿ ವಾಹನಗಳ ಮೂಲಕ ಬರುವ ಯಾತ್ರಾರ್ಥಿಗಳಿಗೆ ಸಾರಿಗೆ ಯೋಜನೆಗಳನ್ನು ಅವರು ಪರಿಶೀಲಿಸಿದರು ಎಂದು ಪ್ರಕಟಣೆ ತಿಳಿಸಿದೆ.

ರಸ್ತೆ ಮತ್ತು ಒಳಚರಂಡಿ ದುರಸ್ತಿಗಳನ್ನು ತ್ವರಿತಗೊಳಿಸಲು ಮತ್ತು ಹೆಲಿಪ್ಯಾಡ್‌ಗಳು, ಪೆಂಡಾಲ್‌ಗಳು, ನೆಲ ಸಮತಟ್ಟು ಮತ್ತು ತಾತ್ಕಾಲಿಕ ನೈರ್ಮಲ್ಯ ಸೌಲಭ್ಯಗಳನ್ನು ಸ್ಥಾಪಿಸಲು ಆದ್ಯತೆ ನೀಡಲು ಲೋಕೋಪಯೋಗಿ ಇಲಾಖೆಗೆ ನಿರ್ದೇಶನ ನೀಡಲಾಗಿದೆ ಎಂದು ಅದು ಹೇಳಿದೆ. ನಾಂದೇಡ್‌ನಲ್ಲಿರುವ ತಖತ್ ಸಚ್‌ಖಂಡ್ ಶ್ರೀ ಹಜುರ್ ಅಬ್ಚಲ್ ನಗರ ಸಾಹಿಬ್ ಸಿಖ್ ಸಮುದಾಯದ ಐದು ಉನ್ನತ ಅಧಿಕಾರ ಸ್ಥಾನಗಳಲ್ಲಿ ಒಂದಾಗಿದೆ.

## 'ಡಿಜಿಟಲ್ ಅರೆಸ್ಟ್' ವಂಚನೆಯಲ್ಲಿ 58 ಕೋಟಿ ರೂ. ಕಳೆದುಕೊಂಡ ಉದ್ಯಮಿ

ಮುಂಬಯಿ, ಅ.16 -ಇಡಿ ಮತ್ತು ಸಿಬಿಐ ಅಧಿಕಾರಿಗಳಂತೆ ನಟಿಸಿ ವಂಚಕರು ಆಯೋಜಿಸಿದ್ದ 'ಡಿಜಿಟಲ್ ಅರೆಸ್ಟ್' ಹಗರಣದಲ್ಲಿ ಮುಂಬೈನ 72 ವರ್ಷದ ಉದ್ಯಮಿಯೊಬ್ಬರು 58 ಕೋಟಿ ರೂ. ವಂಚನೆಗೊಳಗಾಗಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

58 ಕೋಟಿ ರೂ. ನಷ್ಟವು ಒಬ್ಬ ವ್ಯಕ್ತಿಯನ್ನು ಒಳಗೊಂಡ 'ಡಿಜಿಟಲ್ ಅರೆಸ್ಟ್' ಸೈಬರ್‌ವಂಚನೆ ಪ್ರಕರಣದಲ್ಲಿ ವರದಿಯಾದ ಅತಿದೊಡ್ಡ ನಷ್ಟಗಳಲ್ಲಿ ಒಂದಾಗಿರಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಕರಣದ ತನಿಖೆ ನಡೆಸುತ್ತಿರುವ ಮಹಾರಾಷ್ಟ್ರ ಸೈಬರ್ ಇಲಾಖೆ ಮೂವರನ್ನು ಬಂಧಿಸಿದೆ ಎಂದು ಅವರು ಹೇಳಿದರು. 'ಡಿಜಿಟಲ್ ಅರೆಸ್ಟ್' ಸೈಬರ್ ಅಪರಾಧದ ಬೆಳೆಯುತ್ತಿರುವ ರೂಪವಾಗಿದ್ದು, ಇದರಲ್ಲಿ ವಂಚಕರು ಕಾನೂನು ಜಾರಿ ಅಧಿಕಾರಿಗಳು ಅಥವಾ ಸರ್ಕಾರಿ ಸಂಸ್ಥೆಗಳ ಸಿಬ್ಬಂದಿಗಳಂತೆ ನಟಿಸಿ ಆಡಿಯೋ/ವೀಡಿಯೋ ಕರೆಗಳ ಮೂಲಕ ಬಲಿಪಶುಗಳನ್ನು ಬೆದರಿಸುತ್ತಾರೆ. ಅವರು ಬಲಿಪಶುಗಳನ್ನು ಒತ್ತೆಯಾಳಾಗಿ ಹಿಡಿದು ಹಣ ಪಾವತಿಸಲು ಒತ್ತಡ ಹೇರುತ್ತಾರೆ. ಇತ್ತೀಚಿನ ಪ್ರಕರಣದಲ್ಲಿ ವಂಚಕರು, ಜಾರಿ ನಿರ್ದೇಶನಾಲಯ ಮತ್ತು ಕೇಂದ್ರೀಯ ತನಿಖಾ ದಳದ ಸಿಬ್ಬಂದಿ ಎಂದು ಹೇಳಿಕೊಂಡು, ಆಗಸ್ಟ್ 19ರಿಂದ ಅಕ್ಟೋಬರ್ 8ರ ನಡುವೆ ಉದ್ಯಮಿಯನ್ನು ಸಂಪರ್ಕಿಸಿ, ಹಣ ವರ್ಗಾವಣೆ ಪ್ರಕರಣದಲ್ಲಿ ನಿಮ್ಮ ಹೆಸರು ಕೇಳಿಬಂದಿದೆ ಎಂದು ಹೇಳಿಕೊಂಡರು.

ಉದ್ಯಮಿಗೆ ವೀಡಿಯೊ ಕರೆ ಮಾಡಿದ ನಂತರ ಅವರು ತನ್ನನ್ನು ಮತ್ತು ತನ್ನ ಪತ್ನಿಯನ್ನು 'ಡಿಜಿಟಲ್ ಬಂಧನಕ್ಕೆ' ಒಳಪಡಿಸಿದಾಗ ಆ ಉದ್ಯಮಿ ಭಯಭೀತರಾದರು ಎಂದು ಅಧಿಕಾರಿ ಹೇಳಿದರು.ವಂಚಕರು ಅವರು ನಿರ್ದಿಷ್ಟಪಡಿಸಿದ ಬ್ಯಾಂಕ್ ಖಾತೆಗಳಿಗೆ ಹಣವನ್ನು ಜಮಾ ಮಾಡುವಂತೆ ಕೇಳಿಕೊಂಡರು. ಬಲಿಪಶು ಸುಮಾರು ಎರಡು ತಿಂಗಳ ಅವಧಿಯಲ್ಲಿ ಅನೇಕ ಬ್ಯಾಂಕ್ ಖಾತೆಗಳಿಗೆ ಆರ್‌ಟಿಜಿಎಸ್ ಮೂಲಕ 58 ಕೋಟಿ ರೂ.ಗಳನ್ನು ವರ್ಗಾಯಿಸಿದರು ಎಂದು ಅಧಿಕಾರಿ ಹೇಳಿದರು.

ನಂತರ ಅವರು ಮೋಸ ಹೋಗಿದ್ದಾರೆಂದು ಅರಿತುಕೊಂಡರು ಮತ್ತು ದೂರು ನೀಡಿ ಸೈಬರ್ ಪೊಲೀಸರನ್ನು ಸಂಪರ್ಕಿಸಿದರು. ಭಾರತೀಯ ನ್ಯಾಯ ಸಂಹಿತಾ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಸೈಬರ್ ತನಿಖಾಧಿಕಾರಿಗಳು ಕಳೆದ ವಾರ ಪ್ರಕರಣ ದಾಖಲಿಸಿದರು.

ತನಿಖೆಯ ಸಮಯದಲ್ಲಿ, ಪೊಲೀಸರು ಹಣಕಾಸಿನ ಹಾದಿಯನ್ನು ವಿಶ್ಲೇಷಿಸಿದರು ಮತ್ತು ಹಣವನ್ನು ಕನಿಷ್ಠ 18 ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದು ಅಧಿಕಾರಿ ಹೇಳಿದರು.ಅವರು ತಕ್ಷಣವೇ ಬಹು ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾದ ಮೊತ್ತವನ್ನು ಸ್ಥಗಿತಗೊಳಿಸಲು ಅಧಿಕಾರಿಗಳನ್ನು ಸಂಪರ್ಕಿಸಿದರು ಎಂದು ಅವರು ಹೇಳಿದರು. ವಂಚನೆಯಲ್ಲಿ ಭಾಗಿಯಾಗಿರುವ ಮೂವರು ವ್ಯಕ್ತಿಗಳನ್ನು ಪೊಲೀಸರು ಗುರುತಿಸಿದ್ದಾರೆ. ಉಪನಗರ ಮಲಾಡ್‌ನ ಅಬ್ದುಲ್ ಖಿಲ್ಲಿ (47), ಮುಂಬೈ ಸೆಂಟ್ರಲ್‌ನ ಅರ್ಜುನ್ ಕಡ್ವಾಸರ (55) ಮತ್ತು ಅವರ ಸಹೋದರ ಜೇತಾರಾಮ್ (35) ರನ್ನು ಬಂಧಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

## ನವಿಮುಂಬಯಿ: ಜಗಳವಾಡಿ ಆತ್ಮಹತ್ಯೆ ಮಾಡಿಕೊಂಡ 15 ವರ್ಷದ ಬಾಲಕಿ; ಇಬ್ಬರು ಮಹಿಳೆಯರ ಬಂಧನ

ಥಾಣೆ, ಅ. 16 - ನವಿಮುಂಬೈನ ರಬಾಲೆಯಲ್ಲಿ 15 ವರ್ಷದ ಬಾಲಕಿಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಗುರುವಾರ ಇಬ್ಬರು ಮಹಿಳೆಯರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬುಧವಾರ ತಲವಲಿಗಾಂವ್‌ನಲ್ಲಿ ಬಾಲಕಿ ಆತ್ಮಹತ್ಯೆ ಮಾಡಿಕೊಂಡಳು, ನಂತರ ಆಕೆಯ ತಂದೆ ಪೊಲೀಸರನ್ನು ಸಂಪರ್ಕಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

''ನಾವು ಕೆಲಸದಾಕೆ ರೇಷ್ಮಾ ಗವಾಂಡೆ (42) ಮತ್ತು ರಿಯಲ್ ಎಸ್ಟೇಟ್ ಏಜೆಂಟ್ ಮಯೂರಿ ನಾಯಕ್ವಾಡಿ (40) ಅವರನ್ನು ಬಂಧಿಸಿದ್ದೇವೆ. ಅವರು ಘನ್ಸೋಲಿಯಲ್ಲಿ ಒಂದೇ ಕಟ್ಟಡದಲ್ಲಿ ವಾಸಿಸುತ್ತಿದ್ದಾರೆ.

ನಮ್ಮ ತನಿಖೆಯ ಪ್ರಕಾರ, ಬಲಿಪಶು ಮತ್ತು ಗವಾಂಡೆ ಅವರ ಮಗಳ ನಡುವೆ ಜಗಳವಾಯಿತು. ನಂತರ ಇಬ್ಬರನ್ನೂ ಗವಾಂಡೆ ಅವರ ಮನೆಗೆ ಕರೆಸಲಾಯಿತು, ಅಲ್ಲಿ ಇಬ್ಬರು ಆರೋಪಿಗಳು ಬಲಿಪಶುವನ್ನು ನಿಂದಿಸಿ ಕಪಾಳಮೋಕ್ಷ ಮಾಡಿದರು'' ಎಂದು ಅವರು ಹೇಳಿದರು.

''ಹುಡುಗಿ ಮನೆಗೆ ಹಿಂತಿರುಗಿ ತನ್ನ ಜೀವನವನ್ನು ಅಂತ್ಯಗೊಳಿಸಿಕೊಂಡಳು. ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 107(3) (ಮಗುವಿನ ಅಥವಾ ಅಸ್ವಸ್ಥ ವ್ಯಕ್ತಿಯ ಆತ್ಮಹತ್ಯೆಗೆ ಪ್ರಚೋದನೆ) ಅಡಿಯಲ್ಲಿ ನಾವು ಅಪರಾಧವನ್ನು ದಾಖಲಿಸಿದ್ದೇವೆ. ಹೆಚ್ಚಿನ ತನಿಖೆ ನಡೆಯುತ್ತಿದೆ'' ಎಂದು ಅಧಿಕಾರಿ ಹೇಳಿದರು.

## ನಕಲಿ ನೋಟು ಮುದ್ರಿಸುತ್ತಿದ್ದ ಬೃಹತ್ ಜಾಲ ಪತ್ತೆ, 1 ಕೋಟಿ ಮೌಲ್ಯದ 'ನಕಲಿ ಕರೆನ್ಸಿ' ಪತ್ತೆ

ಬೆಳಗಾವಿ, ಅ. 16 - ಕರ್ನಾಟಕದಲ್ಲಿ ಕೋಟಾ ನೋಟು ಮುದ್ರಿಸುತ್ತಿದ್ದ ಬೃಹತ್ ಜಾಲವನ್ನು ಪೊಲೀಸರು ಪತ್ತೆ ಮಾಡಿದ್ದು, ಬರೋಬ್ಬರಿ 1 ಕೋಟಿ ರೂ ಮೌಲ್ಯದ ನಕಲಿ ನೋಟುಗಳನ್ನು ವಶಕ್ಕೆ ಪಡೆದಿದ್ದಾರೆ.

ಕರ್ನಾಟಕ-ಮಹಾರಾಷ್ಟ್ರ ಗಡಿಯ ಬಳಿ ಕಾರ್ಯನಿರ್ವಹಿಸುತ್ತಿದ್ದ ದೊಡ್ಡ ಪ್ರಮಾಣದ ನಕಲಿ ಕರೆನ್ಸಿ ಜಾಲವನ್ನು ಮಹಾರಾಷ್ಟ್ರ ಪೊಲೀಸರು ಭೇದಿಸಿದ್ದು, 1 ಕೋಟಿ ಮೌಲ್ಯದ ನಕಲಿ ನೋಟುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ನಿರ್ದಿಷ್ಟ ಗುಪ್ತಚರ ಮಾಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಿದ ಮಿರಾಜ್‌ನ ಗಾಂಧಿ ಚೌಕ್ ಪೊಲೀಸ್ ಠಾಣೆಯ ವಿಶೇಷ ಪೊಲೀಸ್ ತಂಡವು ಬೆಳಗಾವಿ ತಾಲ್ಲೂಕಿನ ಕಾಗವಾಡದಿಂದ ಸುಮಾರು 15 ಕಿ.ಮೀ ದೂರದಲ್ಲಿ ಮಹಾರಾಷ್ಟ್ರ ಸರಹದ್ದಿನಲ್ಲಿ 500 ರೂ. ಮುಖಬೆಲೆಯ ನಕಲಿ ನೋಟುಗಳನ್ನು ಈ ತಂಡ ಸಾಗಣೆ ಮಾಡುತ್ತಿತ್ತು.

ಈ ವೇಳೆ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ನಕಲಿ ನೋಟುಗಳನ್ನು ಮುದ್ರಿಸುವ ಮತ್ತು ಚಲಾವಣೆ ಮಾಡುವಲ್ಲಿ ಭಾಗಿಯಾಗಿದ್ದ ಐವರು ಆರೋಪಿಗಳನ್ನು ಬಂಧಿಸಿದೆ. ಬಂಧಿತರಲ್ಲಿ ಮಹಾರಾಷ್ಟ್ರದ ಮೊಬೈಲ್ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುವ ಚಾಲಕನೂ ಸೇರಿದ್ದಾನೆ ಎಂದು ಮೂಲಗಳು ತಿಳಿಸಿವೆ. ದಾಳಿಯ ಸಮಯದಲ್ಲಿ ಪೊಲೀಸರು ಒಂದು ಕಾರು, ಮುದ್ರಣ ಯಂತ್ರಗಳು, ವಿಶೇಷ ಕಾಗದ ಮತ್ತು ನಕಲಿ ಕರೆನ್ಸಿ ಮುದ್ರಿಸಲು ಬಳಸುವ ಇತರ ಉಪಕರಣಗಳನ್ನು ಸಹ ವಶಪಡಿಸಿಕೊಂಡಿದ್ದಾರೆ.

ಅಲ್ಲದೆ ನಕಲಿ ಕರೆನ್ಸಿ ವ್ಯಾಪಾರದಲ್ಲಿ ಭಾಗಿಯಾಗಿರುವ ವ್ಯಾಪಕ ಜಾಲವನ್ನು ಪತ್ತೆಹಚ್ಚಲು ತನಿಖೆ ಈಗ ಸಾಂಗ್ಲಿ, ಕೊಲ್ಹಾಪುರ ಮತ್ತು ಬೆಳಗಾವಿ ಜಿಲ್ಲೆಗಳ ಗಡಿ ಪ್ರದೇಶಗಳಲ್ಲಿ ವಿಸ್ತರಿಸಿದೆ. ಜಾಲದ ಗಡಿಯಾಚೆಗಿನ ಸಂಪರ್ಕಗಳು ಮತ್ತು ವಿತರಣಾ ಮಾರ್ಗಗಳ ಬಗ್ಗೆ ತನಿಖೆ ಮುಂದುವರೆದಂತೆ ಹೆಚ್ಚಿನ ಬಂಧನಗಳು ನಡೆಯುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಡಿಸಿಎಂ ಡಿ.ಕೆ.ಶಿವಕುಮಾರ್ ಬೆದರಿಕೆಯ ಸಂದೇಶ, ಅಧಿಕಾರ ಕೊಡದಿದ್ದರೆ ದಾರಿಯೇ ಬೇರೆ ಎಂದಿದ್ದಾರೆ: ಆರ್.ಅಶೋಕ

ಬೆಂಗಳೂರು, ಅ.16 - ಮುಖ್ಯಮಂತ್ರಿ ಸ್ಥಾನ ಪಡೆಯುವ ಉದ್ದೇಶದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಹಿರಿಯ ನಾಯಕರಿಗೆ ಬೆದರಿಕೆಯ ಸಂದೇಶ ನೀಡುತ್ತಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆದರಿಸಲು ಡಿಸಿಎಂ ಡಿ.ಕೆ.ಶಿವಕುಮಾರ್ ಕರೆ ಬಂದಿದೆ ಎಂದು ಹೇಳಿದ್ದಾರೆ. ನವೆಂಬರ್ ಕ್ರಾಂತಿಯ ಸಮಯದಲ್ಲೇ ಈ ರೀತಿ ಮಾತಾಡುತ್ತಿದ್ದಾರೆ. ಅವರಿಗೆ ಯಾರು ಫೋನ್ ಮಾಡಿದ್ದರು ಎಂಬುದನ್ನು ವಿವರವಾಗಿ ತಿಳಿಸಲಿ. ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಉದ್ದೇಶದಿಂದ ಅವರು ಪಕ್ಷದ ಹಿರಿಯರಿಗೆ ಧಮಕಿ ಹಾಗೂ ಸವಾಲು ಹಾಕುತ್ತಿದ್ದಾರೆ. ಅಧಿಕಾರ ಹಸ್ತಾಂತರದ ಸಮಯದಲ್ಲೇ ಈ ಹೇಳಿಕೆ ನೀಡಿದ್ದಾರೆ. ಅವರು ಅಧಿಕಾರವನ್ನು ಒದ್ದು ಕಿತ್ತುಕೊಳ್ಳುತ್ತಾರೆ ಎಂದು ಈಗಾಗಲೇ ಹೇಳಿದ್ದಾರೆ. ಅವರನ್ನು ಸಿಎಂ ಮಾಡಲಿ ಎಂದೇ ಈ ರೀತಿಯ ಸಂದೇಶ ನೀಡಿದ್ದಾರೆ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಹಾಸನಾಂಬೆ ಎರಡು ಹೂ ನೀಡಿದ್ದಾಳೆ. ಆ ಹೂವನ್ನು ಪಡೆದು ಜೇಬಿನಲ್ಲಿಟ್ಟುಕೊಂಡಿದ್ದಾರೆ. ಸಿಎಂ ಸಿದ್ದರಾಮಯ್ಯನವರಿಗೆ ದೇವಿ ವರ ಕೊಟ್ಟಿಲ್ಲ. ಈ ಹೂವಿನ ಮಹಾತ್ಮೆ ನವೆಂಬರ್ ಕ್ರಾಂತಿಯಲ್ಲಿ ತಿಳಿದುಬರಲಿದೆ. ಇವರಿಬ್ಬರೂ ಹಾಸನಾಂಬೆಗೆ ಪರೀಕ್ಷೆ ನೀಡಿದ್ದಾರೆ ಎಂದು ವ್ಯಂಗ್ಯವಾಡಿದರು.

ಜನರಿಗೆ 30 ಸಾವಿರ ಉದ್ಯೋಗ ನೀಡುವ ಉದ್ಯಮ ಆಂಧ್ರಪ್ರದೇಶದ ಪಾಲಾಗಿದೆ. ಇವರು ಕೇವಲ ಆರ್‌ಎಸ್‌ಎಸ್ ಬಗ್ಗೆ ಮಾತಾಡಿಕೊಂಡು ಕಾಲಹರಣ ಮಾಡಿದ್ದಾರೆ. ಆ ಕಂಪನಿ ಬೆಂಗಳೂರಿಗೆ ಬಂದಿದ್ದರೆ ಖಜಾನೆಗೆ ಆದಾಯ ಬರುತ್ತಿತ್ತು. ಕಂಪನಿಗಳೆಲ್ಲ ಬಿಟ್ಟುಹೋದರೆ ಕಾಂಗ್ರೆಸ್ ಪಕ್ಷ ಏಕೆ ಅಧಿಕಾರದಲ್ಲಿ ಇರಬೇಕು? ನಗರದ ಕಸ, ರಸ್ತೆ ಗುಂಡಿ ನೋಡಿದರೆ ಯಾವ ಕಂಪನಿಗಳೂ ಇಲ್ಲಿ ಇರಲು ಇಷ್ಟಪಡುವುದಿಲ್ಲ. ಸಚಿವ ಪ್ರಿಯಾಂಕ್ ಖರ್ಗೆಗೆ ಸಿಎಂ ಸಿದ್ದರಾಮಯ್ಯ ಹೇಳಿ ಪತ್ರ ಬರೆಸಿದ್ದಾರೆ ಎಂದರು.

ಸರ್ಕಾರಿ ನೌಕರರು ಆರ್‌ಎಸ್‌ಎಸ್‌ನಲ್ಲಿ ಭಾಗವಹಿಸಬಾರದು ಎಂದರೆ, ನಾನು ಕೂಡ ಸರ್ಕಾರಿ ನೌಕರನೇ ಆಗಿದ್ದೇನೆ ಎನ್ನಬಹುದು. ನನ್ನಂತಹ ಅನೇಕರು ಆರ್‌ಎಸ್‌ಎಸ್‌ನಲ್ಲಿದ್ದಾರೆ. ಸರ್ಕಾರಕ್ಕೆ ಏನೂ ಮಾಡಲು ಸಾಧ್ಯವಿಲ್ಲ. ಕನ್ಹೇರಿ ಸ್ವಾಮೀಜಿ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿರುವುದು ತಪ್ಪು. ಇನ್ನು ಎಲ್ಲ ಸ್ವಾಮೀಜಿಗಳ ವಿರುದ್ಧವೂ ಇದೇ ರೀತಿ ಕ್ರಮ ಕೈಗೊಳ್ಳುತ್ತಾರೆ. ಪಾಕಿಸ್ತಾನದಿಂದಲೂ ಬಂದವರು ಇಲ್ಲಿ ಕಾರ್ಯಕ್ರಮ ಮಾಡಬಹುದು. ಹಿಂದೂಗಳನ್ನು ಕಂಡರೆ ಇವರಿಗೆ ಆಗಲ್ಲ ಎಂದರು.

ಜಾತಿ ಸಮೀಕ್ಷೆಯಲ್ಲಿ ಜನರ ಎಲ್ಲ ಮಾಹಿತಿ ಪಡೆಯಲಾಗುತ್ತಿದೆ. ಒಂದು ವೇಳೆ ಜನರ ಬ್ಯಾಂಕ್ ಖಾತೆಯಿಂದ ಹಣ ಹೋದರೆ ಅದಕ್ಕೆ ಸರ್ಕಾರವೇ ಕಾರಣವಾಗುತ್ತದೆ. ವೈಯಕ್ತಿಕ ಮಾಹಿತಿಗಳನ್ನು ಯಾರೂ ನೀಡಬಾರದು. ಸಿಎಂ ಸಿದ್ದರಾಮಯ್ಯ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಕೆಲಸ ಮಾಡಿಸುತ್ತಿದ್ದಾರೆ. 15 ದಿನಕ್ಕೆ ಸಮೀಕ್ಷೆ ಆಗಲ್ಲ ಎಂಬುದು ಸರ್ಕಾರಕ್ಕೆ ತಿಳಿದಿರಬೇಕಿತ್ತು. ಇದರಿಂದ ಶಾಲಾ ಮಕ್ಕಳ ವ್ಯಾಸಂಗ ಹಾಳಾಗಿದೆ ಎಂದರು.

## ಷೇರು ಮಾರುಕಟ್ಟೆ

ಸೆನ್ಸೆಕ್ಸ್ : 83,467.66 + 862.23

ನಿಫ್ಟಿ : 25,585.30 + 261.75

**ಚಿನ್ನ**

22 ಕ್ಯಾರೆಟ್ : 1,18,650 ರೂ. (10 ಗ್ರಾಮ್‌ಗೆ)

24 ಕ್ಯಾರೆಟ್ : 1,29,440 ರೂ. (10 ಗ್ರಾಮ್‌ಗೆ)

ಬೆಳ್ಳಿ :1,90,000 ರೂ. (ಒಂದು ಕೆಜಿಗೆ)

## ಸುಡೊಕು 1584

| | | | | | | | | |
|---|---|---|---|---|---|---|---|---|
| | | 8 | | 1 | 4 | | 7 | |
| 1 | | | 3 | | | 6 | | 9 |
| 3 | | 9 | | 2 | | | 5 | |
| | 3 | | 1 | | 5 | | 8 | |
| 8 | | 5 | | | | 4 | | 6 |
| | 7 | | 6 | | 9 | | 2 | |
| | 6 | | | 3 | | 8 | | 2 |
| 9 | | 2 | | | 7 | | | 1 |
| | 1 | | 8 | 9 | | 7 | | |

MANGAL SENACHA, BANGALORE

1ರಿಂದ 9 ರ ನರೆಗಿನ ಸಂಖ್ಯೆಗಳನ್ನು ಪ್ರತಿ 3-3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಸುಡೊಕು 1583

| | | | | | | | | |
|---|---|---|---|---|---|---|---|---|
| 6 | 3 | 8 | 5 | 2 | 1 | 4 | 7 | 9 |
| 7 | 9 | 1 | 4 | 6 | 3 | 5 | 8 | 2 |
| 2 | 4 | 5 | 7 | 9 | 8 | 6 | 3 | 1 |
| 9 | 1 | 3 | 2 | 5 | 4 | 8 | 6 | 7 |
| 4 | 6 | 2 | 8 | 1 | 7 | 9 | 5 | 3 |
| 5 | 8 | 7 | 6 | 3 | 9 | 1 | 2 | 4 |
| 3 | 2 | 4 | 1 | 8 | 5 | 7 | 9 | 6 |
| 8 | 7 | 6 | 9 | 4 | 2 | 3 | 1 | 5 |
| 1 | 5 | 9 | 3 | 7 | 6 | 2 | 4 | 8 |

## ಪದಬಂಧ - 1667

| | | | | | | | | | |
|---|---|---|---|---|---|---|---|---|---|
| 1 | | 2 | ■ | ■ | ■ | 3 | | 4 | ■ |
| | ■ | 5 | | 6 | ■ | | ■ | | ■ |
| 7 | | | ■ | 8 | | | ■ | 9 | |
| ■ | ■ | ■ | 10 | | ■ | | ■ | | ■ |
| ■ | ■ | 11 | | ■ | ■ | ■ | 12 | | |
| 13 | 14 | | ■ | ■ | ■ | 15 | | ■ | ■ |
| ■ | | ■ | 16 | ■ | 17 | | | ■ | ■ |
| 18 | | ■ | 19 | | | ■ | 20 | | 21 |
| ■ | | ■ | | ■ | 22 | | | ■ | |
| ■ | 23 | | | ■ | ■ | ■ | 24 | | |

**ಎಡದಿಂದ ಬಲಕ್ಕೆ**

1. ಬಂಧನದ ಗೂಡು ಪಂಜಾಬಿನದೇ? -3
3. ಮಲೆಬೆಟ್ಟದ ವಲಯ -3
5. ಸಿಂಹದ ಆರ್ಭಟ -3
7. ತರುಣಿಯ ಕುಚೇಷ್ಟೇ? -3
8. ನರನ ಪಾಪಕ್ಕೆ ಇಲ್ಲಿ ಶಿಕ್ಷೆ -3
9. ಪ್ರಭುತ್ವ ಇವನದು -2
10. ಸಂಪುಟದ ಮುಷ್ಕರ -2
11. ಈಕೆ ಜಾನಕಿ ಅನಸೀತೆ? -2
12. ಊರಿನ ಹಾವು -3
13. ಉಪಮೇಯರ್‌ಗೆ ಹೋಲಿಕೆ -3
15. ಎಲ್ಲಾ ತಪ್ಪನ್ನು ಮುಚ್ಚುವ ಬಣ್ಣ -2
17. ಅಂಥನಲ್ಲಿರುವ ಚೆಂದ -2
18. ಕ್ಷಣದಲ್ಲೇ ಆದದ್ದು -2
19. ಇದೊಂದು ರೀತಿ -3
20. ತಾನೇ ಆಗಮಿಸಿದ ವೇದ -3
22. ರಮಾಕಾಂತ ಈಶನಾದಾಗ -3
23. ಕರಗತವಾದ ಮಾಸ -3
24. ಯಾವ ಮುನಿ ಹರಿಸಿದ ನದಿಯೋ -3

**ಮೇಲಿನಿಂದ ಕೆಳಕ್ಕೆ**

1. ಖಂಡಿತ ಇವರು ವಿದ್ವಾಂಸರು -3
2. ಗೋಳು ಎನಿಸುವ ಕಾವ್ಯ ಪ್ರಭೇದ -3
3. ಮದವೇರಿದ ಕಪ್ಪು ಆನೆ -4
4. ಎಂದಿನಂತೆ ಪ್ರಕರಣ -5
6. ನೆನೆಯುವಿಕೆ -3
10. ಮಾರಾಟ ಜಾತ್ರೆ -2
11. ಗಡಿ ಎಲ್ಲೆ -2
12. ಇದಿದ್ದರೇನೇ ಊಟಕ್ಕೆ ರುಚಿ -2
14. ಕೊಡಲಿಧಾರಿ ಅವತಾರ -5
15. ಕದನಕ್ಕೆ ಬಾಗಿಲು ಮುಚ್ಚಲಾಗಿದೆ -2
16. ಪರಿಸರದ ಉಪಕರಣ -4
17. ಅತ್ತಿಯ ಜಾತಿಗೆ ಸೇರಿದರೂ ಅತ್ತಿಯಲ್ಲ, ಹಣ್ಣು -3
20. ಮನಸ್ಸಿನ ಭಾವ, ಹಾರೈಕೆ -3
21. ರತಿಯ ಮನಸ್ಸನ್ನು ಕಲಕಿದ ಮನ್ಮಥ -3

ಉತ್ತರ - 1666

| | | | | | | | | | |
|---|---|---|---|---|---|---|---|---|---|
| ಅ | ಕ್ಕ | ಸಾ | ಲಿ | ■ | ಸೇ | ■ | ಪ್ರ | ವಾ | ಸ |
| ವ | ■ | ■ | ಖಿ | ■ | ನೆ | ಪ | ■ | ■ | ಹ |
| ನಿ | ಶಾ | ■ | ತ | ರು | ■ | ವಾ | ದಿ | ರಾ | ಜ |
| ■ | ಪ | ■ | ■ | ದ್ರಾ | ವಿ | ಡ | ■ | ■ | ■ |
| ■ | ಮು | ■ | ಅ | ಕ್ಷ | ■ | ಸಿ | ರಿ | ವಂ | ತ |
| ಕ | ಕ್ತ | ನಿ | ಽ | ■ | ಬು | ದ್ಧಿ | ■ | ಶ | ■ |
| ■ | ■ | ■ | ದೇ | ವ | ರು | ■ | ■ | ವೃ | ■ |
| ಅ | ನು | ಭ | ವ | ■ | ಗು | ಹ | ■ | ಕ್ಷ | ಮೆ |
| ನೇ | ■ | ■ | ತೆ | ರ | ■ | ಳ | ■ | ■ | ಲ್ಲು |
| ಕ | ಣ | ಜ | ■ | ಥ | ■ | ದಿ | ಕ್ಕು | ಗೇ | ಡಿ |

# ಐಸಿಸಿ ಸೆಪ್ಟೆಂಬರ್ ತಿಂಗಳ ಪ್ರಶಸ್ತಿ ಗೆದ್ದ ಅಭಿಷೇಕ್, ಮಂಧಾನ

ದುಬೈ, ಅ.16 - ಭಾರತ ಟಿ20 ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್‌ಅಭಿಷೇಕ್ ಶರ್ಮಾ ಮತ್ತು ಮಹಿಳಾ ತಂಡದ ಸ್ಮೃತಿ ಮಂಧಾನ ಅವರಿಗೆ ಐಸಿಸಿ ತಿಂಗಳ ಆಟಗಾರ ಗೌರವ ಒಲಿದಿದೆ.

ಸೆಪ್ಟೆಂಬರ್‌ತಿಂಗಳ ಶ್ರೇಷ್ಠ ಆಟಗಾರರ ಪ್ರಶಸ್ತಿ ಆಯ್ಕೆಯಲ್ಲಿ ಇವರಿಬ್ಬರಿಗೂ ಈ ಗೌರವ ಸಂದಿದೆ. ಅಭಿಷೇಕ್ ಅವರು ಈ ಪೈಪೋಟಿಯಲ್ಲಿ ತಮ್ಮ ಸಹ ಆಟಗಾರ, ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಜಿಂಬಾಬ್ವೆಯ ಬ್ರಯನ್ ಬೆನೆಟ್ ಅವರನ್ನು ಹಿಂದಿಕ್ಕಿದರು. ಅಭಿಷೇಕ್ ಅವರು ಏಳು ಪಂದ್ಯಗಳಿಂದ 314 ರನ್ ಗಳಿಸಿದ್ದರು. 200ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ಈ ಸಾಧನೆ ಮಾಡಿದ್ದರು. 25 ವರ್ಷದ ಅಭಿಷೇಕ್ ಅವರು ಈಚೆಗೆ ಏಷ್ಯಾ ಕಪ್ ಟೂರ್ನಿಯಲ್ಲಿ ಸರಣಿಶ್ರೇಷ್ಠ ಪ್ರಶಸ್ತಿ ಪಡೆದಿದ್ದರು.

'ಈ ಗೌರವಕ್ಕೆ ಪಾತ್ರರಾಗಿದ್ದು ಬಹಳ ಹೆಮ್ಮೆ ಎನಿಸುತ್ತಿದೆ. ಕೆಲವು ಮಹತ್ವದ ಪಂದ್ಯಗಳಲ್ಲಿ ತಂಡದ ಗೆಲುವಿನಲ್ಲಿ ಪಾತ್ರ ವಹಿಸಿದ್ದು ತೃಪ್ತಿಕರವಾಗಿದೆ' ಎಂದು ಅಭಿಷೇಕ್ ಹೇಳಿದರು.

ಭಾರತ ಮಹಿಳಾ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಸ್ಮೃತಿ ಅವರು ಭಾರತದಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆದಿದ್ದ ಏಕದಿನ ಸರಣಿಯ ಮೂರು ಪಂದ್ಯಗಳಲ್ಲಿ ಕ್ರಮವಾಗಿ 58, 117 ಮತ್ತು 125 ರನ್ ಗಳಿಸಿದ್ದರು. ತಂಡದ ಉಪನಾಯಕಿಯೂ ಆಗಿರುವ ಸ್ಮೃತಿ ಒಟ್ಟು 308 ರನ್ ಸೇರಿಸಿದರು. 135.68ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಕಲೆಹಾಕಿದ್ದರು. ಈ ಸರಣಿಯಲ್ಲಿ ಅವರು ವೇಗದ ಶತಕ ದಾಖಲಿಸಿದ್ದರು.

ಈ ಪ್ರಶಸ್ತಿ ಪೈಪೋಟಿಯಲ್ಲಿ ಅವರು ದಕ್ಷಿಣ ಆಫ್ರಿಕಾದ ತಾಜ್ಮಿನ್ ಬ್ರಿಟ್ಸ್ ಮತ್ತು ಪಾಕಿಸ್ತಾನದ ಸಿದ್ರಾ ಅಮಿನ್ ಅವರನ್ನು ಹಿಂದಿಕ್ಕಿದರು.



'ಒಬ್ಬ ಆಟಗಾರ್ತಿಯಾಗಿ, ಅಂತಹ ಗೌರವವು ನಿಮ್ಮನ್ನು ಮುಂದೆ ಸಾಗಲು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸಲು ಪ್ರೇರೇಪಿಸುತ್ತದೆ. ನನ್ನ ಗುರಿ ಯಾವಾಗಲೂ ನನ್ನ ಅತ್ಯುತ್ತಮ ಪ್ರದರ್ಶನ ನೀಡುವುದು ಮತ್ತು ತಂಡಕ್ಕಾಗಿ ಪಂದ್ಯಗಳನ್ನು ಗೆಲ್ಲುವುದು,' ಎಂದು ಸ್ಮೃತಿ ಮಂಧಾನ ಶ್ಲಾಘಿಸಿದ್ದಾರೆ.

# ಪರ್ತ್‌ನಲ್ಲಿ ಕಠಿಣ ಅಭ್ಯಾಸ ನಡೆಸಿದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ

ಪರ್ತ್, ಅ.16 - ಆಸ್ಟ್ರೇಲಿಯಾ ವಿರುದ್ಧ ಭಾನುವಾರ (ಅಕ್ಟೋಬರ್19) ದಿಂದ ಆರಂಭವಾಗಲಿರುವ ಏಕದಿನ ಸರಣಿಗೂ ಮುನ್ನ ಭಾರತ ತಂಡ ಪರ್ತ್ ಮೈದಾನದಲ್ಲಿ ಕಠಿಣ ಅಭ್ಯಾಸ ನಡೆಸುತ್ತಿದೆ. ಅದರಲ್ಲೂ ವಿಶೇಷವಾಗಿ ಹಲವು ದಿನಗಳಿಂದ ಕ್ರಿಕೆಟ್‌ನಿಂದ ದೂರ ಉಳಿದಿರುವ ಹಿರಿಯ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ನೆಟ್ಸ್‌ನಲ್ಲಿ ಕಠಿಣ ಅಭ್ಯಾಸ ನಡೆಸಿದ್ದಾರೆ.

ಫೆಬ್ರವರಿ-ಮಾರ್ಚ್‌ನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯ ಸಂದರ್ಭದಲ್ಲಿ ಟೀಂ ಇಂಡಿಯಾ ಪರ ಕೊನೆಯದಾಗಿ ಆಡಿದ್ದ ಮಾಜಿ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.

ಭಾರತದ ಇಬ್ಬರು ಮಾಜಿ ನಾಯಕರು ನೆಟ್ಸ್‌ನಲ್ಲಿ ಸುಮಾರು 30 ನಿಮಿಷಗಳಿಗೂ ಹೆಚ್ಚು ಕಾಲ ಬ್ಯಾಟಿಂಗ್ ಅಭ್ಯಾಸ ನಡೆಸಿದ್ದಾರೆ. ಅಕ್ಟೋಬರ್19 ರಿಂದ ಪ್ರಾರಂಭವಾಗುವ 3 ಏಕದಿನ ಮತ್ತು 5 ಟಿ20 ಪಂದ್ಯಗಳನ್ನು ಆಡಲು ಭಾರತ ತಂಡದ ಆಟಗಾರರು ಬುಧವಾರ ಮತ್ತು ಗುರುವಾರ ಎರಡು ಬ್ಯಾಚ್‌ಗಳಲ್ಲಿ ಆಸ್ಟ್ರೇಲಿಯಾಗೆ ಆಗಮಿಸಿದ್ದರು. ನೆಟ್ಸ್‌ನಲ್ಲಿ ಸಮಯ ಕಳೆದ ಬಳಿಕ ರೋಹಿತ್ ಶರ್ಮಾ ಮುಖ್ಯ ತರಬೇತುದಾರರಾಗಿರುವ ಗೌತಮ್ ಗಾಂಭೀರ್ ಅವರೊಂದಿಗೆ ದೀರ್ಘ ಮಾತುಕತೆ ನಡೆಸುತ್ತಿರುವುದು ಕಂಡು ಬಂದಿತು.

ಕೊಹ್ಲಿ ಮತ್ತು ರೋಹಿತ್ ಇಬ್ಬರೂ ಈ ವರ್ಷದ ಆರಂಭದಲ್ಲಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾದರು ಮತ್ತು ಕಳೆದ ವರ್ಷ ಬಾರ್ಬಡೋಸ್‌ನಲ್ಲಿ ವಿಶ್ವಕಪ್ ಗೆದ್ದ ನಂತರ ತಮ್ಮ ಟಿ20 ಅಂತಾರಾಷ್ಟ್ರೀಯ ವೃತ್ತಿಜೀವನಕ್ಕೆ ನಿವೃತ್ತಿ ಘೋಷಿಸಿದ್ದರು. ಈ ಇಬ್ಬರು ಶ್ರೇಷ್ಠ ಆಟಗಾರರು ಆಸ್ಟ್ರೇಲಿಯಾದಲ್ಲಿ ಆಡುತ್ತಿರುವುದು ಇದೇ ಕೊನೆಯ ಬಾರಿ ಆಗಿರಬಹುದು. 2027 ರ ವಿಶ್ವಕಪ್‌ನಲ್ಲಿ ಅವರ ಭಾಗವಹಿಸುವಿಕೆ ಇನ್ನೂ ಅನಿಶ್ಚಿತವಾಗಿದೆ, ಏಕೆಂದರೆ





ಆ ಸಮಯದಲ್ಲಿ ಅವರ ಫಾರ್ಮ್ ಮತ್ತು ಫಿಟ್‌ನೆಸ್ ಅನ್ನು ಅವಲಂಬಿಸಿರುತ್ತದೆ.

ಆದಾಗ್ಯೂ, ನೂತನ ನಾಯಕ ಶುಭಮನ್ ಗಿಲ್ ಇಬ್ಬರೂ ಸೂಪರ್‌ಸ್ಟಾರ್‌ಗಳನ್ನು ಬೆಂಬಲಿಸಿದ್ದಾರೆ, ಅವರ ಅಪಾರ ಅನುಭವವನ್ನು ಉಲ್ಲೇಖಿಸಿದ್ದಾರೆ. ನೆಟ್ ಸೆಷನ್ ನಂತರ, ಕೊಹ್ಲಿ ಬೌಲಿಂಗ್ ಕೋಚ್ ಮೋರ್ನೆ ಮಾರ್ಕೆಲ್ ಅವರೊಂದಿಗೆ ಮಾತನಾಡುತ್ತಿರುವುದು ಕಂಡುಬಂದಿತು, ನಂತರ ಅವರು ವೇಗದ ಬೌಲರ್ ಅರ್ಶ್‌ದೀಪ್ ಸಿಂಗ್ ಅವರೊಂದಿಗೆ ಮಾತನಾಡಿದರು. ತಂಡವು ಶುಕ್ರವಾರ ಮತ್ತು ಶನಿವಾರದಂದು ತರಬೇತಿ ನಡೆಸಲಿದೆ.

# ಮಹಿಳೆಯರ ವಿಶ್ವಕಪ್: ಗೆಲುವಿನ ಹುಡುಕಾಟದಲ್ಲಿ ಶ್ರೀಲಂಕಾ; ದ.ಆಫ್ರಿಕಾ ಎದುರಾಳಿ

ಕೊಲಂಬೊ, ಅ.16 - ಹವಾಮಾನ ಅನುಕೂಲಕರವಾಗಿದ್ದರೆ, ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ನಾಳೆ ಇಲ್ಲಿ ನಡೆಯಲಿರುವ ಮಹಿಳೆಯರ ಏಕದಿನ ವಿಶ್ವಕಪ್‌ನ ಮಹತ್ವದ ಪಂದ್ಯದಲ್ಲಿ ಪರಸ್ಪರ ಕಠಿಣ ಸವಾಲು ಒಡ್ಡಲು ಪ್ರಯತ್ನಿಸಲಿವೆ. ಆರ್‌ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಕೊನೆಯ ಎರಡು ಪಂದ್ಯಗಳು ಮಳೆಯಿಂದಾಗಿ ರದ್ದಾಗಿದ್ದು, ನಾಳೆಯೂ ಮಳೆ ಮತ್ತು ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ.




ಮಳೆ ಬಾರದೇ ಪಂದ್ಯ ನಡೆದಿದ್ದಲ್ಲಿ, ಶ್ರೀಲಂಕಾ ತಂಡವು ಸೆಮಿಫೈನಲ್ ಸ್ಥಾನದ ಆಸೆಯನ್ನು ಜೀವಂತವಾಗಿಡಲು ಟೂರ್ನಿಯ ಮೊದಲ ಗೆಲುವು ಸಾಧಿಸುವ ಗುರಿಯನ್ನು ಹೊಂದಿದೆ. ಎರಡು ಪಂದ್ಯಗಳು ರದ್ದಾಗಿರುವುದರಿಂದ ಶ್ರೀಲಂಕಾ ಇದುವರೆಗೆ ಕೇವಲ ಎರಡು ಅಂಕಗಳನ್ನು ಮಾತ್ರ ಪಡೆದಿದೆ ಮತ್ತು ನಾಲ್ಕು ಪಂದ್ಯಗಳ ನಂತರ ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ. ನ್ಯೂಜಿಲೆಂಡ್ ವಿರುದ್ಧದ ಹಿಂದಿನ ಪಂದ್ಯದಲ್ಲಿ ಶ್ರೀಲಂಕಾ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿತು, ಆದರೆ ಮಳೆ ಗೆಲುವಿನ ಆಸೆಯನ್ನು ಹುಸಿಗೊಳಿಸಿತು. ಆ ಪಂದ್ಯದಲ್ಲಿ ನಾಯಕಿ ಚಮರಿ ಅಟಪಟ್ಟು ಮತ್ತು ನೀಲಾಕ್ಷಿಕಾ ಸಿಲ್ವಾ ಅರ್ಧಶತಕಗಳನ್ನು ಗಳಿಸಿದರು.

ಭಾರತ ಮತ್ತು ಬಾಂಗ್ಲಾದೇಶವನ್ನು ನಿಕಟ ಪಂದ್ಯಗಳಲ್ಲಿ ಸೋಲಿಸಿದ್ದ ದಕ್ಷಿಣ ಆಫ್ರಿಕಾ ತಂಡವು ಶ್ರೀಲಂಕಾ ವಿರುದ್ಧ ತನ್ನ ಅತ್ಯುತ್ತಮ ಪ್ರದರ್ಶನವನ್ನು ಮುಂದುವರಿಸುವ ವಿಶ್ವಾಸದಲ್ಲಿದೆ.

ಟೂರ್ನಮೆಂಟ್‌ನ ಉದ್ಘಾಟನಾ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 10 ವಿಕೆಟ್‌ಗಳ ಹೀನಾಯ ಸೋಲಿನ ನಂತರ, ದಕ್ಷಿಣ ಆಫ್ರಿಕಾ ನ್ಯೂಜಿಲೆಂಡ್, ಆತಿಥೇಯ ಭಾರತ ಮತ್ತು ಬಾಂಗ್ಲಾದೇಶ ವಿರುದ್ಧ ಜಯಗಳಿಸುವ ಮೂಲಕ ನಾಟಕೀಯ ಬದಲಾವಣೆಯನ್ನು ಕಂಡಿದೆ.

ಭಾರತ ಮತ್ತು ಬಾಂಗ್ಲಾದೇಶ ವಿರುದ್ಧದ ಕಠಿಣ ಪರಿಸ್ಥಿತಿಗಳಲ್ಲಿ ದಕ್ಷಿಣ ಆಫ್ರಿಕಾ ಗೆಲುವು ಸಾಧಿಸಲು ಕ್ಲೋ ಟ್ರಯಾನ್ ಪ್ರಮುಖ ಪಾತ್ರ ವಹಿಸಿದ್ದು ಮತ್ತು ಧೈರ್ಯವನ್ನು ಪ್ರದರ್ಶಿಸಿತು. ನದೀನ್ ಡಿ ಕ್ಲರ್ಕ್ ಎರಡೂ ಸಂದರ್ಭಗಳಲ್ಲಿಯೂ ಅತ್ಯಂತ ಪ್ರಭಾವಶಾಲಿ ಪ್ರದರ್ಶನ ನೀಡಿದರು, ಅಪಾರ ಒತ್ತಡದ ನಡುವೆಯೂ ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ಗಮನಾರ್ಹವಾದ ಸಂಯಮವನ್ನು ಪ್ರದರ್ಶಿಸಿದರು.

ದಕ್ಷಿಣ ಆಫ್ರಿಕಾದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಉತ್ತಮ ಆರಂಭವನ್ನು ದೊಡ್ಡ ಸ್ಕೋರ್‌ಗಳಾಗಿ ಪರಿವರ್ತಿಸಲು ಅಸಮರ್ಥರಾಗಿರುವುದು ಕಳವಳಕಾರಿಯಾಗಿದೆ. ಅದು ತಮ್ಮ ಗೆಲುವಿನ ಓಟವನ್ನು ಮುಂದುವರಿಸಬೇಕಾದರೆ, ಅದರ ಪ್ರಮುಖ ಬ್ಯಾಟರ್‌ಗಳು ಉಪಯುಕ್ತ ಕೊಡುಗೆಗಳನ್ನು ನೀಡಬೇಕಾಗುತ್ತದೆ.

**ಪಂದ್ಯಾರಂಭ:** ಮಧ್ಯಾಹ್ನ 3.00 ರಿಂದ.

# ರಣಜಿ: ಕರ್ನಾಟಕ 372ಕ್ಕೆ ಆಲೌಟ್; ಸೌರಾಷ್ಟ್ರ ದಿಟ್ಟ ಹೋರಾಟ

ರಾಜ್‌ಕೋಟ್, ಅ.16 - ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಪಂದ್ಯದಲ್ಲಿ ಇನಿಂಗ್ಸ್ ಮುನ್ನಡೆ ಸಾಧಿಸಲು ಆತಿಥೇಯ ಸೌರಾಷ್ಟ್ರ ಹಾಗೂ ಕರ್ನಾಟಕ ಭಾರಿ ಪೈಪೋಟಿ ನಡೆಸುತ್ತಿವೆ.

ಬುಧವಾರ ಆರಂಭವಾದ ಪಂದ್ಯದಲ್ಲಿ ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಕರ್ನಾಟಕದ ಇನಿಂಗ್ಸ್‌ಗೆ ದೇವದತ್ತ ಪಡಿಕ್ಕಲ್ (96 ರನ್), ಕರುಣ್ ನಾಯರ್(73), ಸ್ಮರಣ್ ರವಿಚಂದ್ರನ್ (77) ಶ್ರೇಯಸ್ ಗೋಪಾಲ್ (56) ಹಾಗೂ ಶಿಖರ್ ಶೆಟ್ಟಿ(41) ಬಲ ತುಂಬಿದರು. ಹೀಗಾಗಿ, ಮಯಾಂಕ್ ಅಗರ್ವಾಲ್ ಪಡೆ ಎರಡನೇ ದಿನ ಆಲೌಟ್ ಆಗುವ ಮುನ್ನ 372 ರನ್ ಕಲೆಹಾಕಿತು. ಸೌರಾಷ್ಟ್ರ ಪರ ಧರ್ಮೇಂದ್ರಸಿನ್ಹ್ ಜಡೇಜಾ 7 ವಿಕೆಟ್ ಪಡೆದು ಮಿಂಚಿದರು.



ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿರುವ ಜಯದೇವ್ ಉನದ್ಕತ್ ನೇತೃತ್ವದ ಸೌರಾಷ್ಟ್ರ, ಉತ್ತಮ ಪ್ರದರ್ಶನ ತೋರಿದೆ. ಎರಡನೇ ದಿನದಾಟದ ಅಂತ್ಯಕ್ಕೆ 4 ವಿಕೆಟ್‌ಗಳನ್ನು ಕಳೆದುಕೊಂಡು 200 ರನ್ ಕಲೆಹಾಕಿದೆ. ಕರ್ನಾಟಕದ ಲೆಕ್ಕ ಚುಕ್ತಾ ಮಾಡಲು ಇನ್ನೂ 172 ರನ್ ಗಳಿಸಬೇಕಿದೆ. ಅಷ್ಟಲ್ಲದೆ, ಆತಿಥೇಯರನ್ನು ಆಲೌಟ್ ಮಾಡಿ, ಮುನ್ನಡೆ ಕಾಯ್ದುಕೊಳ್ಳುವ ಸವಾಲು ಕರ್ನಾಟಕದ ಮುಂದಿದೆ.

ಇನಿಂಗ್ಸ್ ಆರಂಭಿಸಿದ ಚಿರಾಗ್ ಜಾನಿ ಹಾಗೂ ಹಾರ್ವಿಕ್ ದೇಸಾಯಿ (41) ಮೊದಲ ವಿಕೆಟ್‌ಗೆ 140 ರನ್ ಕಲೆಹಾಕಿ, ಭದ್ರ ಬುನಾದಿ ಹಾಕಿಕೊಟ್ಟರು. ಈ ಹಂತದಲ್ಲಿ ದೇಸಾಯಿ ಅವರನ್ನು ಮೊಹಸಿನ್ ಖಾನ್ ಪೆವಿಲಿಯನ್‌ಗೆ ಅಟ್ಟಿದರು. ಬಳಿಕ, ಸೌರಾಷ್ಟ್ರ ಪಡೆಯ ಇನ್ನೂ ಮೂರು ವಿಕೆಟ್‌ಗಳು ಬೆನ್ನುಬೆನ್ನಿಗೆ ಉರುಳಿದವು.

148 ಎಸೆತಗಳಲ್ಲಿ 90 ರನ್ ಗಳಿಸಿದ್ದ ಜಾನಿ, ಕೇವಲ 10 ರನ್ ಅಂತರದಲ್ಲಿ ಶತಕ ತಪ್ಪಿಸಿಕೊಂಡರು. ಅವರನ್ನು ಅನುಭವಿ ಶ್ರೇಯಸ್ ಗೋಪಾಲ್ ಕ್ಲೀನ್ ಬೌಲ್ಡ್ ಮಾಡಿದರು. ಜಾನಿ ಹಿಂದೆಯೇ, ಜಯ್ ಗೋಹಿಲ್ (3) ಮತ್ತು ಅನ್ಷ್ ಗೋಸಾಯಿ (19) ಅವರನ್ನೂ ಔಟ್ ಮಾಡಿದರು.

ಈ ಹಂತದಲ್ಲಿ ಜೊತೆಯಾಗಿರುವ ಅರ್ಪಿತ್ ವಾಸವಾಡ (12) ಹಾಗೂ ಪ್ರೇರಕ್ ಮಂಕಡ್ (20), 5ನೇ ವಿಕೆಟ್‌ಗೆ 39 ರನ್ ಸೇರಿಸಿದ್ದು, ಮೂರನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ. ಸೌರಾಷ್ಟ್ರ ಪಡೆಯ ನಾಲ್ಕೂ ವಿಕೆಟ್‌ಗಳು ಸ್ಪಿನ್ನರ್‌ಗಳ ಪಾಲಾಗಿವೆ.

# ಅಹಮದಾಬಾದ್‌ನಲ್ಲಿ 2030ರ ಕಾಮನ್‌ವೆಲ್ತ್ ಕ್ರೀಡಾಕೂಟ

ಹೊಸದಿಲ್ಲಿ, ಅ.16 - ಭಾರತದಲ್ಲಿ ಎರಡು ದಶಕಗಳ ನಂತರ ಕಾಮನ್‌ವೆಲ್ತ್ ಕ್ರೀಡಾಕೂಟ (ಸಿಡಬ್ಲ್ಯುಜಿ) ಆಯೋಜನೆಗೊಳ್ಳುವುದು ಬಹುತೇಕ ಖಚಿತವಾಗಿದೆ.

2030ರಲ್ಲಿ ಕಾಮನ್‌ವೆಲ್ತ್ ಕೂಟ ನಡೆಸುವ ತಾಣವಾಗಿ ಅಹಮದಾಬಾದ್ ನಗರಕ್ಕೆ ಆದ್ಯತೆ ನೀಡಬೇಕು ಎಂದು 'ಕಾಮನ್‌ವೆಲ್ತ್ ಸ್ಪೋರ್ಟ್ಸ್' ಕಾರ್ಯಕಾರಿ ಮಂಡಳಿ ಶಿಫಾರಸು ಮಾಡಿದೆ. ಗ್ಲಾಸ್ಗೋದಲ್ಲಿ ನವೆಂಬರ್ 26ರಂದು ನಡೆಯಲಿರುವ ಮಂಡಳಿಯ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಅಂತಿಮ ನಿರ್ಧಾರವನ್ನು ಪ್ರಕಟಿಸಲಾಗುವುದು.

ಅಹಮದಾಬಾದ್ ನಗರಕ್ಕೇ ಕೂಟದ ಆತಿಥ್ಯ ಒಲಿಯುವುದು ಬಹುತೇಕ ಖಚಿತವಾಗಿದ್ದು, ಸಭೆಯಲ್ಲಿ ಪ್ರಕಟಿಸುವುದು ಕೇವಲ ಔಪಚಾರಿಕವಾಗುವ ನಿರೀಕ್ಷೆ ಇದೆ. ಆದರೆ, ನೈಜೀರಿಯಾದ ಅಬುಜಾ ನಗರವೂ ಈ ಕೂಟದ ಆತಿಥ್ಯ ಪಡೆಯುವ ರೇಸ್‌ನಲ್ಲಿದೆ. ಆಫ್ರಿಕಾ ದೇಶಗಳಿಗೆ 'ಅಭಿವೃದ್ಧಿಯನ್ನು ಉತ್ತೇಜಿಸುವ ತಂತ್ರಗಾರಿಕೆ'ಯಾಗಿ ಭವಿಷ್ಯದಲ್ಲಿ ಗೇಮ್ಸ್ ಆಯೋಜನೆ ನೀಡುವ ಸಾಧ್ಯತೆ ಇದೆ. 2034ರ ಕೂಟ ಮಂಜೂರು ಮಾಡುವ ನಿರೀಕ್ಷೆ ಇದೆ.

2010ರಲ್ಲಿ ನವದೆಹಲಿಯಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಆಯೋಜನೆ ಗೊಂಡಿತ್ತು. 2036ರಲ್ಲಿ ಒಲಿಂಪಿಕ್ ಕೂಟದ ಆಯೋಜನೆಗೆ ಭಾರತವು ಪ್ರಸ್ತಾವ ಸಲ್ಲಿಸಿದೆ. ಆ ಹಿನ್ನೆಲೆಯಲ್ಲಿ ಕಾಮನ್‌ವೆಲ್ತ್ ಕೂಟ ಲಭಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ.

'ಕಾಮನ್‌ವೆಲ್ತ್ ಸ್ಪೋರ್ಟ್ ಕಾರ್ಯಕಾರಿ ಮಂಡಳಿಯು 2030ರ ಕೂಟದ ಆತಿಥ್ಯವನ್ನು ಅಹಮದಾಬಾದ್‌ಗೆ ನೀಡಲು ಇಂದು (ಬುಧವಾರ) ಶಿಫಾರಸು ಮಾಡಿದೆ' ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



'ಭಾರತದ ಅಹಮದಾಬಾದ್ ಮತ್ತು ನೈಜೀರಿಯಾದ ಅಬುಜಾ ನಗರಗಳು ಆತಿಥ್ಯಕ್ಕಾಗಿ ಪ್ರಸ್ತಾವ ಸಲ್ಲಿಸಿದ್ದವು' ಎಂದೂ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

'ಭಾರತದ ಕ್ರೀಡಾಕ್ಷೇತ್ರಕ್ಕೆ ಇದು ಬಹುದೊಡ್ಡ ಸಂತಸದ ಕ್ಷಣವಾಗಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಕ್ರೀಡೆಯು ಬೆಳೆಯುತ್ತಿರುವುದರ ಸಂಕೇತ ಇದು. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಹಾಗೂ ಬದ್ಧತೆಯಿಂದಾಗಿ ಭಾರತವು ವಿಶ್ವ ಕ್ರೀಡಾ ಭೂಪಟದಲ್ಲಿ ಪ್ರಮುಖ ಸ್ಥಾನ ಪಡೆದಿದೆ' ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು 'ಎಕ್ಸ್'ನಲ್ಲಿ ಸಂದೇಶ ಹಾಕಿದ್ದಾರೆ.

# ಟಿ20 ವಿಶ್ವಕಪ್‌ಗೆ ಅರ್ಹತೆ ಗಿಟ್ಟಿಸಿಕೊಂಡ ಒಮಾನ್, ನೇಪಾಳ

ದುಬೈ, ಅ.16 - ಪೂರ್ವ ಏಷ್ಯಾ ಪೆಸಿಫಿಕ್ ಅರ್ಹತಾ ಸುತ್ತಿನಲ್ಲಿ ಅಗ್ರ ಮೂರು ಸ್ಥಾನಗಳನ್ನು ಖಚಿತಪಡಿಸಿಕೊಂಡ ನೇಪಾಳ ಮತ್ತು ಒಮಾನ್ ತಂಡಗಳು ಸೂಪರ್‌ಸಿಕ್ಸ್ ಪಂದ್ಯಕ್ಕೂ ಮೊದಲೇ ಐಸಿಸಿ ಪುರುಷರ ಟಿ20 ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿದೆ. ಟಿ20 ವಿಶ್ವ ಕಪ್ ಪಂದ್ಯಾವಳಿ ಮುಂದಿನ ವರ್ಷ ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿದೆ.

ಸೂಪರ್‌ಸಿಕ್ಸ್ ಹಂತದ ಮೊದಲ ಆರು ಪಂದ್ಯಗಳಲ್ಲಿ ಐದು ಪಂದ್ಯಗಳ ಫಲಿತಾಂಶ ಕೊನೆಯ ಓವರ್‌ವರೆಗೆ ಹೋಯಿತು.

ಆದರೂ, ನೇಪಾಳ ಎರಡು ಪ್ರಮುಖ ಪಂದ್ಯಗಳನ್ನು ಗೆಲ್ಲುವ ಮೂಲಕ ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿತು. ಓಮನ್ ಕೂಡ ಕತಾರ್ ವಿರುದ್ಧ ಜಯ ಸಾಧಿಸುವ ಮೂಲಕ ವಿಶ್ವಕಪ್‌ಗೆ ತನ್ನ ಸ್ಥಾನ ಭದ್ರಪಡಿಸಿಕೊಂಡಿತು.

ಈ ವರೆಗೆ ಭಾರತ, ಶ್ರೀಲಂಕಾ, ಅಫ್ಘಾನಿಸ್ತಾನ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಅಮೆರಿಕ, ವೆಸ್ಟ್ ಇಂಡೀಸ್, ಐರ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನ, ಕೆನಡಾ, ನೆದರ್‌ಲ್ಯಾಂಡ್ಸ್, ಇಟಲಿ, ಜಿಂಬಾಬ್ವೆ, ನಮೀಬಿಯಾ, ನೇಪಾಳ, ಒಮಾನ್ ಅರ್ಹತೆ ಪಡೆದ ದೇಶಗಳಾಗಿದೆ.

ಇನ್ನು ಯುನೈಟೆಡ್ ಅರಬ್ ಎಮಿರೇಟ್ಸ್, ಕತಾರ್, ಮಲೇಷ್ಯಾ, ಕುವೈತ್, ಜಪಾನ್, ಸಮೋವಾ, ಪಪುವಾ ನ್ಯೂಗಿನಿಯಾ ಈ ದೇಶಗಳ ಪೈಕಿ ಒಂದು ತಂಡಕ್ಕೆ ಅರ್ಹತೆ ಪಡೆಯಲು ಅವಕಾಶವಿದೆ.




ಕ್ವಾಲಿಫೈಯರ್ ಪಂದ್ಯಗಳನ್ನಾಡಿ ಅರ್ಹತೆ ಪಡೆಯಬೇಕಿದೆ. ಒಮಾನ್ ತಂಡ ಏಷ್ಯಾಕಪ್‌ನಲ್ಲಿ ಬಲಿಷ್ಠ ತಂಡ ಭಾರತಕ್ಕೂ ತೀವ್ರ ಪೈಪೋಟಿ ನೀಡಿತ್ತು.

ಮೂಲಗಳ ಪ್ರಕಾರ ಫೈನಲ್ ಪಂದ್ಯ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆಯುವ ಸಾಧ್ಯತೆಯಿದೆ. ಆದರೆ ಒಂದು ವೇಳೆ ಪಾಕಿಸ್ತಾನ ಫೈನಲ್‌ಗೇರಿದರೆ ಆ ಪಂದ್ಯ ಕೊಲಂಬೊದಲ್ಲಿ ನಡೆಯಲಿದೆ. ಪಾಕಿಸ್ತಾನ ತಂಡ ಭಾರತಕ್ಕೆ ಪ್ರಯಾಣಿಸದ ಕಾರಣ ತನ್ನ ಎಲ್ಲ ಪಂದ್ಯಗಳನ್ನು ಕೊಲಂಬೊದಲ್ಲಿ ಆಡಲಿದೆ.

ಕರ್ನಾಟಕ ಮಲ್ಲ CLASSIFIED

## ಜಾಹೀರಾತು




MUM2025Y.502654095

## ಜ್ಯೋತಿಷ್ಯ

ಸಾಗರ್ ಜ್ಯೋತಿಷ್ಯ, ಉದ್ಯೋಗ -ವ್ಯಾಪಾರ, ಪ್ರೇಮವಿವಾಹ, ಶತ್ರುನಾಶ, ಗುಪ್ತಸಮಸ್ಯೆ, ವಶೀಕರಣ ಯಂತ್ರ, ಜನ್ಮಕುಂಡಲಿ. 9870126299 (ನವಿ ಮುಂಬಯಿ)

MUM2025Y.502648034




MUM2025Y.502655100

## ಬಾಡಿಗೆ

ಗ್ರಾಂಟ್‌ರೋಡ್ ಪೂರ್ವ ಇಲ್ಲಿ ನವೀಕರಣ ಅಗತ್ಯವಿರುವ ಚೈನೀಸ್, ಇಂಡಿಯನ್, ಪಂಜಾಬಿ ಫಾಸ್ಟ್ ಫುಡ್ 9/10 ಲಕ್ಷ ಪ್ರತಿ ತಿಂಗಳು ಖಾತರಿ ವ್ಯಾಪಾರವಿರುವ ರೆಸ್ಟೋರೆಂಟ್ ಬಾಡಿಗೆಗೆ ನೀಡುವುದಿದೆ.
ಸಂಪರ್ಕ - 9892071530

MUM2025Y.502656288

## ಸ್ಥಳ ಸಂಬಂಧಿ

2 BHK to SELL at goregaon W, Off Vidyaniketan Rd /670 CA/ 8th flr/ OC Recd/ 1 Prkg/ Ask 2.31 Cr Neg/ Agt: 9322590790/ 9702675975

MUM2025Y.502663566

## ಓದುಗರಲ್ಲಿ ನಮ್ಮ ವಿನಂತಿ

"ಕರ್ನಾಟಕ ಮಲ್ಲ" ಪತ್ರಿಕೆಯಲ್ಲಿ ಪ್ರಕಟವಾಗುವ ವಿವಿಧ ಪ್ರಕಾರದ ಜಾಹೀರಾತಿನಲ್ಲಿಯ ವಿಷಯ ಸಂಬಂಧಿ ಪರಿಶೀಲನೆ ನಡೆಸಿಯೇ ವಾಚಕರು ಸ್ವಂತ ನಿರ್ಣಯದ ಮೇರೆಗೆ ಆರ್ಥಿಕ ವ್ಯವಹಾರ ಮಾಡತಕ್ಕದು. ಜಾಹೀರಾತಿನಲ್ಲಿ ಪ್ರಕಟಿಸಲಾದ ಯಾವುದೇ ವಿಷಯಗಳು ಮತ್ತು ಜಾಹೀರಾತುದಾರರು ಮಾಡುವ ದಾವೆಗಳಿಗೆ "ಕರ್ನಾಟಕ ಮಲ್ಲ" ಪತ್ರಿಕಾ ಸಮೂಹ ಯಾವುದೇ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಜಾಹೀರಾತಿನಲ್ಲಿ ಮಾಡಲಾದ ದಾವೆಯು ಅಸತ್ಯವಾಗಿದ್ದಲ್ಲಿ "ಕರ್ನಾಟಕ ಮಲ್ಲ" ಪತ್ರಿಕೆಯ ಮುದ್ರಕ, ಸಂಪಾದಕ ಮತ್ತು ಮಾಲಕರು ಜವಾಬ್ದಾರರಲ್ಲ ಇದನ್ನು ದಯವಿಟ್ಟು ಓದುಗರು ಗಮನಿಸಬೇಕಾಗಿ ವಿನಂತಿ.

-ವ್ಯವಸ್ಥಾಪಕ

AUR2025SA002595971

## ವಿಶೇಷ ಸೂಚನೆ


ಜಾಹೀರಾತಿನ ಫಾರ್ಮ್‌ನಲ್ಲಿ ನೀಡಲಾದ ಮೂಲ ಶಬ್ದಗಳ ಗೆರೆಗಳ ಪ್ರಕಾರ ಜಾಹೀರಾತಿನ ಬಿಲ್ ನೀಡಲಾಗುತ್ತದೆ. ಈ ಬಗ್ಗೆ ತಿಳಿಸುವುದೇನೆಂದರೆ ಪ್ರಕಟಿಸಲು ನೀಡಲಾದ ಜಾಹೀರಾತು ಇಂಗ್ಲೀಷ್‌ನಲ್ಲಿದ್ದಲ್ಲಿ ಜಾಹೀರಾತು ಫಾರ್ಮ್‌ನಲ್ಲಿ ಮೂಲ ಇಂಗ್ಲೀಷ್ ಗೆರೆಗಳ ಪ್ರಕಾರವೇ ಜಾಹೀರಾತಿನ ಬಿಲ್ ತೆಗೆದುಕೊಳ್ಳಲಾಗುವುದು. ಅದಕ್ಕಾಗಿ ಭಾಷಾಂತರ ಮಾಡಿದ (ಕನ್ನಡ) ಶಬ್ದಗಳ ಗೆರೆಗಳ ಪ್ರಕಾರ ತೆಗೆದುಕೊಳ್ಳಲಾಗುವುದಿಲ್ಲ. ಜಾಹೀರಾತು ಫಾರ್ಮ್‌ನಲ್ಲಿದ್ದ ಗೆರೆ ಮತ್ತು ಪ್ರಕಟಿಸಲಾದ ಜಾಹೀರಾತಿನ ಗೆರೆಗಳಲ್ಲಿ ವ್ಯತ್ಯಾಸವಿರಬಹುದು. ಇದನ್ನು ಏಜೆನ್ಸಿ ಮತ್ತು ಜಾಹೀರಾತುದಾರರು ಗಮನಿಸಬೇಕಾಗಿ ವಿನಂತಿ.

-ವ್ಯವಸ್ಥಾಪಕ

AUR2025SA002605878

# ಪಾಕ್ ಟಿ20 ತಂಡದ ನಾಯಕರಾಗ್ತಾರಾ ಶಾದಾಬ್ ಖಾನ್?

ಕರಾಚಿ, ಅ.16 - ಇಂಗ್ಲೆಂಡ್‌ನಲ್ಲಿ ಭುಜದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಪಾಕಿಸ್ತಾನ ತಂಡದ ಆಲ್‌ರೌಂಡರ್ ಶಾದಾಬ್ ಖಾನ್ ಚೇತರಿಸಿಕೊಂಡಿದ್ದು, ಪಾಕ್ ತಂಡಕ್ಕೆ ಮರಳಲು ಎದುರು ನೋಡುತ್ತಿದ್ದಾರೆ. ಮಾತ್ರವಲ್ಲ, ಅವರು ಪಾಕಿಸ್ತಾನ ಟಿ20 ತಂಡದ ನಾಯಕರಾಗುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.



ಶಾದಾಬ್ ಖಾನ್ ಪಾಕಿಸ್ತನದ ಪರ ಇದುವರೆಗು 70 ಏಕದಿನ ಮತ್ತು 112 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿರುವ ಅನುಭವ ಹೊಂದಿದ್ದಾರೆ. ಭುಜದ ಗಾಯಕ್ಕೆ ಒಳಗಾಗುವ ಮೊದಲು ಅವರು ರಾಷ್ಟ್ರೀಯ ತಂಡದ ಪರ ಜೂನ್ ತಿಂಗಳಿನಲ್ಲಿ ಬಾಂಗ್ಲಾದೇಶ ವಿರುದ್ಧದ ಸರಣಿಯಲ್ಲಿ ಆಡಿದ್ದರು.

ಶಾದಾಬ್ ಖಾನ್ ರಾಷ್ಟ್ರೀಯ ತಂಡಕ್ಕೆ ವಾಪಾಸ್ಸಾತಿ ಮಾಡುತ್ತಿದ್ದಂತೆ ಸಲ್ಮಾನ್ ಅಲಿ ಆಘಾ ಅವರ ಬದಲು ಟಿ20 ತಂಡದ ನಾಯಕರನ್ನಾಗಿ ನೇಮಿಸುವ ಸಾಧ್ಯತೆ ಇದೆ. ಅವರು ಶಸ್ತ್ರಚಿಕಿತ್ಸೆಗೆ ಒಳಗಾಗುವುದಕ್ಕೆ ಮೊದಲು ಟಿ20 ತಂಡದ ಉಪನಾಯಕರಾಗಿದ್ದರು. 27 ವರ್ಷದ ಅವರು ಈಗಾಗಲೇ ಟಿ20 ಕ್ರಿಕೆಟ್‌ನಲ್ಲಿ ಪಾಕಿಸ್ತಾನ ತಂಡವನ್ನು ಮುನ್ನಡೆಸಿದ ಅನುಭವ ಹೊಂದಿದ್ದಾರೆ. ಮಾತ್ರವಲ್ಲ, ಪಾಕಿಸ್ತಾನ ಸೂಪರ್‌ಲೀಗ್ (ಪಿಎಸ್‌ಎಲ್) ಮತ್ತು ದೇಶೀಯ ಕ್ರಿಕೆಟ್‌ನಲ್ಲಿ ತಂಡವನ್ನು ಮುನ್ನಡೆಸಿದ ಅನುಭವ ಹೊಂದಿದ್ದಾರೆ. ಸದ್ಯ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಸಲ್ಮಾನ್ ಆಘಾ ಅವರ ಬೆಂಬಲಕ್ಕೆ ನಿಂತಿದ್ದರೂ, ಏಷ್ಯಾಕಪ್‌ನಲ್ಲಿ ಟೀಂ ಇಂಡಿಯಾ ವಿರುದ್ಧ ಸೋತ ಬಳಿಕ ಆಘಾ ತಂಡದಲ್ಲಿ ಸ್ಥಾನ ಪಡೆಯುತ್ತಾರಾ ಎಂಬ ಅನುಮಾನಗಳು ಹೆಚ್ಚಾಗಿವೆ. ಪಾಕ್ ತಂಡಕ್ಕೆ ಧೀರ್ಘಾವಧಿಯ ನಾಯಕನನ್ನಾಗಿ ಶಾದಾಬ್ ಅವರನ್ನು ನೇಮಿಸುವ ಸಾಧ್ಯತೆ ಇದೆ ಎಂದು ಅಧಿಕೃತ ಮೂಲಗಳು ಮಾಹಿತಿ ನೀಡಿವೆ.

# ಎಲ್‌ಎಸ್‌ಜಿ ತಂಡದ ಕಾರ್ಯತಂತ್ರದ ಸಲಹೆಗಾರನಾಗಿ ವಿಲಿಯಮ್ಸನ್ ನೇಮಕ

ಲಕ್ನೋ, ಅ.16 - ಮುಂಬರುವ ಐಪಿಎಲ್ 19ನೇ ಆವೃತ್ತಿಗೂ ಮುನ್ನ ಲಕ್ನೋ ಸೂಪರ್‌ಜೈಂಟ್ಸ್(ಎಲ್‌ಎಸ್‌ಜಿ) ತಂಡವು ನ್ಯೂಜಿಲೆಂಡ್‌ನ ಬ್ಯಾಟಿಂಗ್ ತಾರೆ ಕೇನ್ ವಿಲಿಯಮ್ಸನ್ ಅವರನ್ನು ತಂಡದ ಕಾರ್ಯತಂತ್ರದ ಸಲಹೆಗಾರರನ್ನಾಗಿ ನೇಮಿಸಿಕೊಂಡಿದೆ. ಈ ವರ್ಷವಷ್ಟೇ, ವಿಲಿಯಮ್ಸನ್ ಎಸ್‌ಎ20 ಲೀಗ್‌ನಲ್ಲಿ ಸಂಜೀವ್ ಗೋಯೆಂಕಾ ಒಡೆತನದ ತಂಡವಾದ ಡರ್ಬನ್ ಸೂಪರ್‌ಜೈಂಟ್ಸ್‌ಗಾಗಿ ಆಡಿದ್ದರು.



ಪ್ರಪಂಚದಾದ್ಯಂತದ ಲೀಗ್‌ಗಳಲ್ಲಿ ಆಡುವ ಸಲುವಾಗಿ ಕೇಂದ್ರ ಒಪ್ಪಂದಗಳನ್ನು ನಿರಾಕರಿಸಿದ ಐವರು ನ್ಯೂಜಿಲೆಂಡ್ ಕ್ರಿಕೆಟಿಗರಲ್ಲಿ ವಿಲಿಯಮ್ಸನ್ ಕೂಡ ಒಬ್ಬರು. ಮಾಜಿ ನಾಯಕ ಕಿವೀಸ್ ತಂಡದಿಂದ ನಿವೃತ್ತಿ ಹೊಂದಿಲ್ಲ ಮತ್ತು ಮುಂದಿನ ವರ್ಷದ ಟಿ 20 ವಿಶ್ವಕಪ್‌ಗಾಗಿ ನ್ಯೂಜಿಲೆಂಡ್‌ಗೆ ಲಭ್ಯವಿರಲು ಬದ್ಧರಾಗಿದ್ದಾರೆ.

ಕೆಕೆಆರ್ ಜತೆ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ ಭರತ್ ಅರುಣ್ ಬೌಲಿಂಗ್ ಕೋಚ್ ಆಗಿ ಸೇರ್ಪಡೆಗೊಳ್ಳುವುದರೊಂದಿಗೆ ವಿಲಿಯಮ್ಸನ್ ತಂಡದ ಕಾರ್ಯತಂತ್ರದ ಸಿಬ್ಬಂದಿಯಾಗಿ ಫ್ರಾಂಚೈಸಿಗೆ ಸೇರ್ಪಡೆಗೊಂಡಿದ್ದಾರೆ.


ವಿಲಿಯಮ್ಸನ್ ಐಪಿಎಲ್‌ನಲ್ಲಿ ಆಟಗಾರನಾಗಿ ದೀರ್ಘಾವಧಿಯ ಅನುಭವವನ್ನು ಹೊಂದಿದ್ದಾರೆ. 2015 ರಿಂದ 2024 ರ ನಡುವೆ 10 ಸೀಸನ್‌ಗಳಲ್ಲಿ ಆಡಿದ್ದಾರೆ. ಅವರು 2018 ರಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಪರ 735 ರನ್‌ಗಳೊಂದಿಗೆ ಆರೆಂಜ್ ಕ್ಯಾಪ್ ಪಡೆದಿದ್ದರು.

2022 ರವರೆಗೆ ಎಸ್‌ಆರ್‌ಎಚ್ ಪರ ಆಡಿದ ನಂತರ, ವಿಲಿಯಮ್ಸನ್ ಅವರನ್ನು 2023 ರಲ್ಲಿ ಗುಜರಾತ್ ಟೈಟಾನ್ಸ್ ತಂಡಕ್ಕೆ ಸೇರಿಸಲಾಯಿತು. ಆ ಋತುವಿನಲ್ಲಿ ಅವರು ಕೇವಲ ಒಂದು ಪಂದ್ಯವನ್ನು ಮಾತ್ರ ಆಡಿದರು. ಗಾಯದಿಂದಾಗಿ ಅವರು ಟೂರ್ನಿಯಿಂದ ಹೊರಬಿದ್ದಿದ್ದರು. 2024 ರಲ್ಲಿ, ಅವರು ಎರಡು ಪಂದ್ಯಗಳಲ್ಲಿ ಆಡಿದರು.

ಐಪಿಎಲ್ 2025 ಕ್ಕಿಂತ ಮೊದಲು ನಡೆದ ಮೆಗಾ ಹರಾಜಿನಲ್ಲಿ, ವಿಲಿಯಮ್ಸನ್ ಮಾರಾಟವಾಗಲಿಲ್ಲ.

# ಅಂತಾರಾಷ್ಟ್ರೀಯ ಮಟ್ಟದಲ್ಲಿ 33 ಪದಕ ಗೆದ್ದ ಆಸ್ಟ್ರೇಲಿಯಾದ ಟಿಟ್ಮಸ್ ಈಜಿಗೆ ವಿದಾಯ

ಸಿಡ್ನಿ, ಅ.16 - ಒಲಿಂಪಿಕ್ಸ್‌ನಲ್ಲಿ ನಾಲ್ಕು ಬಾರಿಯ ಈಜು ಚಾಂಪಿಯನ್ ಅರಿಯಾನ್ ಟಿಟ್ಮಸ್ ಅವರು ಗುರುವಾರ ದಿಢೀರ್ ವಿದಾಯ ಘೋಷಿಸಿದ್ದಾರೆ. ಇದು 'ಕಠಿಣವಾದ ನಿರ್ಧಾರ' ಎಂದು ಆಸ್ಟ್ರೇಲಿಯಾದ ಈಜು ತಾರೆ ಹೇಳಿದ್ದಾರೆ.



25 ವರ್ಷ ವಯಸ್ಸಿನ ಟಿಟ್ಮಸ್ 2024ರ ಪ್ಯಾರಿಸ್ ಒಲಿಂಪಿಕ್ಸ್ ನಂತರ ವಿರಾಮ ಪಡೆದಿದ್ದರು. ಆದರೆ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಪುನರಾಗಮನ ಮಾಡುವ ಯೋಚನೆಯಿದೆ ಎಂದು ಈ ಹಿಂದೆ ಹೇಳಿದ್ದರು.

ಟಿಟ್ಮಸ್ ಒಟ್ಟು 33 ಅಂತರರಾಷ್ಟ್ರೀಯ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಅವರು ಎಂಟು ಪದಕಗಳನ್ನು (4 ಚಿನ್ನ, 3 ಬೆಳ್ಳಿ, 1 ಕಂಚು) ಗೆದ್ದಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 9 ಪದಕಗಳನ್ನು (4 ಚಿನ್ನ, ಎರಡು ಬೆಳ್ಳಿ, ಮೂರು ಕಂಚು) ಮತ್ತು ಕಾಮನ್ವೆಲ್ತ್ ಕ್ರೀಡೆಗಳಲ್ಲಿ ಎಂಟು ಪದಕಗಳನ್ನು (7 ಚಿನ್ನ, 1 ಬೆಳ್ಳಿ) ಜಯಿಸಿದ್ದಾರೆ.

'ಇದು ತುಂಬಾ ಕಠಿಣ ನಿರ್ಧಾರ. ಆದರೆ ಈ ತೀರ್ಮಾನ ಕೈಗೊಂಡಿದ್ದರಿಂದ ಸಂತಸವೂ ಆಗಿದೆ' ಎಂದು ಅವರು ಇನ್ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ. 'ನಾನು ಈಜನ್ನು ಪ್ರೀತಿಸಿದವಳು. ಈ ಕ್ರೀಡೆಯ ಬಗ್ಗೆ ನನ್ನ ಒಲವು ಪುಟ್ಟಬಾಲೆಯಾಗಿದ್ದ ದಿನಗಳಿಂದಲೇ ಇತ್ತು' ಎಂದೂ ಉಲ್ಲೇಖಿಸಿದ್ದಾರೆ. 'ಆದರೆ ಬದುಕಿನಲ್ಲಿ ಕೆಲವು ವಿಷಯಗಳು ಮುಖ್ಯವಾಗಿರುತ್ತವೆ. ಈಜಿಗಿಂತ ಪ್ರಮುಖವೆನಿಸುವ ಕೆಲವು ವಿಷಯಗಳಿವೆ' ಎಂದು ಹೇಳಿದ್ದಾರೆ.

ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ಗಳಲ್ಲಿ ಅವರು 400 ಮೀ. ಫ್ರೀಸ್ಟೈಲ್ ಚಿನ್ನ ಗೆದ್ದಿದ್ದರು. ಆದರೆ ವಿಶ್ವ ದಾಖಲೆಯನ್ನು ಕೆನಡಾದ ಉದಯೋನ್ಮುಖ ತಾರೆ ಸಮ್ಮರ್ ಮೆಕಿಂಟೋಷ್ ಅವರಿಗೆ ಕಳೆದುಕೊಂಡಿದ್ದರು. ಆದರೆ 200 ಮೀ. ಫ್ರೀಸ್ಟೈಲ್‌ನಲ್ಲಿ ವಿಶ್ವದಾಖಲೆ (1ನಿ.52.23ಸೆ.) ಟಿಟ್ಮಸ್ ಹೆಸರಿನಲ್ಲೇ ಉಳಿದಿದೆ. ಟಿಟ್ಮಸ್ ಮತ್ತು ಮೆಕಿಂಟೋಷ್ ನಡುವಣ ಪೈಪೋಟಿ ಪ್ರಮುಖ ಕ್ರೀಡೆಗಳಲ್ಲಿ ಕುತೂಹಲಕ್ಕೆ ಕಾರಣವಾಗುತಿತ್ತು.

'ನಾನು ಈಜಿಗೆ ಮರಳಲು ಉದ್ದೇಶಿಸಿದ್ದೆ. ಪ್ಯಾರಿಸ್ ಒಲಿಂಪಿಕ್ ಕೂಟ ನನ್ನ ಪಾಲಿಗೆ ಕೊನೆಯದಾಗಬಹುದೆಂದು ಎಂದೂ ಯೋಚಿಸಿರಲಿಲ್ಲ. ಹಾಗೆ ತಿಳಿದಿದ್ದಲ್ಲಿ ಕೊನೆಯ ಸ್ಪರ್ಧೆಯನ್ನು ಇನ್ನಷ್ಟು ಇಷ್ಟಪಟ್ಟು ಈಜುತ್ತಿದ್ದೆ' ಎಂದು ಹೇಳಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 400 ಮೀ. ಫ್ರೀಸ್ಟೈಲ್ ಚಿನ್ನ ಮತ್ತು 4x200 ಮೀ. ಫ್ರೀಸ್ಟೈಲ್ ರಿಲೆಯಲ್ಲಿ ಚಿನ್ನ ಗೆದ್ದ ಆಸ್ಟ್ರೇಲಿಯಾ ತಂಡದಲ್ಲಿದ್ದರು.

# ನಿನ್ನ ಹೆಂಡತಿಗೂ ಫ್ರೀ, ನನ್ನ ಹೆಂಡತಿಗೂ ಫ್ರೀ; ಯಾರಪ್ಪನ ಮನೆ ದುಡ್ಡು ಅಂತಾ ಜನರ ತೆರಿಗೆ ಹಣ ಹಾಳು ಮಾಡ್ತಿದ್ದೀರಾ?: ವಿಶ್ವನಾಥ್

ಮೈಸೂರು, ಅ. 16 - ವೃದ್ಧಾಪ್ಯ ವೇತನ, ಅಂಗವಿಕಲರ ಮಾಸಾಶನ ಸೇರಿ ಎಲ್ಲದಕ್ಕೂ ಮಾನದಂಡಗಳಿವೆ. ಹೀಗಿರುವಾಗ ಮಹಿಳೆಯರಿಗೆ ಯಾವುದೇ ಮಾನದಂಡವಿಲ್ಲದೆ ಪ್ರತಿ ತಿಂಗಳು 2 ಸಾವಿರ ಹಣ ಕೊಡುವಾಗ ಯಾವ ಮಾನದಂಡ ಅನುಸರಿಸಲಾಗುತ್ತಿದೆ ಎಂದು ಮಾಜಿ ಸಚಿವ ಹಾಗೂ ಎಂಎಲ್‌ಸಿ ಎಚ್. ವಿಶ್ವನಾಥ್ ಪ್ರಶ್ನಿಸಿದ್ದಾರೆ.

ಮೈಸೂರಿನಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಗ್ಯಾರಂಟಿಗಳ ಬಗ್ಗೆ ವಾಗ್ದಾಳಿ ನಡೆಸಿದರು. ನಿನ್ನ ಹೆಂಡತಿಗೂ ಫ್ರೀ, ನನ್ನ ಹೆಂಡತಿಗೂ ಫ್ರೀ ಅಂತಾರೆ. ಇದು ಯಾರ ಅಪ್ಪನ ಮನೆ ದುಡ್ಡಲ್ಲ ಸಿದ್ದರಾಮಯ್ಯನವರೇ, ಜನರ ತೆರಿಗೆ ಹಣವಾಗಿದೆ.

ರಾಜ್ಯದ ಜನತೆ ಬೆವರು ಹರಿಸಿ ದುಡಿದು ಕಟ್ಟಿರುವ ಹಣವಾಗಿದೆ, ಈ ಮಂತ್ರಿಗಳೆಲ್ಲ ಯಾಕೆ ಬಾಯಿಮುಚ್ಚಿ ಕುಳಿತಿದ್ದಾರೋ ಗೊತ್ತಿಲ್ಲ. ಮಂತ್ರಿಗಳೇನು ಸಿಎಂ ಗುಲಾಮರಾ ಎಂದು ವಿಶ್ವನಾಥ್ ಕಿಡಿ ಕಾರಿದ್ದಾರೆ. ಮಹಿಳೆಯರಿಗೆ 2 ಸಾವಿರ ರೂ. ಹಣ ನೀಡುವ ಬದಲು ಸಕ್ಕರೆ ಕಾರ್ಖಾನೆ ಪುನರುಜ್ಜೀವನ ಗೊಳಿಸಿದ್ದರೇ ಸಾವಿರಾರು ಮಂದಿಗೆ ಕೆಲಸ ಸಿಗುತ್ತಿತ್ತು. ಆ ಕೆಲಸ ಮಾಡುವ ಬದಲು ಸಿದ್ದರಾಮಯ್ಯ ಹುಚ್ಚುತನ ಮಾಡುತ್ತಿದ್ದಾರೆ ಎಂದು ಹರಿಹಾಯ್ದಿದ್ದಾರೆ.

ಇನ್ನೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.33 ರಷ್ಟು ಅಂಕ ನಿಗದಿ ಪಡಿಸಿರುವುದಕ್ಕೆ ಆಕ್ಷೇಪ ವ್ಯಕ್ತ ಪಡಿಸಿದ ಅವರು, ಶಿಕ್ಷಣದ ಗುಣಮಟ್ಟ ಇದರಿಂದ ಕುಸಿಯುತ್ತದೆ. ಸರ್ಕಾರಕ್ಕೆ ತಲೆ ಇಲ್ಲದೆ ನಿರ್ಧಾರ ಕೈಗೊಳ್ಳುತ್ತಿದೆ ಎಂದು ಲೇವಡಿ ಮಾಡಿದ್ದಾರೆ.



## ಕಾರ್ತಿಕ್ ಆರ್ಯನ್‌ನ ದೊಡ್ಡ ಚಿತ್ರ ಮತ್ತಷ್ಟು ವಿಳಂಬ:ಹಾಳಾಗಿದೆ10 ದಿನಗಳ ಚಿತ್ರೀಕರಣ

ಎಲ್ಲರೂ ಖಾನ್‌ಗಳು,ರಣಬೀರ್ ಕಪೂರ್ ಮತ್ತು ವಿಕ್ಕಿ ಕೌಶಲ್ ಬಗ್ಗೆ ಮಾತನಾಡುತ್ತಿರುವಾಗ,ಕಾರ್ತಿಕ್ ಆರ್ಯನ್ ಕೂಡ ಕಡಿಮೆಯಿಲ್ಲ.ಅವರು ಕೂಡ ಹಲವಾರು ದೊಡ್ಡ ಚಿತ್ರಗಳಲ್ಲಿ ಸದ್ದು ಮಾಡಲು ಸಜ್ಜಾಗಿದ್ದಾರೆ,ಇದಕ್ಕಾಗಿ ಅವರು ಬಹಳ ಸಮಯದಿಂದ ತಯಾರಿ ನಡೆಸುತ್ತಿದ್ದಾರೆ.ನಟನ ಕೊನೆಯ ಚಿತ್ರ 'ಭೂಲ್ ಭುಲೈಯಾ 3',ಇದನ್ನು ಸಾರ್ವಜನಿಕರು ಬಹಳವಾಗಿ ಸ್ವೀಕರಿಸಿದ್ದರು.ಈಗ ಅವರ ಮುಂದಿನ ಚಿತ್ರಕ್ಕೆ ಸಮಯ ಬಂದಿದೆ.ಅವರ ಮತ್ತು ಅನುರಾಗ್ ಬಸು ಅವರ ಚಿತ್ರ ಈ ವರ್ಷದ ದೀಪಾವಳಿಯಂದು ಬಿಡುಗಡೆಯಾಗಲಿದೆ, ಆಯುಷ್ಮಾನ್ ಮತ್ತು ರಶ್ಮಿಕಾ ಮಂದಣ್ಣ ಅವರ 'ಥಾಮಾ' ಚಿತ್ರದೊಂದಿಗೆ ಘರ್ಷಣೆಗೆ ಒಳಗಾಗಲಿದೆ ಎಂಬ ವರದಿಗಳಿದ್ದವು.ಆದರೆ ಈ ಘರ್ಷಣೆಯನ್ನು ಈಗ ತಪ್ಪಿಸಲಾಗಿದೆ,ಏಕೆಂದರೆ ತಯಾರಕರು ಈ ಸಂಗೀತ ಪ್ರೇಮಕಥೆಯನ್ನು ಮುಂದೂಡಿದ್ದಾರೆ.



ಆದರೆ ಕಾರ್ತಿಕ್ ಆರ್ಯನ್ ಅವರ ಬೆದರಿಕೆ ಹಾಗೆಯೇ ಉಳಿದಿದೆ.ಹೌದು,ಅವರು ಆಯುಷ್ಮಾನ್ ಖುರಾನಾ ಅವರನ್ನು ಎದುರಿಸದೇ ಇರಬಹುದು, ಆದರೆ ಸಂಜಯ್ ದತ್ ಅವರನ್ನು ಎದುರಿಸುತ್ತಿದ್ದಾರೆ. ಅನುರಾಗ್ ಬಸು ಚಿತ್ರಕ್ಕೆ ಪ್ರಮುಖ ಬದಲಾವಣೆ ಮಾಡಿದ್ದಾರೆ ಎಂದು ಸುದ್ದಿ ವೆಬ್‌ಸೈಟ್ ಇತ್ತೀಚೆಗೆ ವರದಿ ಮಾಡಿದೆ.ಚಿತ್ರದ ಶೀರ್ಷಿಕೆಯನ್ನು ಸಹ ಬಹಿರಂಗಪಡಿಸಲಾಗಿದೆ -ಅದು 'ತು ಮೇರಿ ಜಿಂದಗಿ ಹೈ'.ಚಿತ್ರವು ಈಗ ಮುಂದಿನ ವರ್ಷ ಬಿಡುಗಡೆಯಾಗಲಿದೆ.

ಹೊಸ ವರದಿಯ ಪ್ರಕಾರ,ನಿರ್ಮಾಣವು ಚಿತ್ರದ ಹೆಚ್ಚಿನ ಭಾಗವನ್ನು ಮರು ಚಿತ್ರೀಕರಣ ಮಾಡುತ್ತಿದೆ. ವಾಸ್ತವವಾಗಿ,ಈಗಾಗಲೇ ಚಿತ್ರೀಕರಣಗೊಂಡಿರುವ 10 ದಿನಗಳ ದೃಶ್ಯಗಳನ್ನು ಚಿತ್ರದಿಂದ ತೆಗೆದು ಹಾಕಲಾಗಿದೆ.ದೃಶ್ಯಕ್ಕೆ ಕೆಲವು ರೋಮಾಂಚಕಾರಿ ದೃಶ್ಯಗಳನ್ನು ಸೇರಿಸಲು ತಯಾರಕರು ಈ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ.ಆದರೆ ದೊಡ್ಡ ಪ್ರಶ್ನೆಯೆಂದರೆ,ಈ ನಿರ್ಧಾರದ ಹಿಂದಿನ ಕಾರಣ ವೇನು? ಈಗ ಕಾರಣ ಬಹಿರಂಗವಾಗಿದೆ. ಹೊಸ ವರದಿಯ ಪ್ರಕಾರ,ಈ ನಿರ್ಮಾಣ ಕರೆಯ ಹಿಂದಿನ ಕಾರಣವೆಂದರೆ ಕಾರ್ತಿಕ್ ಪಾತ್ರಕ್ಕೆ ಹೊಸ ನೋಟವನ್ನು ನೀಡುವುದು.

ಈ ಪಾತ್ರಕ್ಕೆ ಕಾರ್ತಿಕ್ ಅವರ ಹೊಸ ಲುಕ್ ಅತ್ಯಗತ್ಯ ಎಂದು ತಂಡ ಭಾವಿಸುತ್ತದೆ.ಆದ್ದರಿಂದ,ಅವರು ಸಣ್ಣ ಬದಲಾವಣೆಗಳನ್ನು ಮಾಡಲು ಬಯಸುವುದಿಲ್ಲ.ಅದಕ್ಕಾಗಿಯೇ ಅವರು 10 ದಿನಗಳ ದೃಶ್ಯಗಳನ್ನು ಅಳಿಸಿ ಮತ್ತೆ ಚಿತ್ರೀಕರಿಸುತ್ತಾರೆ.ಚಿತ್ರದಲ್ಲಿ ಅವರ ಸಂಪೂರ್ಣ ಪಾತ್ರವು ದೃಶ್ಯಾತ್ಮಕವಾಗಿ ವಿಭಿನ್ನವಾಗಿರುತ್ತದೆ. ಮರು ಚಿತ್ರೀಕರಣ ಈಗಾಗಲೇ ಪ್ರಾರಂಭವಾಗಿದೆ.

ಇದು ಕಾರ್ತಿಕ್ ಮತ್ತು ಶ್ರೀಲಾ ಅವರ ಮೊದಲ ಸಹಯೋಗವಾಗಿರುತ್ತದೆ.ಮೂಲತಃ ದೀಪಾವಳಿಗೆ ನಿಗದಿಯಾಗಿದ್ದ ಈ ಚಿತ್ರವು ಈಗ ಮೇ 1, 2026ರಂದು ಬಿಡುಗಡೆಯಾಗಲಿದೆ. ಮರು ಚಿತ್ರೀಕರಣ ಮತ್ತು ನಿರ್ಮಾಣದ ನಂತರದ ಕೆಲಸಗಳಿಂದಾಗಿ ಬಿಡುಗಡೆ ದಿನಾಂಕವನ್ನು ಬದಲಾಯಿಸಲಾಗಿದೆ. ಸಂಜಯ್ ದತ್ ಮತ್ತು ಅಭಿಷೇಕ್ ಬಚ್ಚನ್ ನಟಿಸಿರುವ ರಿತೇಶ್ ದೇಶ್ಮುಖ್ ಅವರ 'ರಾಜಾ ಶಿವಾಜಿ' ಕೂಡ ಅದೇ ಸಮಯದಲ್ಲಿ ಬಿಡುಗಡೆಯಾಗುತ್ತಿದೆ. ಈಗ, ಕಾರ್ತಿಕ್ ಈ ನಟರ ವಿರುದ್ಧ ಸ್ಪರ್ಧಿಸಲಿದ್ದಾರೆ.

## ಹನ್ಸಲ್ ಮೆಹ್ತಾ ನಿರ್ಮಾಣದ ಚಿತ್ರದ ಮೂಲಕ ರಾಜ್‌ಕುಮಾರ್ ಹಿರಾನಿ ಪುತ್ರ ವೀರ್ ಬಾಲಿವುಡ್‌ಗೆ ಪಾದಾರ್ಪಣೆ



ಕಳೆದ ವರ್ಷ ಫಿರೋಜ್ ಅಬ್ಬಾಸ್ ಖಾನ್ ಅವರ ಲೆಟರ್ಸ್ ಆಫ್ ಸುರೇಶ್‌ನಲ್ಲಿ ತಮ್ಮ 35 ನಿಮಿಷಗಳ ಪ್ರಬಲ ಸ್ವಗತದ ಮೂಲಕ ರಂಗಭೂಮಿ ಪ್ರೇಕ್ಷಕರನ್ನು ಮೆಚ್ಚಿಸಿದ ನಂತರ, ಪ್ರಸಿದ್ಧ ಚಲನಚಿತ್ರ ನಿರ್ಮಾಪಕ ರಾಜ್‌ಕುಮಾರ್‌ಹಿರಾನಿ ಅವರ ಪುತ್ರ ವೀರ್‌ಹಿರಾನಿ ಬಾಲಿವುಡ್‌ಗೆ ಪಾದಾರ್ಪಣೆ ಮಾಡಲಿದ್ದಾರೆ.

ಪೀಪಿಂಗ್‌ಮೂನ್‌ನ ವರದಿಯ ಪ್ರಕಾರ, ಹಂಸಲ್ ಮೆಹ್ತಾ ಅವರ ಟ್ರೂ ಸ್ಟೋರಿ ಫಿಲ್ಮ್ಸ್ ನಿರ್ಮಿಸುವ ಪ್ರೇಮಕಥೆಯ ನಾಯಕನಾಗಿ ವೀರ್ ನಟಿಸಲಿದ್ದಾರೆ. ಈ ಯೋಜನೆಯು ಪ್ರಭಾವಶಾಲಿ ಸೃಜನಶೀಲ ತಂಡವನ್ನುಒಟ್ಟುಗೂಡಿಸುತ್ತದೆ, ಮೆಚ್ಚುಗೆ ಪಡೆದ ಮಲಯಾಳಂ ಚಲನಚಿತ್ರ ನಿರ್ಮಾಪಕ ಲಿಜೊ ಜೋಸ್ ಪೆಲ್ಲಿಸ್ಸೆರಿ ಅವರ ಹಿಂದಿ ನಿರ್ದೇಶನದ ಚೊಚ್ಚಲ ಪ್ರವೇಶ ಮಾಡುತ್ತಿದ್ದಾರೆ. ಅಂಗಮಾಲಿ ಡೈರೀಸ್ (2017) ಮತ್ತು ಜಲ್ಲಿಕಟ್ಟು (2019)ನಂತಹ ಹೊಸತನದ ಚಿತ್ರಗಳಿಗೆ ಹೆಸರುವಾಸಿಯಾದ ಪೆಲ್ಲಿಸ್ಸೆರಿ, ತಮ್ಮ ದಿಟ್ಟ ಕಥೆ ಹೇಳುವಿಕೆ ಮತ್ತು ವಿಶಿಷ್ಟ ಸಿನಿಮೀಯ ಶೈಲಿಗೆ ಮನ್ನಣೆ ಗಳಿಸಿದ್ದಾರೆ. ಚಿತ್ರದ ತೂಕಕ್ಕೆ ಹೆಚ್ಚುವರಿಯಾಗಿ, ಆಸ್ಕರ್‌ಪ್ರಶಸ್ತಿ ವಿಜೇತ ಸಂಯೋಜಕ ಎ.ಆರ್. ರೆಹಮಾನ್ ಅವರ ಸಂಗೀತವನ್ನು ರಚಿಸಲು ಅವರನ್ನು ನೇಮಿಸಲಾಗಿದೆ.

ನಾಯಕಿಯ ಆಯ್ಕೆ ಪ್ರಸ್ತುತ ನಡೆಯುತ್ತಿದೆ ಮತ್ತು ನಿರ್ಮಾಣವು ಫೆಬ್ರವರಿ 2026ರಲ್ಲಿ ಪ್ರಾರಂಭವಾಗಲಿದೆ.

ಲಂಡನ್‌ನಲ್ಲಿರುವ ಪ್ರತಿಷ್ಠಿತ ರಾಯಲ್ ಅಕಾಡೆಮಿ ಆಫ್ ಡ್ರಾಮ್ಯಾಟಿಕ್ ಆರ್ಟ್ (RADA)ದ ಪದವೀಧರರಾದ ವೀರ್‌ಹಿರಾನಿ, ಈಗಾಗಲೇ ರಾಜ್‌ಕುಮಾರ್ ಹಿರಾನಿ ಅವರ ಜಿಯೋ ಹಾಟ್ ಸ್ಟಾರ್‌ಗಾಗಿ ಪ್ರೀತಮ್ ಪೆಡ್ರೊ ಅವರ ಮೊದಲ ಸರಣಿಯೊಂದಿಗೆ ಸ್ಟ್ರೀಮಿಂಗ್ ಜಾಗದಲ್ಲಿ ನಟನೆಗೆ ಪಾದಾರ್ಪಣೆ ಮಾಡುತ್ತಿದ್ದಾರೆ, ಇದರಲ್ಲಿ ಅರ್ಷದ್ ವಾರ್ಸಿ ಮತ್ತು ವಿಕ್ರಾಂತ್ ಮ್ಯಾಸ್ಸಿ ಸಹ ನಟರಾಗಿದ್ದಾರೆ. ಆದಾಗ್ಯೂ,ಮುಂಬರುವ ಹನ್ಸಲ್ ಮೆಹ್ತಾ ನಿರ್ಮಾಣವು ಅವರ ಅಧಿಕೃತ ನಾಟಕೀಯ ಚಲನಚಿತ್ರ ಚೊಚ್ಚಲ ಪ್ರವೇಶವನ್ನು ಗುರುತಿಸುತ್ತದೆ, ಅವರನ್ನು ದೊಡ್ಡ ಪರದೆಗೆ ಪರಿಚಯಿಸುತ್ತದೆ.

ನಿರ್ಮಾಪಕರಾಗಿ ಹಲವಾರು ನಾಟಕೀಯ ಮತ್ತು ವೆಬ್ ಯೋಜನೆಗಳನ್ನು ಸಕ್ರಿಯವಾಗಿ ನಿರ್ಮಿಸುತ್ತಿರುವ ಹನ್ಸಲ್ ಮೆಹ್ತಾ,ಈ ಬಿಡುಗಡೆಯನ್ನು ತಮ್ಮ ಬ್ಯಾನರ್‌ನ ಪ್ರಮುಖ ಉದ್ಯಮಗಳಲ್ಲಿ ಒಂದಾಗಿ ಬೆಂಬಲಿಸುತ್ತಿದ್ದಾರೆ. ನಿರ್ದೇಶನದ ದೃಷ್ಟಿಯಿಂದ, ಮೆಹ್ತಾ ಇತ್ತೀಚೆಗೆ ಟೊರೊಂಟೊ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ (TIFF) ಪ್ರಥಮ ಪ್ರದರ್ಶನಗೊಂಡ ಮಹಾತ್ಮ ಗಾಂಧಿಯವರ ಬಗೆಗಿನ ಮಹತ್ವಾಕಾಂಕ್ಷೆಯ ಸರಣಿಯಾದ ಗಾಂಧಿಯನ್ನು ಅನಾವರಣಗೊಳಿಸಿದರು ಮತ್ತು ಪ್ರಸ್ತುತ ಅನಿಲ್ ಕಪೂರ್ ಮತ್ತು ವಿಜಯ್ ವರ್ಮಾ ನಟಿಸಿದ ನೆಟ್‌ಫ್ಲಿಕ್ಸ್ ವ್ಯವಹಾರ ನಾಟಕದಲ್ಲಿ ಕೆಲಸ ಮಾಡುತ್ತಿದ್ದಾರೆ.

## ಧರ್ಮ ಪ್ರೊಡಕ್ಷನ್ಸ್ ಕಾರ್ಯಾಚರಣೆಯನ್ನು ಸರಳಗೊಳಿಸಲು ಧರ್ಮಾಟಿಕ್ ಎಂಟರ್‌ಟೈನ್‌ಮೆಂಟ್ ಅನ್ನು ವಿಲೀನಗೊಳಿಸಿದ ಕರಣ್ ಜೋಹರ್

ದಿ ಎಕನಾಮಿಕ್ ಟೈಮ್ಸ್‌ನ ಇತ್ತೀಚಿನ ಲೇಖನದ ಪ್ರಕಾರ, ಧರ್ಮಾ ಪ್ರೊಡಕ್ಷನ್ಸ್‌ನ ಡಿಜಿಟಲ್ ಅಂಗವಾದ ಧರ್ಮಾಟಿಕ್ ಎಂಟರ್‌ಟೈನ್‌ಮೆಂಟ್ ಈಗ ಅಧಿಕೃತವಾಗಿ ತನ್ನ ಮಾತೃ ಕಂಪನಿಯೊಂದಿಗೆ ವಿಲೀನಗೊಂಡಿದೆ. ಈ ಕ್ರಮವು 'ಬದಲಾಗುತ್ತಿರುವ ಮನರಂಜನಾ ಭೂದೃಶ್ಯದ ನಡುವೆ ಕಾರ್ಯಾಚರಣೆಗಳನ್ನು ಕ್ರೋಢೀಕರಿಸುವ' ಧರ್ಮದ ಯೋಜನೆಯ ಭಾಗವಾಗಿದೆ ಎಂದು ಸುದ್ದಿ ಹೇಳುತ್ತದೆ.ಅಧಿಕೃತ ಫೈಲಿಂಗ್‌ಗಳ ಪ್ರಕಾರ, ವಿಲೀನ ಅರ್ಜಿಯನ್ನು ತ್ವರಿತವಾಗಿ ಮಾಡಲಾಗಿದೆ ಮತ್ತು ಎರಡೂ ಕಂಪನಿಗಳ ಷೇರುದಾರರು ಮತ್ತು ಸಾಲಗಾರರು ಈಗಾಗಲೇ ಅನುಮೋದಿಸಿದ್ದಾರೆ ಎಂದು ಅದು ಹೇಳಿದೆ.

ಕರಣ್ ಜೋಹರ್‌ಅವರ ಧರ್ಮಾ ಪ್ರೊಡಕ್ಷನ್ಸ್ ಕಾರ್ಯಾಚರಣೆಯನ್ನು ಸರಳಗೊಳಿಸಲು ಧರ್ಮಾಟಿಕ್ ಎಂಟರ್‌ಟೈನ್‌ಮೆಂಟ್ ಅನ್ನು ವಿಲೀನಗೊಳಿಸುತ್ತದೆ

ಕಳೆದ ವರ್ಷ ಉದ್ಯಮಿ ಆಧಾರ್ ಪೂನವಾಲ ಅವರು ಕಂಪನಿಯ ಶೇ.50 ಪಾಲನ್ನು ರೂ.1,000 ಕೋಟಿಗೆ ಖರೀದಿಸಿದ ನಂತರ ಇದು ಧರ್ಮಾ ಪ್ರೊಡಕ್ಷನ್ಸ್‌ನ ಮೊದಲ ದೊಡ್ಡ ಹೆಜ್ಜೆಗಳಲ್ಲಿ ಒಂದಾಗಿದೆ, ಧರ್ಮಾವನ್ನು ರೂ.2,000 ಕೋಟಿ ರೂ.ವಿಲೀನದ ನಂತರ ಧರ್ಮ ಮುಖ್ಯಸ್ಥರು ತೆಗೆದುಕೊಂಡ ಮತ್ತೊಂದು ಮಹತ್ವದ ನಿರ್ಧಾರವೆಂದರೆ ವಿತರಣಾ ವಿಭಾಗವನ್ನು ಪ್ರಾರಂಭಿಸುವುದು. ಕೋಮಲ್ ನಹ್ತಾ ಅವರೊಂದಿಗಿನ ಇತ್ತೀಚಿನ ಸಂದರ್ಶನದಲ್ಲಿ, ಕರಣ್, ಅದರ್‌ಪೂನವಲ್ಲಾ ಅವರೊಂದಿಗಿನ ಪಾಲುದಾರಿಕೆಯು ವಿತರಣೆಯಲ್ಲಿ ತೊಡಗಿಸಿಕೊಳ್ಳಲು ಪ್ರಚೋದನೆಯನ್ನು ನೀಡಿತು ಎಂದು ಒಪ್ಪಿಕೊಂಡರು.



ಧರ್ಮಾಟಿಕ್ ಎಂಟರ್‌ಟೈನ್‌ಮೆಂಟ್ ಮತ್ತು ಧರ್ಮ ಪ್ರೊಡಕ್ಷನ್ಸ್‌ನ ವಿಲೀನವು ಏಪ್ರಿಲ್ 1, 2025 ರಿಂದ ಜಾರಿಗೆ ಬರಲಿದೆ ಮತ್ತು ಅಂಗಸಂಸ್ಥೆಗಳ ಸಂಖ್ಯೆಯನ್ನು ಕಡಿಮೆ ಮಾಡುವುದು, ವೆಚ್ಚಗಳನ್ನು ಕಡಿತಗೊಳಿಸುವುದು ಮತ್ತು ಕಾನೂನು ಕೆಲಸವನ್ನು ಸರಾಗಗೊಳಿಸುವ ಮೂಲಕ ಕಂಪನಿಯ ರಚನೆಯನ್ನು ಸರಳಗೊಳಿಸುತ್ತದೆ ಎಂದು ಎಕನಾಮಿಕ್ ಟೈಮ್ಸ್ ಲೇಖನವು ಮತ್ತಷ್ಟು ಬಹಿರಂಗಪಡಿಸಿದೆ.




ಧರ್ಮಾಟಿಕ್ ಈಗಾಗಲೇ ಸಂಪೂರ್ಣವಾಗಿ ಧರ್ಮದ ಒಡೆತನದಲ್ಲಿದ್ದರಿಂದ, ಒಪ್ಪಂದದ ಭಾಗವಾಗಿ ಯಾವುದೇ ಹಣ ವನ್ನು ವಿನಿಮಯ ಮಾಡಿಕೊಳ್ಳಲಾಗಿಲ್ಲ. ಧರ್ಮಾಟಿಕ್‌ನಲ್ಲಿ ಧರ್ಮ ಹೊಂದಿದ್ದ ಷೇರುಗಳನ್ನು ಈಗ ರದ್ದುಗೊಳಿಸಲಾಗುತ್ತದೆ. ಲೇಖನವು ಕಂಪನಿಯ ಅಧಿಕಾರಿಯೊಬ್ಬರು ನೀಡಿದ ಹೇಳಿಕೆಯನ್ನು ಒಳಗೊಂಡಿತ್ತು,'ಧರ್ಮಾಟಿಕ್ ಅನ್ನು ಡಿಜಿಟಲ್-ಮೊದಲ ಸೃಜನಶೀಲ ಸ್ಟುಡಿಯೋ ಎಂದು ಕಲ್ಪಿಸಲಾಗಿತ್ತು,ಆದರೆ ಉದ್ಯಮವು ಸಮಗ್ರ ಕಾರ್ಯಾಚರಣೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸುವ ರೀತಿಯಲ್ಲಿ ವಿಕಸನಗೊಂಡಿದೆ.ಈ ವಿಲೀನವು ನಮಗೆ ಸಂಪನ್ಮೂಲಗಳನ್ನು ಅತ್ಯುತ್ತಮವಾಗಿಸಲು ಮತ್ತು ವೇದಿಕೆಗಳಾದ್ಯಂತ ಶಕ್ತಿಯುತ ಕಥೆಗಳನ್ನು ಹೇಳುವುದನ್ನು ಮುಂದುವರಿಸುವಾಗ ತೆಳುವಾದ, ಹೆಚ್ಚು ಪರಿಣಾಮಕಾರಿ ಸಂಘಟನೆಯನ್ನು ನಡೆಸಲು ಅನುವು ಮಾಡಿಕೊಡುತ್ತದೆ.'ಡಿಜಿಟಲ್ ಶೋಗಳು ಮತ್ತು ಚಲನಚಿತ್ರ ಗಳನ್ನು ನಿರ್ಮಿಸುವ ಗುರಿಯೊಂದಿಗೆ ಧರ್ಮಾಟಿಕ್ ಎಂಟರ್‌ಟೈನ್‌ಮೆಂಟ್ 2018 ರಲ್ಲಿ ಪ್ರಾರಂಭವಾಯಿತು.ಅವರು ಕಾಫಿ ವಿತ್ ಕರಣ್,ಫ್ಯಾಬುಲಸ್ ಲೈವ್ಸ್ ಆಫ್ ಬಾಲಿವುಡ್ ವೈವ್ಸ್,ದಿ ಟ್ರೈಬ್ ಮತ್ತು ಲವ್ ಸ್ಟೋರಿಯಾ ನಂತಹ ಕಾಲ್ಪನಿಕವಲ್ಲದ ಕಾರ್ಯಕ್ರಮಗಳನ್ನು ಮತ್ತು ದಿ ಫೇಮ್ ಗೇಮ್, ಶೋ ಟೈಮ್,ಗ್ಯಾರಾ ಗ್ಯಾರಾ ಮತ್ತು ಡೂ ಯು ವಾನ್ನಾ ಪಾರ್ಟ್ನರ್‌ನಂತಹ ಕಾಲ್ಪನಿಕ ಶೀರ್ಷಿಕೆಗಳನ್ನು ನಿರ್ಮಿಸಿದರು.ಧರ್ಮಾಟಿಕ್ ನಿರ್ಮಿಸಿದ ವೆಬ್ ಚಲನಚಿತ್ರಗಳು ಗಿಲ್ಟಿ(2020),ಅಜೀಬ್ ದಾಸ್ತಾನ್ಸ್(2021),ಸರ್ಚಿಂಗ್ ಫಾರ್‌ಶೀಲಾ (2021; ನಾನ್-ಫಿಕ್ಷನ್), ಮೀನಾಕ್ಷಿ ಸುಂದರೇಶ್ವರ್(2021),ಏ ವತನ್ ಮೇರೆ ವತನ್ (2024), ನದಾನಿಯನ್ (2025) ಮತ್ತು ಆಪ್ ಜೈಸಾ ಕೋಯಿ (2025).ಕುತೂಹಲಕಾರಿಯಾಗಿ, ಸರ್ಜಮೀನ್ (2025) ನೇರವಾಗಿ ಜಿಯೋಹಾಟ್‌ಸ್ಟಾರ್‌ನಲ್ಲಿ ಬಿಡುಗಡೆಯಾಯಿತು ಆದರೆ ಇದನ್ನು ಧರ್ಮ ಪ್ರೊಡಕ್ಷನ್ಸ್ ಅಡಿಯಲ್ಲಿ ನಿರ್ಮಿಸಲಾಯಿತು.

## 'ಹೈವಾನ್'ನಲ್ಲಿ ಖಳನಾಯಕನ ಪಾತ್ರದಲ್ಲಿ ಅಕ್ಷಯ್ ಕುಮಾರ್,ವಿಶೇಷ ಸಲಹೆ ನೀಡಿದ ಸಿಎಂ ಫಡ್ನವಿಸ್

ಬಾಲಿವುಡ್‌ನ ಖಿಲಾಡಿ ಕುಮಾರ್ ಅಕ್ಷಯ್ ಯಾವಾಗಲೂ ಮುಖ್ಯಾಂಶಗಳಲ್ಲಿರುತ್ತಾರೆ.ತಮ್ಮ ಆಕ್ಷನ್ ಪಾತ್ರಗಳಿಗೆ ಪ್ರಸಿದ್ಧರಾಗಿದ್ದರೂ, ಈ ಬಾರಿ ಅವರು ಹೊಸದನ್ನು ಮಾಡುವುದನ್ನು ಕಾಣಬಹುದು.ಮುಂದಿನ ದಿನಗಳಲ್ಲಿ ಅಕ್ಷಯ್ ಖಳನಾಯಕನಾಗಿ ಕಾಣಿಸಿಕೊಳ್ಳಲಿದ್ದಾರೆ. ಅವರ 'ಹೈವಾನ್' ಚಿತ್ರಕ್ಕಾಗಿ ಸಿದ್ಧತೆಗಳು ನಡೆಯುತ್ತಿವೆ. ಏತನ್ಮಧ್ಯೆ, ಅಕ್ಷಯ್ ಮಹಾರಾಷ್ಟ್ರದ ರಾಜಧಾನಿ ಮುಂಬೈನಲ್ಲಿ ನಡೆದ FICCI ಫ್ರೇಮ್ಸ್ 2025 ನಲ್ಲಿ ಭಾಗವಹಿಸಿದ್ದರು.



ಈ ಕಾರ್ಯಕ್ರಮದಲ್ಲಿ,ಅಕ್ಷಯ್ ಅನೇಕ ವಿಷಯಗಳ ಬಗ್ಗೆ ಮಾತನಾಡಿದರು ಮತ್ತು ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಿದರು. ಅಕ್ಷಯ್ ಸಮಾರಂಭದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರನ್ನು ಭೇಟಿಯಾದರು ಮತ್ತು ಅವರೊಂದಿಗೆ ವಿಶೇಷ ಸಂಭಾಷಣೆ ನಡೆಸಿದರು. ಅಕ್ಷಯ್ ತಮ್ಮ ಮುಂಬರುವ ಚಿತ್ರ 'ಹೈವಾನ್' ನಲ್ಲಿನ ತನ್ನ ಖಳನಾಯಕನ ಪಾತ್ರದ ಬಗ್ಗೆ ಸಿಎಂ ಫಡ್ನವಿಸ್ ಅವರೊಂದಿಗೆ ಚರ್ಚಿಸಿದರು.

ಈ ಬಾರಿ ವಿಭಿನ್ನ ಪಾತ್ರದಲ್ಲಿ ನಟಿಸಿ ಅಭಿಮಾನಿಗಳನ್ನು ಅಚ್ಚರಿಗೊಳಿಸಲು ಬಯಸುತ್ತೇನೆ ಎಂದು ಅಕ್ಷಯ್ ಕುಮಾರ್‌ಹೇಳಿದರು. ಈ ಕಾರ್ಯಕ್ರಮದಲ್ಲಿ, ಖಿಲಾಡಿ ಕುಮಾರ್,'ನಾನು ಖಳನಾಯಕನ ಪಾತ್ರವನ್ನು ನಿರ್ವಹಿಸುವ ಚಿತ್ರವನ್ನು ಮಾಡುತ್ತಿದ್ದೇನೆ. ನಾನು ಅದನ್ನು ಮಾಡಬೇಕೇ ಅಥವಾ ಬೇಡವೇ ಎಂದು ಯೋಚಿಸುತ್ತಿದ್ದೆ. ಚಿತ್ರದ ಹೆಸರು 'ಹೈವಾನ್',ಆದರೆ ಕೊನೆಯಲ್ಲಿ,ನಾನು ಸೋಲುತ್ತೇನೆ ಮತ್ತು ಖಳನಾಯಕ ಸೋಲುತ್ತಾನೆ.' ಏತನ್ಮಧ್ಯೆ,ಮಹಾರಾಷ್ಟ್ರ ಮುಖ್ಯಮಂತ್ರಿ ಫಡ್ನವೀಸ್, 'ನೀವು ಖಂಡಿತವಾಗಿಯೂ ಅದನ್ನು ಮಾಡಬೇಕು. ನಿಮ್ಮಂತಹ ಬಹುಮುಖ ನಟ ಖಂಡಿತವಾಗಿಯೂ ಅಂತಹ ಪಾತ್ರಗಳನ್ನು ನಿರ್ವಹಿಸಬೇಕು' ಎಂದು ಹೇಳಿದರು.'ಯಾವುದೇ ನಟರು ತಮ್ಮ ಪಾತ್ರ ಗಳು ವಿಶಿಷ್ಟವಾದಾಗ ಮಾತ್ರ ಬೆಳೆಯುತ್ತಾರೆ.ಅಂತಿಮವಾಗಿ,ಖಳನಾಯಕ ಸೋಲುತ್ತಾನೆ,ಆದರೆ ಆ ಪಾತ್ರವು ನಾಯಕನಿಗಿಂತ ಜನರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಅದು ಸೃಜನಶೀಲತೆ.ಆದರೆ ನೀವು ನಾಯಕನಾಗಿಯೂ ಚಲನಚಿತ್ರಗಳನ್ನು ಮಾಡಬೇಕು'ಎಂದು ಮುಖ್ಯಮಂತ್ರಿ ಹೇಳಿದರು.

**ಮಲಯಾಳಂ ಚಿತ್ರ 'ಒಪ್ಪಂ' ನ ರಿಮೇಕ್**

ಇದರ ನಂತರ,ಅಕ್ಷಯ್, 'ನಾನು ನಕಾರಾತ್ಮಕ ಪಾತ್ರವನ್ನು ನಿರ್ವಹಿಸಬೇಕೆಂದು ನಾನು ಭಾವಿಸಿದೆ,ಆದ್ದರಿಂದ ನಾನು ಒಪ್ಪಿಕೊಂಡೆ.ನಾನು ಹೆಚ್ಚಾಗಿ ಚಲನಚಿತ್ರಗಳಲ್ಲಿ ನಾಯಕನಾಗಿ ನಟಿಸುತ್ತೇನೆ'ಎಂದು ಹೇಳಿದರು. ಈ ಚಿತ್ರದ ಬಗ್ಗೆ ಮಾತನಾಡುತ್ತಾ, ಮುಂಬರುವ 'ಹೈವಾನ್' ಚಿತ್ರದಲ್ಲಿ 17ವರ್ಷಗಳ ನಂತರ ನಟ ಸೈಫ್ ಅಲಿ ಖಾನ್ ಎದುರು ಅಕ್ಷಯ್ ಕಾಣಿಸಿಕೊಳ್ಳಲಿದ್ದಾರೆ. ಪ್ರಿಯದರ್ಶನ್ ನಿರ್ದೇಶನದ ಈ ಚಿತ್ರವು 2016 ರಲ್ಲಿ ಬಿಡುಗಡೆಯಾದ ಮಲಯಾಳಂ ಚಿತ್ರ 'ಒಪ್ಪಂ'ನ ರಿಮೇಕ್ ಆಗಿದ್ದು,ಈ ಚಿತ್ರದಲ್ಲಿ ಪ್ರಿಯದರ್ಶನ್ ಕೂಡ ನಟಿಸಿದ್ದಾರೆ. ಮೋಹನ್ ಲಾಲ್ ಈ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅಕ್ಷಯ್ ಮತ್ತು ಸೈಫ್ ಜೊತೆಗೆ, ನಟಿಯರಾದ ಶ್ರಿಯಾ ಪಿಲ್ಗಾಂವ್ಕರ್‌ಮತ್ತು ಬೋಮನ್ ಇರಾನಿ ಕೂಡ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

## ಸೂರಜ್ ಬರ್ಜಾತ್ಯ ಮತ್ತು ಧರ್ಮ ಪ್ರೊಡಕ್ಷನ್ಸ್‌ನ ಮುಂದಿನ ಚಿತ್ರವನ್ನು ದೃಢಪಡಿಸಿದ ಆಯುಷ್ಮಾನ್ ಖುರಾನಾ

ಆಯುಷ್ಮಾನ್ ಖುರಾನಾ ಅವರು FICCI ಫ್ರೇಮ್ಸ್ 2025 ರ ಬೆಳ್ಳಿ ಮಹೋತ್ಸವ ಆವೃತ್ತಿಯ ಮೊದಲ ದಿನದಂದು ಪತ್ರಕರ್ತ ಮಯಾಂಕ್ ಶೇಖರ್‌ಅವರೊಂದಿಗೆ ಮುಂಬೈನ ಪಂಚತಾರಾ ಹೋಟೆಲ್‌ನಲ್ಲಿ ತಮ್ಮ ಚಲನಚಿತ್ರಗಳ ಆಯ್ಕೆ ಮತ್ತು ಇನ್ನೂ ಹೆಚ್ಚಿನವುಗಳ ಕುರಿತು ಆಸಕ್ತಿದಾಯಕ ಸಂವಾದ ನಡೆಸಿದರು. ಆಯುಷ್ಮಾನ್ ಅವರ 'ಹೈಬ್ರಿಡ್ ಚಲನಚಿತ್ರಗಳ', ಬಗ್ಗೆ ಕೇಳಿದಾಗ ಆಸಕ್ತಿದಾಯಕ ಉತ್ತರವನ್ನು ನೀಡಿದರು.



ಆಯುಷ್ಮಾನ್ ಖುರಾನಾ ಹೇಳಿದರು, 'ನಾನು ಮೊದಲ ದಿನದಿಂದಲೇ ಹೈಬ್ರಿಡ್ ಚಲನಚಿತ್ರಗಳನ್ನು ಮಾಡಿದ್ದೇನೆ. ಅದು 'ವಿಕಿ ಡೋನರ್' ಆಗಿರಲಿ ಅಥವಾ 'ದಮ್ ಲಗಾ ಕೆ ಹೈಶಾ' ಅಥವಾ 'ಶುಭ್ ಮಂಗಲ್' ಸರಣಿಯಾಗಿರಲಿ ಅದು ನನ್ನ ಮುಖ್ಯ ಪಾತ್ರವಾಗಿತ್ತು. ನೀವು ನನ್ನ ದೃಷ್ಟಿಯಲ್ಲಿ ನೋಡಿದಾಗ ಅಪಾಯ -ಪ್ರತಿಫಲ ಅನುಪಾತವು ತುಂಬಾ ಭಿನ್ನವಾಗಿರುತ್ತದೆ ,ಏಕೆಂದರೆ ಈ ಚಲನಚಿತ್ರಗಳು ತುಂಬಾ ದುಬಾರಿಯಾಗಿಲ್ಲ. ಅವು ಕಡಿಮೆ ಬಜೆಟ್‌ನಿಂದ ಮಧ್ಯಮ ಬಜೆಟ್ ಚಿತ್ರಗಳಾಗಿವೆ ಮತ್ತು ಹೆಚ್ಚಿನ ವಿಷಯವನ್ನು ಹೊಂದಿವೆ. ನಾನು ಬೀದಿ ರಂಗಭೂಮಿ ಹಿನ್ನೆಲೆಯಿಂದ ಬಂದಿರುವುದರಿಂದ ಅದು ನಿಮಗೆ ವಿಭಿನ್ನವಾದ ಉನ್ನತಿಯನ್ನು ನೀಡುತ್ತದೆ. ಚಂಡೀಗಢದಲ್ಲಿ ಬೀದಿ ನಾಟಕಗಳನ್ನು ಮಾಡುವಾಗ, ನಾವು ಸಾಮಾಜಿಕ ಸಮಸ್ಯೆಗಳ ಮನರಂಜನೆಯನ್ನು ಬೆರೆಸುತ್ತಿದ್ದೆವು. ಇದು ನನ್ನ ರಂಗಭೂಮಿ ವ್ಯಕ್ತಿತ್ವದ ವಿಸ್ತರಣೆಯಂತೆ ತೋರುತ್ತದೆ.

' ಮನರಂಜನೆಯ ಅಂಶವು ಯಾವಾಗಲೂ ಸಂದೇಶ ಕಳುಹಿಸುವಿಕೆಯನ್ನು ಮೀರಿಸಬೇಕು. ಪ್ರೇಕ್ಷಕರು 'ಬಚ್ಚೆ ಕಿ ತರಹ್ ಹೋತಿ ಹೈ. ಉಂಕೋ ಮೀಠಿ ಗೋಲಿ ದೇನಿ ಪಡ್ತಿ ಹೈ ದವಾಯಿ ಕಿ. ದವಾಯಿ ಕಡ್ವಿ ಲಗೇಗಿ ತೋ ಮಜಾ ನಹಿನ್ ಆಯೇಗಾ!' ಮನರಂಜನೆಯೊಂದಿಗೆ ಸೂಕ್ಷ್ಮ ಸಂದೇಶ ಕಳುಹಿಸುವುದು ಅತ್ಯಂತ ಮುಖ್ಯ' ಎಂದು ಅವರು ಹೇಳಿದರು.


ಕೊರೋನಾ ಪೂರ್ವ ಮತ್ತು ಕೊರೋನಾ ನಂತರದ ಸಿನಿಮಾಗಳಲ್ಲಿ ವ್ಯತ್ಯಾಸವಿದೆಯೇ? ಆಯುಷ್ಮಾನ್, 'ಈ ವಿಷಯದ ಬಗ್ಗೆ ನಾವು ಅರ್ಧ ದಶಕದಿಂದ ಈ ಚರ್ಚೆಯನ್ನು ನಡೆಸುತ್ತಿದ್ದೇವೆ. ಒಳ್ಳೆಯ ಸ್ಕ್ರಿಪ್ಟ್ ಒಳ್ಳೆಯ ಸ್ಕ್ರಿಪ್ಟ್ ಎಂದು ನಾನು ನಿಜವಾಗಿಯೂ ನಂಬುತ್ತೇನೆ. ಅದೇ ಸಮಯದಲ್ಲಿ, ನಾನು ಸಾಂಕ್ರಾಮಿಕ ನಂತರದ ಬದಲಾವಣೆಗಳನ್ನು ಮಾಡಿದ್ದೇನೆ. ಸಾಂಕ್ರಾಮಿಕಪೂರ್ವದ ನನ್ನ ಆಯ್ಕೆಗಳು ಹೆಚ್ಚು ನಿಷೇಧ ಆಧಾರಿತವಾಗಿದ್ದವು. ನಾನು ನಿಷೇಧದಿಂದ ಸ್ವಲ್ಪ ದೂರವಿದ್ದೇನೆ, ಆದರೆ ವಿಚಿತ್ರತೆಯಿಂದ ಅಲ್ಲ. ಆದ್ದರಿಂದ, ಅದು ದೊಡ್ಡ ಪ್ಯಾಲೆಟ್‌ಗಾಗಿ, ಹೆಚ್ಚು ಬೇರೂರಿರುವ, ಹೆಚ್ಚು ವಾಣಿಜ್ಯಿಕವಾಗಿರಬೇಕು.'

'ನನ್ನ ಲೈನ್ ಅಪ್ ಬಗ್ಗೆ ಹೇಳುವುದಾದರೆ, 'ಥಮಾ' ನನ್ನ ಮೊದಲ, ದೊಡ್ಡ ದೀಪಾವಳಿ ಬಿಡುಗಡೆ. ಅದರ ನಂತರ ಸೂರಜ್ ಬರ್ಜಾತ್ಯ ಅವರ ಚಿತ್ರ ಬಿಡುಗಡೆಯಾಗಲಿದೆ, ಅದು ಮತ್ತೆ ವಿಶಾಲ ಪ್ರೇಕ್ಷಕರಿಗಾಗಿ. ನಂತರ ನಾನು ಧರ್ಮ ಚಿತ್ರವನ್ನೂ ಮಾಡುತ್ತಿದ್ದೇನೆ, ಅದು ವಿಶಾಲ ಪ್ರೇಕ್ಷಕರಿಗಾಗಿ ಎಂದಿದ್ದಾರೆ.

ರಾಜಶ್ರೀ ಪ್ರೊಡಕ್ಷನ್ಸ್ ಮತ್ತು ಧರ್ಮ ಪ್ರೊಡಕ್ಷನ್ಸ್‌ನ ಮುಂದಿನ ಚಿತ್ರಕ್ಕೆ ಸಹಿ ಹಾಕಿದ್ದೇನೆ ಎಂದು ಆಯುಷ್ಮಾನ್ ಖುರಾನಾ ದೃಢಪಡಿಸಿದ್ದು ಇದೇ ಮೊದಲು.

## ಮಹೇಶ್ ಬಾಬು ಸಿನಿಮಾಕ್ಕೆ ಬ್ರೇಕ್,ಮತ್ತೆ 'ಬಾಹುಬಲಿ'ಗೆ ಕೈ ಹಾಕಿದ ರಾಜಮೌಳಿ

ಪ್ಯಾನ್ ವರ್ಲ್ಡ್ ನಿರ್ದೇಶಕ ಎಸ್‌ಎಸ್ ರಾಜಮೌಳಿ ಪ್ರಸ್ತುತ ಮಹೇಶ್ ಬಾಬು ಮತ್ತು ಪ್ರಿಯಾಂಕಾ ಚೋಪ್ರಾ ನಟನೆಯ ಹೊಸ ಸಿನಿಮಾದ ನಿರ್ದೇಶನದಲ್ಲಿ ತೊಡಗಿದ್ದಾರೆ.ಹೈದರಾಬಾದ್, ರಾಜಸ್ಥಾನ,ಅಸ್ಸಾಂ,ಕೀನ್ಯಾಗಳಲ್ಲಿ ಸಿನಿಮಾದ ಚಿತ್ರೀಕರಣವನ್ನು ರಾಜಮೌಳಿ ಮುಗಿಸಿದ್ದಾರೆ.ಇತ್ತೀಚೆಗಷ್ಟೆ ಕೀನ್ಯಾ, ನೈರೋಬಿ ಇನ್ನಿತರೆ ದೇಶಗಳಲ್ಲಿ ಚಿತ್ರೀಕರಣ ಮುಗಿಸಿ ಮರಳಿ ಬಂದಿರುವ ರಾಜಮೌಳಿ, ಹಠಾತ್ತನೆ ಮಹೇಶ್ ಬಾಬು ಸಿನಿಮಾಕ್ಕೆ ಬ್ರೇಕ್ ಕೊಟ್ಟಿದ್ದು, ಮತ್ತೆ 'ಬಾಹುಬಲಿ' ಸಿನಿಮಾಗೆ ಕೈ ಹಾಕಿದ್ದಾರೆ.




'ಬಾಹುಬಲಿ' ಸಿನಿಮಾ ಬಿಡುಗಡೆ ಆಗಿ 10 ವರ್ಷಗಳಾಗಿವೆ.ಇಡೀ ಭಾರತೀಯ ಚಿತ್ರರಂಗದ ದಿಕ್ಕನ್ನೇ ಬದಲಿಸಿದ ಸಿನಿಮಾ ಅದು.ರಾಜಮೌಳಿ ನಿರ್ದೇಶನದ ಆ ಸಿನಿಮಾ ಭಾರತೀಯ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಸಿನಿಮಾ ಆಗಿದೆ.ಸಿನಿಮಾದ ಎರಡು ಭಾಗಗಳು ಮುಗಿದು ಹೋಗಿದ್ದು,ಕತೆಯೂ ಪೂರ್ಣವಾಗಿದೆ.ಆದರೆ ಇದೀಗ ಮತ್ತೊಮ್ಮೆ ನಿರ್ದೇಶಕ ರಾಜಮೌಳಿ 'ಬಾಹುಬಲಿ' ಸಿನಿಮಾಕ್ಕೆ ಕೈ ಹಾಕಿದ್ದಾರೆ.ಅದೂ ಮಹೇಶ್ ಬಾಬು ಸಿನಿಮಾಕ್ಕೆ ಬ್ರೇಕ್ ನೀಡಿ.

ಅಸಲಿಗೆ 'ಬಾಹುಬಲಿ' ಸಿನಿಮಾ ಬಿಡುಗಡೆ ಆಗಿ ಹತ್ತು ವರ್ಷಗಳಾದ ಕಾರಣ ಸಿನಿಮಾವನ್ನು ಮರು ಬಿಡುಗಡೆ ಮಾಡಲಾಗುತ್ತಿದೆ.ಎಲ್ಲರಿಗೂ ಗೊತ್ತಿರುವಂತೆ 'ಬಾಹುಬಲಿ' ಸಿನಿಮಾ ಎರಡು ಭಾಗದಲ್ಲಿ ಬಿಡುಗಡೆ ಆಗಿತ್ತು. 2015ರಲ್ಲಿ ಒಂದು ಹಾಗೂ 2017ರಲ್ಲಿ ಮತ್ತೊಂದು ಸಿನಿಮಾ ಬಿಡುಗಡೆ ಆಗಿತ್ತು.ಎರಡೂ ಸಿನಿಮಾಗಳು ಬ್ಲಾಕ್ ಬಸ್ಟರ್ ಆಗಿದ್ದವು.ಇದೀಗ ಈ ಸಿನಿಮಾ ಮರು ಬಿಡುಗಡೆ ಆಗುತ್ತಿದ್ದು,ಎರಡು ಸಿನಿಮಾಗಳ ಬದಲಾಗಿ ಒಂದೇ ಸಿನಿಮಾ ಆಗಿ ಮರು ಬಿಡುಗಡೆ ಆಗಲಿರುವುದು ವಿಶೇಷ.

ಅಕ್ಟೋಬರ್ 31ರಂದು 'ಬಾಹುಬಲಿ:ದಿ ಎಪಿಕ್' ಹೆಸರಿನಲ್ಲಿ 'ಬಾಹುಬಲಿ'ಸಿನಿಮಾದ ಎರಡೂ ಭಾಗಗಳು ಒಂದೇ ಸಿನಿಮಾ ಆಗಿ ಬಿಡುಗಡೆ ಆಗಲಿದೆ. 'ಬಾಹುಬಲಿ' ಸಿನಿಮಾದ ಎರಡು ಭಾಗಗ ಳನ್ನು ಒಂದೇ ಭಾಗ ವನ್ನಾಗಿ ಮಾಡುವ ಕಾರ್ಯದಲ್ಲಿ ಇದೀಗ ರಾಜಮೌಳಿ ತೊಡಗಿಕೊಂಡಿದ್ದಾರೆ.

'ಬಾಹುಬಲಿ:ದಿ ಬಿಗಿನಿಂಗ್' ಮತ್ತು 'ಬಾಹುಬಲಿ:ದಿ ಕನ್‌ಕ್ಲೂಷನ್' ಎರಡೂ ಸಿನಿಮಾಗಳು ಸೇರಿ ಐದು ಗಂಟೆಗೂ ಹೆಚ್ಚು ಅವಧಿ ಆಗುತ್ತದೆ.ಆದರೆ ಇದೀಗ ರಾಜಮೌಳಿ ಅವರು ಎಡಿಟಿಂಗ್ ಜವಾಬ್ದಾರಿ ವಹಿಸಿಕೊಂಡು ಸಿನಿಮಾದ ಅವಧಿಯನ್ನು 3:30 ಗಂಟೆಗೆ ಇಳಿಸುತ್ತಿದ್ದಾರೆ.

'ಬಾಹುಬಲಿ' ಸಿನಿಮಾಗಳನ್ನು ಕೋಟಗಿರಿ ವೆಂಕಟೇಶ್ವರ ರಾವ್ ಅವರು ಸಂಕಲನ ಮಾಡಿದ್ದರು. ಇದೀಗ ರಾಜಮೌಳಿ ಅವರು ಇತರೆ ಸಂಕಲನಕಾರರ ಸಹಾಯದೊಂದಿಗೆ ಎರಡೂ ಸಿನಿಮಾಗಳ ಹಲವು ದೃಶ್ಯಗಳನ್ನು ತೆಗೆದು,ಕೆಲವು ವಾಯ್ಸ್ ಓವರ್‌ಗಳನ್ನು ಸೇರಿಸಿ,ಹಾಡುಗಳನ್ನು ತೆಗೆದು ಒಟ್ಟಾರೆಯಾಗಿ 3:30 ನಿಮಿಷಕ್ಕೆ ಇಳಿಸಿದ್ದಾರೆ. ಸಿನಿಮಾಕ್ಕೆ ಬಾಹುಬಲಿ: ದಿ ಎಪಿಕ್ ಎಂದು ಹೆಸರಿಡಲಾಗಿದ್ದು, ಸಿನಿಮಾ ಅಕ್ಟೋಬರ್31ರಂದು ಬಿಡುಗಡೆ ಆಗಲಿದೆ.

## ಮತ್ತೊಂದು ರಣಬೀರ್-ವಿಕಿ ಘರ್ಷಣೆ! ಆಲಿಯಾ ಭಟ್‌ರ ಮುಂದಿನ ದೊಡ್ಡ ಚಿತ್ರದಲ್ಲಿ ಯಾರು ನಟಿಸಲಿದ್ದಾರೆ?

ರಣಬೀರ್ ಕಪೂರ್ ಮುಂದಿನ ವರ್ಷ ಲವ್ ಅಂಡ್ ವಾರ್‌ಎಂಬ ದೊಡ್ಡ ಚಿತ್ರದೊಂದಿಗೆ ಮರಳಲಿದ್ದಾರೆ.ಈದ್‌ಗೆ ಬಿಡುಗಡೆಯಾಗುವ ಈ ಚಿತ್ರವು ಯಶ್ ಅವರ ಟಾಕ್ಸಿಕ್‌ನೊಂದಿಗೆ ಘರ್ಷಣೆಯಾಗಲಿದೆ.ಸಂಜಯ್ ಲೀಲಾ ಬನ್ಸಾಲಿ ಅವರ ಚಿತ್ರದಲ್ಲಿ ರಣಬೀರ್ ಕಪೂರ್ ಮತ್ತು ವಿಕ್ಕಿ ಕೌಶಲ್ ಮುಖಾಮುಖಿಯಾಗಲಿದ್ದಾರೆ.ಇಬ್ಬರಿಗಾಗಿ ಕೆಲವು ಪ್ರಭಾವಶಾಲಿ ಆಕ್ಷನ್ ದೃಶ್ಯಗಳನ್ನು ಯೋಜಿಸಲಾಗಿದೆ, ಅವುಗಳಲ್ಲಿ ಕೆಲವು ಈಗಾಗಲೇ ಚಿತ್ರೀಕರಣಗೊಂಡಿವೆ, ಇನ್ನು ಕೆಲವು ಶೀಘ್ರದಲ್ಲೇ ಪೂರ್ಣಗೊಳ್ಳಲಿವೆ. ಈಗ, ಆಲಿಯಾ ಭಟ್ ಅವರ ದೊಡ್ಡ ಚಿತ್ರದ ಕುರಿತು ನವೀಕರಣ ಬಂದಿದೆ.ಆಲಿಯಾ ಕೂಡ ಬನ್ಸಾಲಿ ಅವರ ಚಿತ್ರದ ಭಾಗವಾಗಿದ್ದಾರೆ. ಆದರೆ ಹೊಸ ಚಿತ್ರದಲ್ಲಿ ರಣಬೀರ್‌ಮತ್ತು ವಿಕ್ಕಿ ಜೊತೆಗೆ ಯಾರು ನಟಿಸಲಿದ್ದಾರೆ?

'ಲವ್ ಅಂಡ್ ವಾರ್' ಚಿತ್ರದಲ್ಲಿ ರಣಬೀರ್ ಕಪೂರ್ ಮತ್ತು ವಿಕ್ಕಿ ಕೌಶಲ್ ಒಟ್ಟಿಗೆ ಕಾಣಿಸಿಕೊಳ್ಳಲಿದ್ದರೆ, ಆಲಿಯಾ ಅವರ ಹೊಸ ಚಿತ್ರದಲ್ಲಿ ಅವರು ಪೈಪೋಟಿ ನಡೆಸಲಿದ್ದಾರೆ.ಈ ಪಾತ್ರಕ್ಕೆ ಯಾವ ನಟನನ್ನು ಅಂತಿಮಗೊಳಿಸಿದರೂ ಅವರು ಆಲಿಯಾ ಅವರ ಎದುರು ನಟಿಸುತ್ತಾರೆ. 'ರಾಕಿ ಔರ್‌ರಾಣಿ ಕಿ ಪ್ರೇಮ್ ಕಹಾನಿ' ನಂತರ, ಕರಣ್ ಜೋಹರ್ ತಮ್ಮ ಮುಂದಿನ ಚಿತ್ರಕ್ಕೆ ಸಂಪೂರ್ಣವಾಗಿ ಸಿದ್ಧರಾಗಿದ್ದಾರೆ ಮತ್ತು ನವೀಕರಣ ಬಂದಿದೆ.



**ಆಲಿಯಾ ಅವರ ಮುಂದಿನ ಚಿತ್ರದಲ್ಲಿ ಯಾರು ನಟಿಸಲಿದ್ದಾರೆ?**

ಕರಣ್ ಜೋಹರ್ ಅವರ ಮುಂದಿನ ಚಿತ್ರದಲ್ಲಿ ಆಲಿಯಾ ಭಟ್ ನಾಯಕಿಯಾಗಲಿದ್ದಾರೆ ಎಂದು ಇತ್ತೀಚೆಗೆ ಸುದ್ದಿ ವೆಬ್‌ಸೈಟ್ ವರದಿಯೊಂದನ್ನು ಪ್ರಕಟಿಸಿದೆ. ಆದರೆ ಪ್ರಶ್ನೆಯೆಂದರೆ, ಅವರ ಎದುರು ಯಾರು ನಟಿಸಲಿದ್ದಾರೆ? ಪ್ರಸ್ತುತ,ಚಿತ್ರಕ್ಕಾಗಿ ಸಂಪರ್ಕಿಸಲಾದ ಇಬ್ಬರು ನಟರೊಂದಿಗೆ ಮಾತುಕತೆ ನಡೆಯುತ್ತಿದೆ.ಒಬ್ಬರು ರಣಬೀರ್ ಕಪೂರ್, ಇನ್ನೊಬ್ಬರು ವಿಕ್ಕಿ ಕೌಶಲ್. ಈ ಇಬ್ಬರು ನಟರಲ್ಲಿ ಒಬ್ಬರು ಚಿತ್ರಕ್ಕೆ ಅಂತಿಮಗೊಳ್ಳುತ್ತಾರೆ, ಯಾರು ನಾಯಕ ನಟನಾಗಿ ನಟಿಸುತ್ತಾರೆ ಎಂಬ ಮಾತು ಕೇಳಿಬರುತ್ತಿದೆ.ಈ ಬಾರಿಯ ವಿಶೇಷವೆಂದರೆ ಈ ಮೂವರು ನಟರು ಬನ್ಸಾಲಿ ಅವರ ಚಿತ್ರದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ.

**ಅವರು ವಿಕ್ಕಿ ಜೊತೆ ಕೆಲಸ ಮಾಡಿದ್ದಾರೆ**

ವಾಸ್ತವವಾಗಿ, ವಿಕ್ಕಿ ಕೌಶಲ್ ಅವರನ್ನು ಆಲಿಯಾ ಭಟ್ ಅವರ ಚಿತ್ರಕ್ಕೆ ಅಂತಿಮಗೊಳಿಸಿದರೆ,ಅದು ಅವರ ಮೂರನೇ ಸಹಯೋಗವಾಗಿರುತ್ತದೆ,ಏಕೆಂದರೆ ಅವರು ಮೊದಲು 'ರಾಝಿ'ಯಲ್ಲಿ ಒಟ್ಟಿಗೆ ಕಾಣಿಸಿಕೊಂಡರು. ಅದರ ನಂತರ, ಅವರು ಎರಡನೇ ಬಾರಿಗೆ 'ಲವ್ ಅಂಡ್ ವಾರ್'ನಲ್ಲಿ ಒಟ್ಟಿಗೆ ಕಾಣಿಸಿಕೊಳ್ಳಲಿದ್ದಾರೆ. ಆದಾಗ್ಯೂ,ಈಗ ಮೂರನೇ ಚಿತ್ರದ ಬಗ್ಗೆ ಚರ್ಚೆಗಳು ನಡೆಯುತ್ತಿವೆ.

**ರಣಬೀರ್‌ಅವರನ್ನು ಅಂತಿಮಗೊಳಿಸಲಾಗುತ್ತದೆಯೇ?**

ಬ್ರಹ್ಮಾಸ್ತ್ರವು ರಣಬೀರ್‌ಕಪೂರ್‌ಮತ್ತು ಆಲಿಯಾ ಭಟ್ ಅವರ ಮೊದಲ ಚಿತ್ರವಾಗಿದ್ದು, ಇದರಲ್ಲಿ ಅವರು ಮೊದಲ ಬಾರಿಗೆ ಒಟ್ಟಿಗೆ ಕಾಣಿಸಿಕೊಂಡಿದ್ದಾರೆ.ಕರಣ್ ಜೋಹರ್ ಅವರಿಂದ ಈ ಚಿತ್ರ ಸಿಕ್ಕರೆ,ಅದು ಅವರ ಮೂರನೇ ಸಹಯೋಗವಾಗಿರುತ್ತದೆ.ಆದಾಗ್ಯೂ,ಬ್ರಹ್ಮಾಸ್ತ್ರ 2ರಲ್ಲಿ ಅವರು ಮತ್ತೆ ಒಟ್ಟಿಗೆ ಕಾಣಿಸಿಕೊಳ್ಳುತ್ತಾರೆ ಎಂಬ ಮಾತು ಕೇಳಿಬರುತ್ತಿದೆ.ಆದರೆ ಅದಕ್ಕೂ ಮೊದಲು, ಈ ಚಿತ್ರದ ಬಗ್ಗೆ ಏನು ಅಂತಿಮಗೊಳಿಸಲಾಗಿದೆ ಎಂಬುದನ್ನು ನಾವು ನೋಡಬೇಕಾಗಿದೆ.

# ಕನ್ನಡ ಸೇವಾ ಸಂಘ ಪೊವ್ವಾ: 28ನೇ ವಾರ್ಷಿಕೋತ್ಸವ ಸಮಾರಂಭ ಸಾಧಕರಿಗೆ ಹಾಗೂ ಸೇವಾಕರ್ತರಿಗೆ ಗೌರವಾರ್ಪಣೆ


ಬಾಬಾ ಪ್ರಸಾದ್ ಅರಸ ಅವರನ್ನು ಗೌರವಿಸಿದಾಗ.


ಸುಗುಣಾ ಕೆ. ಶೆಟ್ಟಿಯವರನ್ನು ಗೌರವಿಸಿದಾಗ.


ನ್ಯಾಯವಾದಿ ಆರ್. ಜಿ. ಶೆಟ್ಟಿ ಅವರನ್ನು ಗೌರವಿಸಿದಾಗ.


ಪಾಸ್ಪೋಲಿ ಶಾಲೆಯ ವಿದ್ಯಾರ್ಥಿಗಳನ್ನು ಗೌರವಿಸಿದಾಗ.


ಅಮಿತ್ ಜೆ. ಶೆಟ್ಟಿಯವರನ್ನು ಗೌರವಿಸಿದಾಗ.


ರಾಜೇಂದ್ರ ಶೆಟ್ಟಿ ಹಾಗೂ ಸುರೇಂದ್ರ ಶೆಟ್ಟಿಯವರನ್ನು ಗೌರವಿಸಿದಾಗ.


ಸೋನು ಚಂದ್ರ ಚೌಹಾಣ್ ಅವರನ್ನು ಗೌರವಿಸಿದಾಗ.

**(ಚಿತ್ರ, ವರದಿ : ನವೀನ್ ಕೆ. ಇನ್ನ)**

ಮುಂಬಯಿ, ಅ. 16- ಕನ್ನಡ ಸೇವಾ ಸಂಘ ಪೊವ್ವಾ (ರಿ.) ವಾರ್ಷಿಕೋತ್ಸವ ಸಮಾರಂಭ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ಅ. 12ರ ಆದಿತ್ಯವಾರದಂದು ಸಂಘದ ಕಚೇರಿ ಸೋಲಾರಿಸ್ ನಂ. 1, ಎಲ್ಆ್ಯಂಡ್ಟಿ ಗೇಟ್ ನಂ. 6ರ ಎದುರು, ಸಾಕಿವಿಹಾರ್ ರೋಡ್, ಸಂಘದ ಕಚೇರಿಯ ಆವರಣದಲ್ಲಿ ಹಾಕಲಾದ ದಿ. ಪರಶುರಾಮ್ ಕೇಶವ್ ರಾವ್ ಮಾಟೇಕರ್ ಸ್ಮರಣಾರ್ಥ ರಂಗ ಮಂಟಪದ ವೇದಿಕೆಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಸಂಘದ ವತಿಯಿಂದ ಚಲನಚಿತ್ರ ಹಾಗೂ ರಂಗನಟ ನಿರ್ದೇಶಕ ಬಾಬಾ ಪ್ರಸಾದ್ ಅರಸ, ಸಂಘದಲ್ಲಿ ಅತ್ಯಧಿಕ ಸದಸ್ಯತ್ವ ನೋಂದಣಿ ಮಾಡಿರುವ ಸಂಘದ ಸದಸ್ಯತ್ವ ನೋಂದಣಿ ಸಮಿತಿಯ ಕಾರ್ಯಾಧ್ಯಕ್ಷೆ ಜ್ಯೋತಿ ಆರ್. ಜಿ. ಶೆಟ್ಟಿ ಪರವಾಗಿ ನ್ಯಾಯವಾದಿ ಆರ್. ಜಿ. ಶೆಟ್ಟಿ ಅವರನ್ನು ಹಾಗೂ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಸುಗುಣಾ ಕೆ. ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷ ಅಮಿತ್ ಜೆ. ಶೆಟ್ಟಿ, ಯಕ್ಷಗಾನದ ಪ್ರಾಯೋಜಕರಾದ ಸನ್‌ರಾಜ್ ಕೊರಗೇಟರ್ ಆಡಳಿತ ನಿರ್ದೇಶಕ ರಾಜೇಂದ್ರ ಶೆಟ್ಟಿ ಹಾಗೂ ರವಿರಾಜ್ ಪ್ಯಾಕೇಜಿಂಗ್ ಮಾಲಕ ಸುರೇಂದ್ರ ಶೆಟ್ಟಿ ಅವರನ್ನು ಗೌರವಿಸಲಾಯಿತು.

ಕನ್ನಡ ಮಾಧ್ಯಮ ಶಾಲೆಯಲ್ಲಿ ಎಸ್.ಎಸ್.ಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕವನ್ನು ಪಡೆದಿರುವ ಗುರು ನಾರಾಯಣ ರಾತ್ರಿ ಶಾಲೆಯ ವಿದ್ಯಾರ್ಥಿನಿ ಸೋನು ಚಂದ್ರ ಚವಾಣ್ ಅಲ್ಲದೆ ಪಾಸ್‌ಪೋಲಿ ಕನ್ನಡ ಶಾಲೆಯ ವಿದ್ಯಾರ್ಥಿಗಳನ್ನು ಗೌರವಾಧ್ಯಕ್ಷ ಮಹೇಶ್ ಶೆಟ್ಟಿ ವತಿಯಿಂದ ಬಹುಮಾನವನ್ನು ನೀಡಿ ಗೌರವಿಸಲಾಯಿತು.

ಅಲ್ಲದೆ ನೃತ್ಯ ಕಾರ್ಯಕ್ರಮವನ್ನು ನೀಡಿದ ಮಕ್ಕಳಿಗೆ ಮಹೇಶ್ ಶೆಟ್ಟಿ ಅವರಿಂದ ಬಹುಮಾನವನ್ನು ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಶ್ರೀ ಉಮಾಮಹೇಶ್ವರಿ ದೇವಸ್ಥಾನ ಜೆರಿಮೆರಿ ವೇದಮೂರ್ತಿ ಎಸ್. ಎನ್. ಉಡುಪ, ಕನ್ನಡ ಸೇವಾ ಸಂಘ ಪೊವ್ವಾ ಅಧ್ಯಕ್ಷ ಸಂದೇಶ ಆರ್. ಶೆಟ್ಟಿ ಮೂಡುಬೆಳ್ಳೆ, ಗೌರವಾಧ್ಯಕ್ಷ ಮಹೇಶ್ ಎಸ್ ಶೆಟ್ಟಿ, ಬಂಟರ ಸಂಘ ಮುಂಬಯಿ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ, ಬಂಟರ ಸಂಘ ಎಸ್. ಎಂ. ಶೆಟ್ಟಿ ಶಿಕ್ಷಣ ಸಂಸ್ಥೆ ಪೊವ್ವಾ ಕಾರ್ಯಾಧ್ಯಕ್ಷ ರತ್ನಾಕರ ಶೆಟ್ಟಿ ಮುಂಡ್ಕೂರು, ಚಾಂದಿವಲಿ ವಿಧಾನಸಭಾ ಶಾಸಕ ದಿಲೀಪ್ ಲಾಂಡೆ, ಚಾಂದಿವಲಿ ವಿಭಾಗ ಪ್ರಮುಖ ಶಿವಸೇನಾ ಅಶೋಕ್ ಮಾಟೇಕರ್, ವಾರ್ಡ್ ನಂಬರ್ 156 ಮಾಜಿನಗರ ಸೇವಕ ಶರದ್ ಪವಾರ್, ಬಂಟರ ಸಂಘ ಮುಂಬಯಿ ಅಂಧೇರಿ ಬಾಂದ್ರಾ ಪ್ರಾದೇಶಿಕ ಸಮಿತಿ ಕಾರ್ಯಾಧ್ಯಕ್ಷ ಸೂರಜ್ ಶೆಟ್ಟಿ, ಬಂಟರ ಸಂಘ ಮುಂಬಯಿ ಮಹಿಳಾ ವಿಭಾಗ ಮಾಜಿ ಜೊತೆ ಕಾರ್ಯದರ್ಶಿ ಮನೋರಮಾ ಎನ್ ಬಿ. ಶೆಟ್ಟಿ, ಕನ್ನಡ ಸೇವಾ ಸಂಘ ಪೊವ್ವಾ ಗೌರವ ಪ್ರಧಾನ ಕಾರ್ಯದರ್ಶಿ ಅನಿತಾ ಎಸ್. ಶೆಟ್ಟಿ, ಜೊತೆ ಕಾರ್ಯದರ್ಶಿ ಪ್ರಮೀಳಾ ಡಿ. ಶೆಟ್ಟಿ, ಕೋಶಾಧಿಕಾರಿ ಜಗನ್ನಾಥ್ ಎ. ಶೆಟ್ಟಿ, ಜೊತೆ ಕೋಶಾಧಿಕಾರಿ ಜಯ ಕೆ. ಪೂಜಾರಿ, ಸಾಂಸ್ಕೃತಿಕ ಸಮಿತಿ ಕಾರ್ಯಾಧ್ಯಕ್ಷೆ ಪ್ರಶಾಂತಿ ದಿವಾಕರ್ ಶೆಟ್ಟಿ ಉಪಸ್ಥಿತರಿದ್ದರು.

# ಮಲಾಡ್ ಕುರಾರ್ ಮಹತೋಬಾರ ಶನೀಶ್ವರ ದೇವಸ್ಥಾನದ ಕಾರ್ಯಾಧ್ಯಕ್ಷರಾಗಿ ಸೂರ್ಯಕಾಂತ್ ಜಯ ಸುವರ್ಣ ಆಯ್ಕೆ



ಮುಂಬಯಿ, ಅ.16- ಆರಾಧ್ಯ ಮೂರ್ತಿಯಾದ ಶ್ರೀ ಶನೀಶ್ವರ ದೇವಸ್ಥಾನದ ಧಾರ್ಮಿಕ ಸೇವೆ ಮಾಡುವ ಭಾಗ್ಯ ನಮ್ಮ ಸಂಸಾರಕ್ಕೆ ಪರಮಾತ್ಮನ ಭಕ್ತಿಗೆ ಸಿಕ್ಕಿದ ಮಹಾ ಪ್ರಸಾದವೆಂದು ಭಾವಿಸುತ್ತಾನೆ. ಬಾಲ್ಯದಿಂದಲೂ ಮನೆಯಲ್ಲಿ ಪ್ರತಿ ವರುಷ ಜರಗುವ ಶನಿ ಪೂಜೆ ಮತ್ತು ಪ್ರವಚನ, ತಂದೆ -ತಾಯಿಯರು ಭಕ್ತಿಯಿಂದ ಅರ್ಪಿಸುವ ಸೇವೆಯನ್ನು ನೋಡಿ , ನನ್ನ ಜೀವನದಲ್ಲಿ ಪ್ರತಿ ದಿನ ಮನನ ಮಾಡುತ್ತಾ ಅದನ್ನು ಅನುಸರಿಸುತ್ತಾ ಬಂದವ ನಾನು. ಕಷ್ಟ ಬಂದಾಗ ಕರ್ಮ ಫಲದಾತನಾದ ಶ್ರೀ ಶನೀಶ್ವರನನ್ನು ಬೇಡಿದಾಗ, ನನಗೆ ದಾರಿ ತೋರಿಸಿ ಸುಗಮ ದಾರಿಯನ್ನು ತೋರಿಸಿದ ಆ ಛಾಯಾನಂದನನ ಸೇವೆ ಮಾಡುವ ಸೌಭಾಗ್ಯ ಬಹಳ ಸಂತಸ ತಂದಿದೆ ಎಂದು ಮಲಾಡ್ ಕುರಾರ್ ಮಹಾತೋಬಾರ ಶನೀಶ್ವರ ದೇವಸ್ಥಾನದ ಆಡಳಿತ ಸಮಿತಿಗೆ ನೂತನವಾಗಿ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾದ ಸೂರ್ಯಕಾಂತ್ ಜಯ ಸುವರ್ಣ ನುಡಿದರು.

ಅ.14 ರಂದು ಮಂಗಳವಾರ ಸಾಯಿಲೀಲಾ ಹೋಟೆಲಿನ ಸಭಾಗೃಹದಲ್ಲಿ ನಡೆದ ಸರಳ ಸಮಾರಂದಲ್ಲಿ ಮಾತಾಡುತ್ತಾ, ಮನುಷ್ಯನಿಗೆ ಕಷ್ಟ ಬಂದಾಗ ಅವನಿಗೆ ಶನಿ ಕಾಟ ಎನ್ನುವುದು ವಾಡಿಕೆಯ ಮಾತಾಗಿರಬಹುದು. ನಿಜವಾಗಿಯೂ ಅವನ ಬದುಕನ್ನು ತಿದ್ದಿ ಸರಿ ದಾರಿಯನ್ನು ತೋರಿಸುವ ಹಾಗೂ ಕರ್ಮದ ಅನುಗುಣವಾಗಿ ಫಲವನ್ನು ನೀಡುವ ಕರ್ಮಫಲದಾತ. ಯಾವಾತ ಧರ್ಮದ ದಾರಿಯಲ್ಲಿ ನಡೆಯುತ್ತಾನೋ ಆತನಿಗೆ ಖಂಡಿತವಾಗಿಯೂ ಶನಿ ದೇವರು ಯಾವುದೇ ಸಮಸ್ಯೆಗಳನ್ನು ತಂದೊಡ್ಡುವುದಿಲ್ಲ. ಕಷ್ಟ ಅನ್ನುವುದು ಅದು ನಮ್ಮ ನಮ್ಮ ಕರ್ಮದ ಫ ಲ. ನನಗೆ ಯಾವತ್ತಾದರೂ ಕಷ್ಟ ಅಂದಾಗ ನಾನು ಮೊದಲು ಯೋಚಿಸುವುದು ಪ್ರತ್ಯಕ್ಷ ಯಾ ಪರೋಕ್ಷವಾಗಿ ನನ್ನಿಂದ ಯಾರಿಗಾದರೋ ಕಷ್ಟವಾಗಿದೆಯೋ, ಅದರಿಂದ ನನಗೆ ಕಷ್ಟ ಒದಗಿರಬಹುದೇ , ಸದಾ ದೇವರಲ್ಲಿ ಬೇಡುವುದು ಸನ್ಮಾರ್ಗದ ಜೀವನವನ್ನು ಕೊಡು ಹಾಗೂ ನನ್ನಿಂದ ಇತರರಿಗೆ ತೊಂದರೆ ಆಗದಿರಲಿ ಎಂದು. ಕಳೆದ ಬಾರಿ ವಾರ್ಷಿಕ ಜಾತ್ರೆಗೆ ಬರುವ ಅವಕಾಶ ನನ್ನ ಪಾಲಿಗೆ ದೊರಕಿತು, ಕಳೆದ 52 ವರುಷಗಳಿಂದ ಮಲಾಡ್‌ನಲ್ಲಿ ಧಾರ್ಮಿಕ ಸೇವೆಯನ್ನು ಮಾಡುತ್ತಾ ದೇವಸ್ಥಾನಕ್ಕೆ ದುಡಿದ ನಿಮ್ಮ ಸೇವೆಯನ್ನು ನೋಡಿದಾಗ ನಾನು ನಿಮ್ಮೊಂದಿಗೆ ಬೆರೆತು ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸೋಣ ಹಾಗೂ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದರು.

ದೇವಸ್ಥಾನದ ಪೂಜಾ ಸಮಿತಿಯ ಅಧ್ಯಕ್ಷರಾದ ಶ್ರೀನಿವಾಸ ಸಾಫಲ್ಯರವರು ಮಾತನಾಡುತ್ತಾ, ಸುಮಾರು 1974 ರಲ್ಲಿ ಸ್ಥಾಪನೆಯಾದ ಈ ಭಕ್ತಿ ಕೇಂದ್ರ, 1994 ರಲ್ಲಿ ಜೀರ್ಣೋದ್ಧಾರವಾಯಿತು. ಆ ಸಂಧರ್ಭದಲ್ಲಿ ದಿವಂಗತ ಜಯ ಸುವರ್ಣರವರು ಈ ಜೀರ್ಣೋದ್ಧಾರವಾದ ದೇವಾಲಯವನ್ನು ಉದ್ಘಾಟಿಸಿದರು ಹಾಗೂ ಅವರ ಕೊಡುಗೆಯನ್ನು ನೆನಪಿಸಿದರು. ಈ ದೇವಾಲಯದ ವಿಸ್ತಾರ ಮತ್ತು ಬೆಳವಣಿಗೆಗೆ ಈಗ ಆರಾಧ್ಯ ಮೂರ್ತಿಯಾದ ಶ್ರೀ ಶನಿ ದೇವರು ದಿ.ಜಯ ಸುವರ್ಣರ ಮಗನಾದ ಸೂರ್ಯಕಾಂತ್ ಜಯ ಸುವರ್ಣರನ್ನು ಆಯ್ಕೆ ಮಾಡಿದ್ದಾರೆ. ಇದು ಬಹಳ ಸಂತಸದ ವಿಷಯವಾಗಿದೆ ಹಾಗೂ ಅವರ ಮಾರ್ಗದರ್ಶನದಲ್ಲಿ ಈ ಕ್ಷೇತ್ರ ಅಭಿವೃದ್ಧಿ ಮತ್ತು ಬೆಳವಣಿಗೆಯ ಪಥವನ್ನು ಕಾಣುವಂತಾಗಲಿ ಎಂದು ಶುಭ ಕೋರಿದರು.

ಪೂಜಾ ಸಮಿತಿಯ ಉಪಾಧ್ಯಕ್ಷರಾದ ಪೇತ್ರಿ ವಿಶ್ವನಾಥ ಶೆಟ್ಟಿಯವರು ಮಾತನಾಡುತ್ತಾ, ಸೂರ್ಯಕಾಂತ್ ಜೆ. ಸುವರ್ಣ ಅವರು ನಮ್ಮ ಸಂಸ್ಥೆಗೆ ಕಾರ್ಯಾಧ್ಯಕ್ಷರಾಗಿ ಆಯ್ಕೆ ಆಗಿರುವುದು ನಮ್ಮ ಭಾಗ್ಯ. ಸುವರ್ಣರವರ ಪಾಲಿಗೆ ಇದು ಸೌಭಾಗ್ಯ ಅಂತೆಣಿಸುವೆ ಎಂದರು. ಅವರೊಂದಿಗೆ ನಾವು ಒಮ್ಮತದ ಸಹಾಯ ಸಹಕಾರ್ಯದೊಂದಿಗೆ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

ರತಿಕಾ ಶ್ರೀನಿವಾಸ ಸಾಫಲ್ಯ ಮಾತನಾಡುತ್ತಾ ,ಸೂರ್ಯಕಾಂತ್ ಸುವರ್ಣ ಅವರ ಒಪ್ಪಿಗೆ ನಮಗೆ ಬಲಬಂದಂತಾಗಿದೆ, ಅವರ ಬಿಡುವಿಲ್ಲದ ಸಮಯದಲ್ಲೂ ನಮ್ಮ ಸಮಿತಿಯ ಅಧಿಕಾರ ಸ್ವೀಕರಿಸಿರುವುದು ನಮ್ಮ ಭಾಗ್ಯ ಎಂದು ಅವರಿಗೆ ಕೃತಜ್ಞತೆ ತಿಳಿಸಿದರು.

ಅಧ್ಯಕ್ಷರಾದ ಶ್ರೀನಿವಾಸ್ ಸಾಫಲ್ಯರು ದೇವಸ್ಥಾನದ ಕಾರ್ಯಾಧ್ಯಕ ನೇಮಕ ಪತ್ರವನ್ನು ಸೂರ್ಯಕಾಂತ ಜಯ ಸುವರ್ಣ ಅವರಿಗೆ ಹಸ್ತಾಂತರಿಸಿದರು ಹಾಗೂ ದೇವಸ್ಥಾನದ ವತಿಯಿಂದ ಶಾಲು, ದೇವರ ಬೆಳ್ಳಿಯ ಪ್ರತಿಮೆ ಹಾಗೂ ಹೂಗುಚ್ಛ ಮುಖೇನ ಸತ್ಕರಿಸಲಾಯಿತು.

ಈ ಸರಳ ಕಾರ್ಯಕ್ರಮದಲ್ಲಿ ಶ್ರೀ ಶನಿ ಮಹಾತ್ಮಾ ಪೂಜಾ ಸಮಿತಿಯ ಅಧ್ಯಕ್ಷರಾದ ಶ್ರೀನಿವಾಸ ಸಾಫಲ್ಯ, ಉಪಾಧ್ಯಕ್ಷರಾದ ಪೇತ್ರಿ ವಿಶ್ವನಾಥ ಶೆಟ್ಟಿ, ಉಪಾಧ್ಯಕ್ಷ ರಮೇಶ ಆಚಾರ್ಯ, ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಪ್ರಭಾಕರ ಶೆಟ್ಟಿ, ಕಾರ್ಯದರ್ಶಿ ಸಂತೋಷ್ ಶೆಟ್ಟಿ, ಕೋಶಾಧಿಕಾರಿ ಹರೀಶ್ ಜೆ ಸಾಲ್ಯಾನ್ , ಮಹಿಳಾ ವಿಭಾಗದ ಅಧ್ಯಕ್ಷೆ ಶೀತಲಾ ಆನಂದ ಕೋಟ್ಯಾನ್, ಸಮಿತಿಯ ಜೊತೆ ಕಾರ್ಯದರ್ಶಿ ಶಾಲಿನಿ ಶೆಟ್ಟಿ, ಆನಂದ ಕೋಟ್ಯಾನ್ ಮುಂತಾದವರು ಉಪಸ್ಥಿತರಿದ್ದರು.

# ಭಾರತೀಯ ಜನತಾ ಪಾರ್ಟಿ ನವಿಮುಂಬಯಿ ಘಟಕ

## ಐರೋಲಿ ದಕ್ಷಿಣ ವಲಯದ ಅಧ್ಯಕ್ಷರಾಗಿ ಹಾಗೂ ಮಂಡಲ ಅಧ್ಯಕ್ಷರಾಗಿ ಹರೀಶ್ ಪೂಜಾರಿ ಆಯ್ಕೆ





ನವಿಮುಂಬಯಿ, ಅ. 16- ಐರೋಲಿ-ಥಾಣೆಯ ಹೊಟೇಲ್ ಉದ್ಯಮಿ ಹರೀಶ್ ಪೂಜಾರಿಯವರನ್ನು ಐರೋಲಿ ಸೆಕ್ಟರ್ 5ರ ಸಂತ ಸವತ ಮಾಳಿ ಹಾಲ್‌ನಲ್ಲಿ ಸೆ. 28ರ ನವರಾತ್ರಿ ಪ್ರಯುಕ್ತ ಪ್ರಧಾನ ಮಂತ್ರಿ ಮೋದಿಯವರ 'ಮನ್-ಕಿ-ಬಾತ್'ನ 126ನೇ ಕಂತಿನ ಆಚರಣೆಯಂದು ಮಹಾರಾಷ್ಟ್ರ ರಾಜ್ಯ ಅರಣ್ಯ ಸಚಿವರು, ಪಾಲ್ಘರ್ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಥಾಣೆ ಜಿಲ್ಲಾ ಸಂಪರ್ಕ ಸಚಿವರಾದ ಗಣೇಶ್ ಜಿ. ನಾಯ್ಕ್ ಅವರು, ಹರೀಶ್ ಪೂಜಾರಿಯವರ ಜನಪರ ಕಾಳಜಿಯನ್ನು ಮೆಚ್ಚಿ, ಭಾರತೀಯ ಜನತಾ ಪಾರ್ಟಿಯ ಐರೋಲಿ ದಕ್ಷಿಣ ವಲಯದ ಅಧ್ಯಕ್ಷರನ್ನಾಗಿ ಹಾಗೂ ಮಂಡಲ ಅಧ್ಯಕ್ಷರನ್ನಾಗಿ ನೇಮಕ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹರೀಶ್ ಪೂಜಾರಿ, ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಅಧ್ಯಕ್ಷ ಜೆ. ಪಿ. ನಡ್ಡಾ, ರಾಜ್ಯ ಅಧ್ಯಕ್ಷ ರವೀಂದ್ರ ಚವಾಣ್ ಮಾರ್ಗದರ್ಶನದಲ್ಲಿ, ಅರಣ್ಯ ಸಚಿವರಾದ ಗಣೇಶ್ ಜಿ. ನಾಯಕ್ ಆದೇಶದ ಮೇರೆಗೆ ಮತ್ತು ಜಿಲ್ಲಾಧ್ಯಕ್ಷ ಡಾ. ರಾಜೇಶ್ ಪಾಟೀಲ್ ಶಿಫಾರಸಿನ ಮೇರೆಗೆ ನಾನು ದಕ್ಷಿಣ ವಲಯದ ಅಧ್ಯಕ್ಷನಾಗಿದ್ದೇನೆ. ಈ ನೇಮಕಾತಿಯು 2025 ರಿಂದ 2028 ರವರೆಗೆ ಅಥವಾ ಮುಂದಿನ ಚುನಾವಣೆಯವರೆಗೆ ಮುಂದುವರಿಯುವುದರಿಂದ ಪಕ್ಷದ ಸಿದ್ಧಾಂತ, ಗುರಿಗಳು ಮತ್ತು ನೀತಿಗಳಿಗೆ ಬದ್ಧಗಿ ಪಕ್ಷದ ಮುನ್ನಡೆಗೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸಂಸದ ಸಂಜೀವ್ ನಾಯಕ್, ಮೇಯರ್ ಸಾಗರ್ ನಾಯ್ಕ್, ಥಾಣೆ ಜಿಲ್ಲಾಧ್ಯಕ್ಷ ರಾಜೇಶ್ ಪಾಟೀಲ್, ಹಿರಿಯ ಕಾರ್ಪೊರೇಟರ್ ಅನಂತ್ ಸುತಾರ್, ಹಿರಿಯ ಕಾರ್ಪೊರೇಟರ್ ಅಶೋಕ್ ಪಾಟೀಲ್, ಗೌರವಾನ್ವಿತ ಕಾರ್ಪೊರೇಟರ್‌ಗಳಾದ ಸಂಗೀತಾ ಪಾಟೀಲ್, ಶಶಿಕಲಾ ಸುತಾರ್, ಐರೋಲಿ ಮಂಡಲದ ಮಾಜಿ ಅಧ್ಯಕ್ಷ ರಾಜೇಶ್ ಮಡ್ವಿ, ಹಿರಿಯ ಅಧಿಕಾರಿ ಅರುಣ್ ಪಡ್ತೆ ಹಾಗೂ ಸಹೋದ್ಯೋಗಿಗಳು ಉಪಸ್ಥಿತರಿದ್ದರು.

51ರ ಹರೆಯದ ಹರೀಶ್ ಪೂಜಾರಿ ಮೂಡುಬಿದ್ರೆ ಕಾರಿಂಜ ಗ್ರಾಮ ತಾಕೋಡೆಯ ಮಿತ್ತ ಪಂಜೊಟ್ಟು ಶಿವಯ್ಯ ಪೂಜಾರಿ ಮತ್ತು ರಾಜೀವಿ ಪೂಜಾರಿ ದಂಪತಿಯ ಪುತ್ರ. ಪತ್ನಿ ನಿಟ್ಟೆ 'ಸಿರಿ ಮೈಲಾಜೆ' ಸುರೇಖಾ ಹರೀಶ್ ಪೂಜಾರಿ, ಪುತ್ರಿ ಮಂಶಿಕಾ ಹರೀಶ್ ಪೂಜಾರಿಯವರೊಟ್ಟಿಗೆ ಐರೋಲಿ ಸೆಕ್ಟರ್ 15ರ ನಿವಾಸಿ. ಬಿಜೆಪಿಯಲ್ಲಿ ಮುಂಚೂಣಿಯ ಕಾರ್ಯಕರ್ತನಾಗಿ ದುರ್ಬಲರ, ಜನ ಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಬದ್ಧತೆಯಿಂದ ಪ್ರಯತ್ನಿಸುತ್ತಿರುವುದನ್ನು ಗುರುತಿಸಿ ಬಿಜೆಪಿಯು ಜವಾಬ್ದಾರಿಯುತ ಸ್ಥಾನವನ್ನು ನೀಡಿ ಗೌರವಿಸಿರುವುದು ಎಲ್ಲರಿಗೂ ಸಂತೋಷವಾಗಿದೆ.

# ಮಾಣಿಕ್ಯ ಪ್ರಕಾಶನ ಹಾಸನ: ದಶಮಾನೋತ್ಸವ ಸಂಭ್ರಮಕ್ಕೆ ಸರ್ವಾಧ್ಯಕ್ಷೆಯಾಗಿ ಸಾಹಿತಿ ವಾಣಿ ಶೆಟ್ಟಿ ಆಯ್ಕೆ

ಹಾಸನ, ಅ. 16- ಮಾಣಿಕ್ಯ ಪ್ರಕಾಶನ (ರಿ.) ಹಾಸನ ಇಲ್ಲಿ ನವೆಂಬರ್ 2ರ ಭಾನುವಾರ ನಗರದ ಸಂಸ್ಕೃತ ಭವನದಲ್ಲಿ ಹಮ್ಮಿಕೊಳ್ಳುವ ದಶಮಾನೋತ್ಸವ ಹಾಗೂ ರಾಜ್ಯಮಟ್ಟದ ಕವಿ-ಕಾವ್ಯ ಸಂಭ್ರಮದ ಸರ್ವಾಧ್ಯಕ್ಷೆಯಾಗಿ ಮುಂಬಯಿಯ ಸಾಹಿತಿ, ಸಂಘಟಕಿ ವಾಣಿ ಶೆಟ್ಟಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಪ್ರಕಾಶಕಿ ದೀಪಾ ಉಪ್ಪಾರ್ ತಿಳಿಸಿದ್ದಾರೆ.



ನಿಕಟಪೂರ್ವ ಸಂಭ್ರಮಗಳ ಸರ್ವಾಧ್ಯಕ್ಷರಾದ ಡಾ. ವಿಶ್ವೇಶ್ವರ ಎನ್. ಮೇಟಿ, ಡಾ. ಅಮರೇಶ್ ಪಾಟೀಲ, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್, ಸಾಹಿತಿಗಳಾದ ನಾಗರಾಜ್ ದೊಡ್ಡಮನಿ, ಡಾ. ಎಚ್. ಕೆ. ಹಸೀನಾ, ಎಚ್. ಎಸ್. ಬಸವರಾಜ್, ವಾಸು ಸಮುದ್ರವಳ್ಳಿ, ಡಾ. ಪಿ. ದಿವಾಕರ ನಾರಾಯಣ, ದೇಸು ಆಲೂರು ಅವರನ್ನೊಳಗೊಂಡ ಸಮಿತಿ ವಾಣಿ ಶೆಟ್ಟಿಯವರು ಹೊರನಾಡಿನಲ್ಲಿದ್ದುಕೊಂಡು ಕನ್ನಡ ಸಾಹಿತ್ಯ ಮತ್ತು ಸಂಘಟನೆಗೆ ಸಲ್ಲಿಸುತ್ತಿರುವ ಅನುಪಮ ಸೇವೆಯನ್ನು ಪರಿಗಣಿಸಿ ದಶಮಾನೋತ್ಸವದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ವಾಣಿ ಶೆಟ್ಟಿಯವರ ಪರಿಚಯ : ವಾಣಿ ಶೆಟ್ಟಿ ಮೂಲತಃ ಮೂಡಬಿದ್ರಿಯವರು. ತಂದೆ ವಾಸು ಶೆಟ್ಟಿ (ಕಾಪು) ಬಸರಿಕಟ್ಟೆ ಕಾಫಿ ಪ್ಲಾಂಟರ್, ತಾಯಿ ಸೀತಾ ಶೆಟ್ಟಿ ಪುನರ್‌ಗುತ್ತು. ಇವರ ಚೊಚ್ಚಲ ಕವನ ಸಂಕಲನ 'ಅಮ್ಮ' ಪ್ರಕಟಿತ ಕೃತಿ. ಕವನ, ಲೇಖನಗಳು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವಾಣಿ ಶೆಟ್ಟಿಯವರ ಸಾಹಿತ್ಯ ಬದುಕಿನ ಚಿತ್ರಣವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಲೇಖಕಿಯರ ಸಂಘ ಬೆಂಗಳೂರು ಸಂಯೋಜನೆಯಲ್ಲಿ 'ನನ್ನ ಕವಿತೆ ನನ್ನ ಹಾಡು' ಎಂಬ ಸಾಕ್ಷ್ಯಚಿತ್ರ ನಿರ್ಮಿತವಾಗಿದೆ. ಉಡುಪಿಯಲ್ಲಿ ನಡೆದ ವಿಶ್ವ ಬಹುಭಾಷಾ ಕವಿ-ಸಾಹಿತ್ಯ ಸಮ್ಮೇಳನ, ಮಂಗಳೂರು, ಬೆಳಗಾವಿ, ಧಾರವಾಡ, ಮಂಡ್ಯ, ವಾಪಿ ಸಹಿತ, ಕರ್ನಾಟಕ -ಮಹಾರಾಷ್ಟ್ರದ ವಿವಿಧೆಡೆ ಜರಗಿದ ಕವಿಗೋಷ್ಠಿಗಳಲ್ಲಿ ಇವರು ಭಾಗವಹಿಸಿದ್ದಾರೆ ಹಾಗೂ ಉಪನ್ಯಾಸಗಳನ್ನು ನೀಡಿದ್ದಾರೆ. ಈಗಾಗಲೇ ಕನಕ ಪ್ರಕಾಶನ ಬೆಳಗಾವಿ ನಡೆಸಿದ 'ಅಖಿಲ ಕರ್ನಾಟಕ ಪ್ರಥಮ ಕವಿ ಸಮ್ಮೇಳನ'ದಲ್ಲಿ ಕನಕ ಶ್ರೀ ಸಾಹಿತ್ಯ ಪ್ರಶಸ್ತಿ ಹಾಗೂ 'ಕನ್ನಡ ರತ್ನ ರಾಜ್ಯ ಪ್ರಶಸ್ತಿ', ಮಂದಾರ ಕಲಾವಿದರ ವೇದಿಕೆ (ರಿ.) ಬೀದರ್‌ನ 'ಕಾವ್ಯ ಪ್ರಭಾಂಜಲಿ' ಪ್ರಶಸ್ತಿ, ಮಾಣಿಕ್ಯ ಪ್ರಕಾಶನದ 'ಹೊಯ್ಸಳ ಸಾಹಿತ್ಯ ಪ್ರಶಸ್ತಿ', ಕಥಾ ಬಿಂದು ಪ್ರಕಾಶನದ 'ಭಾರತ ಕಲಾ ಭೂಷಣ' ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ 'ಕನ್ನಡ ನುಡಿಸಿರಿ ಪ್ರಶಸ್ತಿ' ಮಂಗಳೂರಿನ ಕಾವೂರು ಲಯನ್ಸ್ ಕ್ಲಬ್‌ನ 'ಸಾಹಿತ್ಯ ರತ್ನಾ' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ವಾಣಿಯವರು ಸಾಹಿತ್ಯವಲ್ಲದೆ ನಾಟಕ, ಯಕ್ಷಗಾನ, ತಾಳಮದ್ದಳೆ, ನೃತ್ಯಗಳಲ್ಲಿಯೂ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಗೂಗರ್ ಮೀಟ್‌ನಲ್ಲಿಯು ಕವಿಗೋಷ್ಠಿ, ನಿರೂಪಣೆಯನ್ನು ನಡೆಸಿಕೊಡುತ್ತಿದ್ದಾರೆ. ವೃತ್ತಿಯಲ್ಲಿ ಇವರು ಕೊಟಾಕ್‌ನಲ್ಲಿ ಕೆಲಸ ಹಾಗೂ ಜಾಹೀರಾತುಗಳಿಗೆ ಕಂಠ ಧ್ವನಿ ನೀಡುತ್ತಿದ್ದಾರೆ.

ಗೋರೆಗಾಂವ್ ಕರ್ನಾಟಕ ಸಂಘದ ರಂಗಸ್ಥಳದ ನಿರ್ದೇಶಕಿಯಾಗಿ, ಗೋರೆಗಾಂವ್ ಕರ್ನಾಟಕ ಸಂಘದ ಮಾಜಿ ಗೌ. ಪ್ರ. ಕಾರ್ಯದರ್ಶಿಯಾಗಿ, ಬಂಟರ ಸಂಘ ಮುಂಬಯಿಯ ಜೋಗೇಶ್ವರಿ-ದಹಿಸರ್ ಪ್ರಾದೇಶಿಕ ಸಮಿತಿಯ ಸದಸ್ಯೆ, ಸೃಜನ ಬಳಗದ ಮಾಜಿ ಗೌ. ಪ್ರ. ಕಾರ್ಯದರ್ಶಿ, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಹೊರನಾಡ ಘಟಕ ಮುಂಬಯಿ (ಮಹಾರಾಷ್ಟ್ರ) ಇದರ ಗೌ. ಪ್ರ. ಕಾರ್ಯದರ್ಶಿಯಾಗಿಯೂ ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರು ಮುಂಬಯಿಯ ಗೋರೆಗಾಂವ್‌ನಲ್ಲಿ ವಾಸಿಸುತ್ತಿದ್ದಾರೆ.

# ನವಿಮುಂಬಯಿ ಕನ್ನಡ ಸಂಘ ವಾಶಿ : ನೂತನ ಸಮಿತಿಯ ಆಯ್ಕೆ

## ಗೋಪಾಲ್ ವೈ. ಶೆಟ್ಟಿ ಅಧ್ಯಕ್ಷರಾಗಿ ಮೂರನೇ ಬಾರಿ ಅವಿರೋಧ ಆಯ್ಕೆ



ನವಿಮುಂಬಯಿ, ಅ. 16- ಕನ್ನಡ ಸಂಘ ವಾಶಿ ನವಿಮುಂಬಯಿ ಇದರ 2025-27 ಈ ಎರಡು ವರ್ಷಗಳ ಅವಧಿಗೆ ನೂತನ ಸಮಿತಿಯನ್ನು ಆಯ್ಕೆ ಮಾಡಲಾಗಿದೆ. ಅ. 6ರ ಸೋಮವಾರದಂದು ಸಂಘದ ಸಭಾಗೃಹದಲ್ಲಿ ನಡೆದ ವ್ಯವಸ್ಥಾಪಕ ಮಂಡಳಿಯ ಸಭೆಯಲ್ಲಿ ಗೋಪಾಲ್ ವೈ. ಶೆಟ್ಟಿ ಅವರನ್ನು ಮೂರನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಸಂಘದ ಕಾರ್ಯಾಧ್ಯಕ್ಷರಾಗಿ ಬಿ. ಹೆಚ್. ಕಟ್ಟಿ ಅವರನ್ನೂ ಮೂರನೇ ಅವಧಿಗೆ ಆಯ್ಕೆ ಮಾಡಲಾಯಿತು.

ಆಯ್ಕೆಯಾದ ಇತರ ಸದಸ್ಯರಿಗೆ ವಿವಿಧ ಜವಾಬ್ದಾರಿಗಳನ್ನು ಹಂಚಿ ಕೊಡಲಾಯಿತು. ಅದರಂತೆ ಉಪಾಧ್ಯಕ್ಷರಾಗಿ ಮಧುಸೂಧನ್ ಟಿ. ಆರ್., ಜಯರಾಮ್ ಶೆಟ್ಟಿ, ಸುಜಾತಾ ರಾವ್ ಮತ್ತು ಜ್ಯೋತಿ ಪ್ರಸಾದ್ ಅವರನ್ನು ಆಯ್ಕೆ ಮಾಡಲಾಯಿತು. ಜಗದೀಶ್ ಡಿ. ರೈ ಅವರನ್ನು ಕಾರ್ಯದರ್ಶಿಯನ್ನಾಗಿ, ಅನಿಲ್ ಕುಮಾರ್ ಹೆಗ್ಡೆ ಖಜಾಂಚಿಯಾಗಿ ಮತ್ತು ಅದ್ಯಪಾಡಿ ಬಾಲಕೃಷ್ಣ ಶೆಟ್ಟಿ ಉಪ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.

ಅದರಂತೆ ಸಂಘದ ಗ್ರಂಥಾಲಯದ ಮುಖ್ಯಸ್ಥ ವೈ. ವೈ. ಕೆಂಭಾವಿ, ಮಹಿಳಾ ವಿಭಾಗದ ಸಂಚಾಲಕರಾಗಿ ಸವಿತಾ ಜೋಯಿಷಾ, ಕಾರ್ಯಕ್ರಮ ಸಂಚಾಲಕರಾಗಿ ರಘು ಮೂಲ್ಯ ಅವರನ್ನು ಆಯ್ಕೆ ಮಾಡಲಾಯಿತು.

ಕಾರ್ಯಕಾರಿ ಸಮಿತಿಗೆ ನ್ಯಾಯವಾದಿ ಪ್ರಭಾಕರ್ ಎಸ್. ದೇವಾಡಿಗ, ಜಯ ಶೆಟ್ಟಿ, ನಾರಾಯಣ್ ಜಿ. ಪೂಜಾರಿ, ಭೋಜ ದೇವಾಡಿಗ, ಗೋಪಿ ರಾವ್, ಶ್ರೀಕಂಠಿ ಚಿನ್ನುಗಂಡೆ ಮತ್ತು ಚಂದ್ರಕಾಂತ್ ಸಾಲ್ಯಾನ್ ಅವರನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷ ಗೋಪಾಲ್ ವೈ. ಶೆಟ್ಟಿಯವರು ಆಯ್ಕೆಯಾದ ಎಲ್ಲಾ ಸದಸ್ಯರನ್ನು ಅಭಿನಂದಿಸಿದರು. ಅಲ್ಲದೆ ಸಂಘದ ಏಳಿಗೆಗಾಗಿ ಎಲ್ಲರೂ ಪರಿಶ್ರಮ ವಹಿಸಿ ಸಂಘದ ಚಟುವಟಿಕೆಗಳನ್ನು ಆದಷ್ಟು ಹೆಚ್ಚು ಪ್ರಮಾಣದಲ್ಲಿ ಮುಂದುವರಿಸುತ್ತಾ, ಸದಸ್ಯರಿಗೆ ಉತ್ತಮ ಸೇವೆ ನೀಡುವಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕೇಳಿಕೊಂಡರು. ಜೊತೆಯಲ್ಲಿ ಸಂಘದ ಕಟ್ಟಡ ಹಳೆಯದಾಗುತ್ತಿದ್ದು ಅದರ ಪುನರ್ನಿರ್ಮಾಣ ಮತ್ತು ಅದಕ್ಕೆ ಬೇಕಾಗುವ ಬಂಡವಾಳದ ಬಗ್ಗೆ ಚಿಂತನೆ ನಡೆಸುತ್ತಾ ಆ ದಿಶೆಯಲ್ಲಿ ಎಲ್ಲಾ ಸದಸ್ಯರು ಸೇರಿ ಕಾರ್ಯ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಹೋಗುವಂತೆ ಕೇಳಿಕೊಂಡರು. ಉಪ ಕಾರ್ಯದರ್ಶಿ ಅದ್ಯಪಾಡಿ ಬಾಲಕೃಷ್ಣ ಶೆಟ್ಟಿ ವಂದಿಸಿದರು.

# ಕರ್ನಾಟಕ ಸಂಘ ಖಾರ್ಘರ್: 19ನೇ ವಾರ್ಷಿಕ ಮಹಾಸಭೆ








ನವಿಮುಂಬಯಿ, ಅ. 16 - ಕರ್ನಾಟಕ ಸಂಘ ಖಾರ್ಘರ್ ಇದರ ಸ್ಥಾಪನಾ ದಿನ ಹಾಗೂ 19ನೇ ವಾರ್ಷಿಕ ಮಹಾಸಭೆಯು ಅ. 12 ರಂದು ಕೇಂದ್ರೀಯ ವಿಹಾರ ಹಾಲ್ ಸೆಕ್ಟರ್ 11, ಖಾರ್ಘರ್ ಇಲ್ಲಿ ಯೋಗೇಂದ್ರರಾಮ್ ಕೊಟ್ಟಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಾರ್ಷಿಕ ಮಹಾ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಯವರಾದ ಶೈಲೇಶ್ ಪುತ್ರನ್ ರವರು ವಾರ್ಷಿಕ ವರದಿಯನ್ನು ಸಲ್ಲಿಸಿದರು, ಹಾಗೂ ಕೋಶಾಧಿಕಾರಿ ಶೈಲ ಹರ್ಕಂಗಿಯವರು ವಾರ್ಷಿಕ ಲೆಕ್ಕ ಪತ್ರವನ್ನು ಮಂಡಿಸಿದರು.

ಸ್ಥಾಪನಾ ದಿನದ ಅಂಗವಾಗಿ ಲಲಿತಾ ಭಜನಾ ಮಂಡಳಿ ವತಿಯಿಂದ ಲಲಿತ ಸಹಸ್ರನಾಮ ಪಾರಾಯಣ ಕಾರ್ಯಕ್ರಮ ಜರಗಿತು.

ಇದೇ ಸಂದರ್ಭದಲ್ಲಿ ಮಹಿಳಾ ಸದಸ್ಯರಿಗೆ ಹಳದಿ ಕುಂಕುಮ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ವರ್ಷ ಹತ್ತು ಹಾಗು ಹನ್ನೆರಡನೇ ತರಗತಿಯಲ್ಲಿ ಶೇಕಡಾ 90 ಕ್ಕಿಂತ ಹೆಚ್ಚು ಅಂಕ ಗಳಿಸಿದ ಅರ್ಹ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಸಮಿತಿ ಸದಸ್ಯರಾದ ಪ್ರಕಾಶ ಪೈ ಯವರು ಎಲ್ಲರಿಗೂ ಧನ್ಯವಾದ ಸಮರ್ಪಿಸಿದರು.

# ಮಹಿಳೆಯರ ವಿಶ್ವಕಪ್: ಅಲಿಸಾ ಶತಕ; ಬಾಂಗ್ಲಾ ಮಣಿಸಿ ಸೆಮಿಫೈನಲ್‌ಗೇರಿದ ಆಸೀಸ್




ವಿಶಾಖಪಟ್ಟಣಂ, ಅ.16 - ಶಿಸ್ತುಬದ್ಧ ಬೌಲಿಂಗ್ ಪ್ರದರ್ಶನ ಬಳಿಕ ಆರಂಭಿಕ ಆಟಗಾರ್ತಿ ಮತ್ತು ನಾಯಕಿ ಅಲಿಸಾ ಹೀಲಿ ಅವರ ಅಜೇಯ ಶತಕ ನೆರವಿನಿಂದ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ಗುರುವಾರ ಇಲ್ಲಿ ನಡೆದ ಐಸಿಸಿ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಬಾಂಗ್ಲಾದೇಶವನ್ನು 10 ವಿಕೆಟ್‌ಗಳಿಂದ ಸೋಲಿಸಿತು. ಇದರೊಂದಿಗೆ ಆಸೀಸ್ ತಂಡ ಈ ಆವೃತ್ತಿಯಲ್ಲಿ ಸೆಮಿಫೈನಲ್‌ಗೆ ಪ್ರವೇಶಿಸಿದ ಮೊದಲ ತಂಡ ಎನಿಸಿತು. ಆಸೀಸ್ ಪಡೆ ಅಂಕಪಟ್ಟಿಯಲ್ಲಿ 9 ಅಂಕಗಳೊಂದಿಗೆ ಅಗ್ರ ಸ್ಥಾನದಲ್ಲಿದೆ.

ಬಾಂಗ್ಲಾದೇಶ ನೀಡಿದ 199 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಆಸ್ಟ್ರೇಲಿಯಾ, ನಾಯಕಿ ಹೀಲಿ (ಅಜೇಯ 113 ರನ್, 77 ಎಸೆತ, 20 ಬೌಂಡರಿ) ಮತ್ತು ಲಿಚ್‌ಫೀಲ್ಡ್ (ಔಟಾಗದೇ 84 ರನ್ , 72 ಎಸೆತ, 12 ಬೌಂಡರಿ, ಒಂದು ಸಿಕ್ಸರ್) ನಡುವಿನ ಮುರಿಯದ 202 ರನ್‌ಗಳ ಆರಂಭಿಕ ಜೊತೆಯಾಟದ ಮೂಲಕ ಇನ್ನೂ 151 ಎಸೆತಗಳು ಬಾಕಿ ಇರುವಾಗಲೇ ಆರಾಮದಾಯಕ ಗೆಲುವು ದಾಖಲಿಸಿತು.

ಇದಕ್ಕೂ ಮುನ್ನ ಎಲೆನಾ ಕಿಂಗ್ (18ಕ್ಕೆ 2), ಜಾರ್ಜಿಯಾ ವೇರ್‌ಹ್ಯಾಮ್ (22ಕ್ಕೆ 2), ಅನ್ನಾಬೆಲ್ ಸದರ್‌ಲ್ಯಾಂಡ್ (41ಕ್ಕೆ 2) ಮತ್ತು ಆಶ್ಲೀ ಗಾರ್ಡ್ನರ್(48ಕ್ಕೆ 2) ಅವರ ಚುರುಕಾದ ಬೌಲಿಂಗ್‌ನಿಂದ ಆಸ್ಟ್ರೇಲಿಯಾ ಎದುರಾಳಿ ಬಾಂಗ್ಲಾದೇಶವನ್ನು ಒಂಬತ್ತು ವಿಕೆಟ್‌ಗಳಿಗೆ 198 ರನ್‌ಗಳಿಗೆ ಸೀಮಿತ ಗೊಳಿಸಿತು. ಶೋಭನಾ ಮತ್ತು ರುಬಯಾ ಅವರ ಅತ್ಯುತ್ತಮ ಪ್ರದರ್ಶನದ ಹೊರತಾಗಿಯೂ, ಬಾಂಗ್ಲಾದೇಶದ ಇನ್ನಿಂಗ್ಸ್ ಎಂದಿಗೂ ಅಗತ್ಯವಾದ ವೇಗವನ್ನು ಪಡೆಯಲಿಲ್ಲ ಮತ್ತು ಏಳು ಬಾರಿಯ ಚಾಂಪಿಯನ್‌ಗಳ ವಿರುದ್ಧ ದೊಡ್ಡ ಮೊತ್ತವನ್ನು ಗಳಿಸುವಲ್ಲಿ ವಿಫಲವಾಯಿತು.

ರುಬಯಾ ಮತ್ತು ಫರ್ಗಾನಾ ಹಕ್ ಒಂಬತ್ತು ಓವರ್‌ಗಳಲ್ಲಿ 32 ರನ್‌ಗಳನ್ನು ಸೇರಿಸುವ ಮೂಲಕ ಬಾಂಗ್ಲಾದೇಶಕ್ಕೆ ಎಚ್ಚರಿಕೆಯ ಆರಂಭವನ್ನು ನೀಡಿದರು. ಮೇಗನ್ ಶುಟ್ (1/11) ಸ್ಲಿಪ್‌ನಲ್ಲಿ ಬೆತ್ ಮೂನಿ ಅವರಿಗೆ ಫರ್ಗಾನಾಗೆ ಕ್ಯಾಚ್ ನೀಡುವ ಮೂಲಕ ಆಸ್ಟ್ರೇಲಿಯಾಕ್ಕೆ ಮೊದಲ ಯಶಸ್ಸನ್ನು ನೀಡಿದರು. ರುಬಯಾ ಹೈದರ್ 59 ಎಸೆತಗಳಲ್ಲಿ 8 ಬೌಂಡರಿಯುಳ್ಳ 44 ರನ್ ಗಳಿಸಿದರೆ, ಶೋಭನಾ ಮೋಸ್ತ್ರೆ 80 ಎಸೆತಗಳಲ್ಲಿ 9 ಬೌಂಡರಿಗಳ ನೆರವಿನಿಂದ ಅಜೇಯ 66 ರನ್ ಗಳಿಸಿದರು. ಉಳಿದಂತೆ ಶರ್ಮಿನ್ 19 ರನ್, ನಾಯಕಿ ನಿಗರ್ ಸುಲ್ತಾನ 12 ರನ್ ಗಳ ಕಾಣಿಕೆ ನೀಡಿದರು.

## ವಿಶ್ವ ಜೂನಿಯರ್ ಬ್ಯಾಡ್ಮಿಂಟನ್: ಎಂಟರ ಘಟ್ಟಕ್ಕೆ ಜ್ಞಾನದತ್ತು, ತನ್ವಿ

ಗುವಾಹಟಿ, ಅ.16 - ಸ್ಫೂರ್ತಿಯುತ ಆಟ ಮುಂದುವರಿಸಿದ ಭಾರತದ ಉದಯೋನ್ಮುಖ ಆಟಗಾರ್ತಿಯರಾದ ತನ್ವಿ ಶರ್ಮಾ ಮತ್ತು ಉನ್ನತಿ ಹೂಡಾ ಅವರು ಬಿಡಬ್ಲ್ಯುಎಫ್ ವಿಶ್ವ ಜೂನಿಯರ್‌ಚಾಂಪಿಯನ್‌ಷಿಪ್‌ನಲ್ಲಿಗುರುವಾರ ಕ್ವಾರ್ಟರ್‌ಫೈನಲ್‌ಗೆ ದಾಪುಗಾಲಿಟ್ಟರು. ಬಾಲಕರ ಸಿಂಗಲ್ಸ್‌ನಲ್ಲಿ ಶ್ರೇಯಾಂಕರಹಿತ ಆಟಗಾರ ಜ್ಞಾನದತ್ತು ಟಿ.ಟಿ. ಸಹ ಎಂಟರ ಘಟ್ಟ ತಲುಪಿದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ತನ್ವಿ 15-8, 15-5 ರಿಂದ ಚೀನಾದ ಸನ್ ಲಿ ಯುವಾನ್ ಅವರನ್ನು ನೇರ ಗೇಮ್‌ಗಳಿಂದ ಮಣಿಸಿದರೆ, ಎಂಟನೆ ಶ್ರೇಯಾಂಕದ ಉನ್ನತಿ ಆರಂಭದಲ್ಲಿ ಒಂದಿಷ್ಟು ಪರದಾಡಿದರೂ ಬೇಗನೇ ಲಯಕ್ಕೆ ಮರಳಿ 15-10, 15-7 ರಿಂದ ಮಲೇಷ್ಯಾದ ಕೆರಿನ್ ಟೀ ವಿರುದ್ಧ ಗೆಲುವು ಸಾಧಿಸಿದರು.

ಎಂಟರ ಘಟ್ಟದ ಪಂದ್ಯದಲ್ಲಿ ತನ್ವಿ, ಜಪಾನ್‌ನ ಸಾಕಿ ಮಾತ್ಸುಮೊಟೊ ವಿರುದ್ಧ, ಉನ್ನತಿ, ಎರಡನೇ ಶ್ರೇಯಾಂಕದ ಅನ್ಯಪತ್ ಫಿಚಿಟ್‌ಪ್ರೀಚಸಕ್ (ಥಾಯ್ಲೆಂಡ್) ಅವರನ್ನು ಎದುರಿಸಲಿದ್ದಾರೆ. ಮೊದಲ ಬಾರಿ ಈ ಚಾಂಪಿಯನ್‌ಷಿಪ್‌ನಲ್ಲಿ ಆಡುತ್ತಿರುವ ಜ್ಞಾನದತ್ತು ಯಶಸ್ಸಿನ ಓಟ ಮುಂದುವರಿಸಿದ ಅಮೆರಿಕದ ಗರೆತ್ ತಾನ್ ಅವರನ್ನು 15-12, 15-13 ರಿಂದ ಸೋಲಿಸಿದರು. ಗರೆತ್ ಈ ಟೂರ್ನಿಯಲ್ಲಿ ಎಂಟನೆ ಶ್ರೇಯಾಂಕ ಪಡೆದಿದ್ದರು.

ಮಿಶ್ರ ಡಬಲ್ಸ್‌ನಲ್ಲಿ ಭವ್ಯಾ ಮತ್ತು ವಿಶಾಖ ಜೋಡಿ ಮೊದಲ ಗೇಮ್ ಸೋತರೂ ಚೇತರಿಸಿಕೊಂಡು 12-15, 15-11, 15-12 ರಿಂದೆ ಫ್ರಾನ್ಸ್‌ನ ಥಿಬಾಲ್ ಗಾರ್ಡನ್-ಅಥಾಥೆ ಕೆವಾಸ್ ಜೋಡಿಯನ್ನು ಸೋಲಿಸಿ ಕ್ವಾರ್ಟರ್‌ಫೈನಲ್ ತಲುಪಿತು.






## ಹೃದಯಾಂತರಾಳದ ಅಭಿನಂದನೆಗಳು



**ಶ್ರೀ ವೇಣುಗೋಪಾಲ್ ಎಲ್. ಶೆಟ್ಟಿ, ಕರಂಬಾರು ಪಡುಮನೆ**

ನೂತನ ಅಧ್ಯಕ್ಷರು : ಬಂಟರ ಸಂಘ ಬಜಪೆ

ಮಾಜಿ ಅಧ್ಯಕ್ಷರು : ಥಾಣೆ ಬಂಟ್ಸ್ ಎಸೋಸಿಯೇಶನ್

ಜನಪ್ರಿಯ ಉದ್ಯಮಿಯಾಗಿ, ಶ್ರೇಷ್ಠ ಸಮಾಜ ಸೇವಕರಾಗಿ, ಸಮರ್ಥ ಸಂಘಟಕರಾಗಿ, ಥಾಣೆ ಪರಿಸರದ ಬಂಟ ಸಮಾಜ ಬಾಂಧವರ ಆಶಾಕಿರಣವಾಗಿರುವ ಪ್ರತಿಷ್ಠಿತ ಥಾಣೆ ಬಂಟ್ಸ್ ಎಸೋಸಿಯೇಶನ್‌ನ ಅಧ್ಯಕ್ಷರಾಗಿ ಮೂರು ವರ್ಷ ಸೇವೆ ಸಲ್ಲಿಸಿದ ಹೆಗ್ಗಳಿಕೆಗೆ ಪಾತ್ರರಾಗಿ, ಬಂಟ ಸಮಾಜ ಬಾಂಧವರ ಮಾತ್ರವಲ್ಲ ಸಮಸ್ತ ಜಾತಿ -ಬಾಂಧವರೆಲ್ಲರಿಗೂ ಚಿರಪರಿಚಿತರಾಗಿ, ಎಲ್ಲರ ಪ್ರೀತಿ, ವಿಶ್ವಾಸ ಗೌರವಕ್ಕೆ ಪಾತ್ರರಾಗಿರುವ ತಾವು ಇದೀಗ ನಮ್ಮೂರ 'ಬಂಟರ ಸಂಘ ಬಜಪೆ' ಇದರ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವುದು ನಮ್ಮ ಸಂಪೂರ್ಣ ಕುಟುಂಬ ಪರಿವಾರಕ್ಕೆ ಸಂದ ಗೌರವಾಗಿದೆ ಹೆಮ್ಮೆಯ ವಿಷಯವಾಗಿದೆ ಎನ್ನಲು ಹೆಮ್ಮೆ ಎಂದೆನಿಸುತ್ತಿದೆ. ಈ ಸಂದರ್ಭದಲ್ಲಿ ತಮ್ಮನ್ನು ಅಭಿನಂದಿಸುತ್ತಾ, ನಿಮ್ಮ ಮುಂದಾಳತ್ವದಲ್ಲಿ ಸಂಘಟನೆ ಮತ್ತಷ್ಟು ಬಲಹಿತವಾಗಲಿ, ಸಮಾಜ ಬಾಂಧವರ ಕಣ್ಣೀರೊರೆಸುವ ಮಹತ್ತರ ಕಾರ್ಯಗಳು ನಡೆಯಲಿ, ನಿಮ್ಮ ಆರಾಧ್ಯ ದೇವರಾದ ತಿರುಪತಿ ತಿಮ್ಮಪ್ಪನ ಮತ್ತು ನಮ್ಮ ಕುಟುಂಬದ ಆರಾಧ್ಯ ದೈವವಾದ ಜುಮಾದಿ ಹಾಗೂ ಬಂಟ ಜುಮಾದಿಯ ಅನುಗ್ರಹ ಸದಾ ನಿಮ್ಮ ಜೊತೆಗಿರಲಿ ಎಂದು ಪ್ರಾರ್ಥಿಸುತ್ತಾ, ಶುಭವನ್ನು ಹಾರೈಸುತ್ತಿದ್ದೇವೆ .

**ಪೇಜಾವರ ಚಿಕ್ಕ ಪರಾರಿ ಕುಟುಂಬಸ್ಥರು**

## Uttarakriya



Birth: 15-06-1943

Death : 05-10-2025

**Mundkur Angadiguthu Melmane**

**Smt. Prema Bhoja Shetty (Maiyu)**

**(W/o Nandikoor Adve Late Shri Bhoja A. Shetty)**

**(D/o Late Shri Gudda Shetty and Late Smt. Devaki Shetty (Chikki)**

*Your presence with family is requested during the performance of UTTARAKRIYA for the salvation of her departed soul on Saturday, 18th October 2025 at 11.30 am at SRI PEJAWAR MUTT, 137, Prabhath Colony, Santacruz (East), Mumbai-400058.*

In Grief :

**Shri Shailesh B. Shetty** (Son)
**Smt. Sujatha S. Shetty** (Daughter-in-law)
**Shri Sandesh B. Shetty** (Son)
**Smt. Sharmila S. Shetty** (Daughter-in-law)
**Smt. Prasanna S. Shetty** (Daughter)
**Shri Shankar N. Shetty** (Son-in-law)
**Nityan, Diya, Krishni** (Grandchildren)
**Relatives & Friends**

*Resi. : 13, Great Western Bld, 2nd Floor, 130-132, S.B. Singh Road, Opp. Lion Gate, Fort, Mumbai-400001 Mob. : 9833893150*

## 2nd Year Remembrance



**Shri Shekhar Achanna Shetty**

**Kuthyaru Kenja Kelagina Mane "Mathoshree"**


Death: 17.10.2023

ನೀವು ನಮ್ಮನ್ನಗಲಿ ಇಂದಿಗೆ ವರುಷ ಎರಡು ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯಾತ್ಮದ ಚಿರಶಾಂತಿಗಾಗಿ ಪರಮಾತ್ಮನಲ್ಲಿ ಪ್ರಾರ್ಥಿಸುತ್ತಾ ಸದಾ ಸ್ಮರಿಸುತ್ತಿರುವ,

Karankila Bettu Smt. **Mohini Shekhar Shetty** (Wife)
**Madhuri & Dinesh Shetty** (Daughter & Son-In-Law)
**Sachin S. Shetty** (Son)
**Dimansh & Dimanth** (Grand Children)
**Family, Relatives & Friends**


## SHRI RAGHAVENDRA CATERS

ವತಿಯಿಂದ

**ದೀಪಾವಳಿಯ ಸಿಹಿ ಮತ್ತು ಖಾರ ತಿಂಡಿಗಳು**

ಪ್ರತೀ ವರ್ಷದಂತೆ ದೀಪಾವಳಿಯ ಪ್ರಯುಕ್ತ ಶುಚಿ ರುಚಿಯಾದ ಹಲವು ಬಗೆಯ ಸಿಹಿ ಮತ್ತು ಖಾರ ತಿಂಡಿಗಳನ್ನು ಅ. 16 ರಿಂದ ಅ. 22ರ ತನಕ ಬೆಳಿಗ್ಗೆ 9 ರಿಂದ ರಾತ್ರಿ 9 ರ ತನಕ **Vashi Bus Stand** ನ ಹಿಂಬದಿಯಲ್ಲಿರುವ ನವಿಮುಂಬಯಿ ಕನ್ನಡ ಸಂಘ, ವಾಶಿಯಲ್ಲಿ ಮಾರಾಟದ ವ್ಯವಸ್ಥೆಯನ್ನು ಮಾಡಲಾಗಿದೆ. ಗ್ರಾಹಕರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಸಂಪರ್ಕ : ಶ್ರೀ ಉದಯ ಭಟ್ ಮೊ. ನಂಬ್ರ : 9324903594 / 8080155775 / 7738181775 - email: udaybht@gmail.com

ವಿ.ಸೂ. ನಮ್ಮಲ್ಲಿ ಶುಚಿ, ರುಚಿಯಾದ ಅಡುಗೆ ಮತ್ತು ಧಾರ್ಮಿಕ ವಿಧಿ, ವಿಧಾನಗಳನ್ನು ಮಾಡಿಕೊಡುವ ವ್ಯವಸ್ಥೆಯೂ ಇದೆ.

**Contact : SHRI UDAYA BHAT**

**GHANSOLI:** Mariai Chowk Datta Nagar, Ghansoli Gav, Ghansoli, Navi Mumbai-701

**KOPARKHAIRANE:** 102, Ashiv C.H.S. Plot No.74, opp.Rly Stn, Sec-5, Koparkhairane, Navi Mumbai-709


## 5th Year Remembrance



D.O.B. 03.02.1949

Death: 17.10.2020

**Shri GOPAL M. MOILY**

**Nitte, Kemmannu Durga Prasad**

**Ex. President: Devadiga Sangha, Mumbai**

ನಮಗೆಲ್ಲಾ ಪೂಜ್ಯರಾಗಿ ಸಹೃದಯತೆಯ ನಡೆ-ನುಡಿಗಳಿಂದ ಕುಟುಂಬ -ಸಂಸಾರಕ್ಕೆ ಒಲವನ್ನು, ನಲಿವನ್ನು, ಬೆಳಕನ್ನು ನೀಡಿ, ಶ್ರೇಷ್ಠ ಸಂಸ್ಕಾರದೊಂದಿಗೆ ನಮಗೆಲ್ಲಾ ಮಾರ್ಗದರ್ಶಕರಾಗಿ, ಎಲ್ಲರ ಪ್ರೀತಿ, ಗೌರವಾದರಗಳಿಗೆ ಪಾತ್ರರಾಗಿ, ಸಾರ್ಥಕತೆಯ ಆದರ್ಶ ಜೀವನವನ್ನು ಬಾಳಿ, ನಮ್ಮೆಲ್ಲರನ್ನಗಲಿ ಇಂದಿಗೆ ವರುಷ ಐದು ಕಳೆದರೂ ನಿಮ್ಮ ಸವಿನೆನಪು ನಮ್ಮೆಲ್ಲರ ಮನದಲ್ಲಿ ಹಚ್ಚ ಹಸಿರಾಗಿಯೇ ಉಳಿದಿದೆ. ನಿಮ್ಮ ದಿವ್ಯ ಚೇತನಕ್ಕೆ ಚಿರಶಾಂತಿ ಸದ್ಗತಿಯನ್ನು ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ ಸದಾ ಸ್ಮರಿಸುತ್ತಿರುವೆವು,

*You have always been our source of inspiration and guidance.*
*Your presence will always remain in our hearts and thoughts.*

*Deeply Missed & Fondly Remembered By*

**Smt. Shanta Gopal Moily** (Wife)
**Mrs. Prashita J. Sherigar** (Daughter) (USA)
**Dr. Jagannath M. Sherigar** (Son-In-Law) (USA)
**Ashvita, Avnita, Anishka** (Grand Children)
**Vishwanath M. Moily** (Brother)
**Gunapal M. Moily** (Brother)
**Umesh Devadiga & Brother's** (Brothers-in-law)
**Family, Relatives & Friends**



ನಮ್ಮ ಸಮಾಜ ಬಾಂಧವರ ಆಶಾಕಿರಣವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವ ನಮ್ಮ

**ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ) ಮುಂಬಯಿ**

ಇದರ 2025 -27 ನೇ ಸಾಲಿಗೆ ಅವಿರೋಧವಾಗಿ ನೇಮಕಗೊಂಡಿರುವ ನಮ್ಮ ಪದಾಧಿಕಾರಿಗಳು ...


ಶ್ರೀ ಸುರೇಶ್ ಕಾಂಚನ್
ಗೌ. ಅಧ್ಯಕ್ಷರು


ಶ್ರೀ ಸಂತೋಷ್ ಕೆ.ಪುತ್ರನ್
ಅಧ್ಯಕ್ಷರು


ಶ್ರೀ ಮಹಾಬಲ ಕುಂದರ್
ಉಪಾಧ್ಯಕ್ಷರು


ಶ್ರೀ ರಮೇಶ್ ಬಂಗೇರ
ಉಪಾಧ್ಯಕ್ಷರು


ಶ್ರೀ ಗಣೇಶ್ ಮೆಂಡನ್
ಗೌ. ಪ್ರ.ಕಾರ್ಯದರ್ಶಿ


ಶ್ರೀ ಕೃಷ್ಣಮೂರ್ತಿ ನಾಯ್ಕ್
ಜೊತೆ ಕಾರ್ಯದರ್ಶಿ


ಶ್ರೀ ಅಶೋಕ್ ಮೆಂಡನ್
ಜೊತೆ ಕಾರ್ಯದರ್ಶಿ


ಶ್ರೀ ನಾಗರಾಜ್ ಶ್ರೀಯಾನ್
ಕೋಶಾಧಿಕಾರಿ


ಶ್ರೀ ಪ್ರವೀಣ್ ನಾಯಕ್
ಜೊತೆ ಕೋಶಾಧಿಕಾರಿ


ಶ್ರೀ ರಘುರಾಮ್ ಮೆಂಡನ್
ಕ್ರೀಡಾ ಕಾರ್ಯದರ್ಶಿ


ಶ್ರೀ ಸುನಿಲ್ ಕುಂದರ್
ಕ್ರೀಡಾ ಕಾರ್ಯದರ್ಶಿ


ಶ್ರೀ ಭಾಸ್ಕರ್ ಶ್ರೀಯಾನ್
ಕಾರ್ಯದರ್ಶಿ, ಕಾಂಚನೀ ಕಲಾಕೇಂದ್ರ ಮತ್ತು ವಾಗ್ವರ್ಧಿನಿ


ಶ್ರೀ ದಿನೇಶ್ ಮೊಗವೀರ
ಕ್ಯಾಪ್ಟನ್ ಸೇವಾದಳ


ಎನ್. ಎಚ್. ಬಗ್ವಾಡಿ
ಸದಸ್ಯರು


ಶ್ರೀ ರಾಜೇಂದ್ರ ಚಂದನ್
ಸದಸ್ಯರು


ಶ್ರೀ ಸುರೇಶ್ ತೋಳಾರ್
ಸದಸ್ಯರು


ಶ್ರೀ ಮಾಧವ ಸುವರ್ಣ
ಸದಸ್ಯರು


ಶ್ರೀ ಉದಯ್‌ಕುಮಾರ್ ಪುತ್ರನ್
ಸದಸ್ಯರು


ಶ್ರೀ ಸತೀಶ್ ಶ್ರೀಯಾನ್
ಸದಸ್ಯರು


ಶ್ರೀ ಮಂಜುನಾಥ್ ನಾಯ್ಕ್
ಸದಸ್ಯರು


ಶ್ರೀ ರಾಘವೇಂದ್ರ ಮೊಗವೀರ
ಸದಸ್ಯರು


ಶ್ರೀ ಉಮೇಶ್ ಮೊಗವೀರ
ಸದಸ್ಯರು


ಶ್ರೀ ರಾಜೀವ್ ನಾಯ್ಕ್
ಸದಸ್ಯರು


ಶ್ರೀ ರಾಘವೇಂದ್ರ ಚಂದನ್
ಸದಸ್ಯರು